ಪ್ರಾಚೀನ ಕನ್ನಡ ಸಾಹಿತ್ಯ
ಮತ್ತು
ನಾಡು–ನುಡಿ ಚಿಂತನೆ

ಡಾ. ಕಾ. ವೆಂ. ಶ್ರೀನಿವಾಸಮೂರ್ತಿ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
3ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು–560019.
ದೂರವಾಣಿ : 26615877, 26676773
ಇಮೇಲ್ : bmsritrust@gmail.com

PRACHEENA KANNADA KAVYA MATHU NADU-NUDI CHINTANE :
Literary Criticism by **Dr. K.V. SRINIVASA MURTHY,** Reader in Kannada, Bangalore University P.G. Centre, KOLAR-563101.
Residence: 'Akshara', No. 965, Chinnanna Layout, Kaval Byrasandra, BANGALORE-560032. Mob : 9343878368.
e-mail:kaavem@gmail.com website : www.kavemsri.com
Published by : **B.M.SRI Smaraka Prathistana,** 3rd main Road, Narasimharaja Colony, Bangalore-560019. 080-26615877

Single 1/8 Demy
First Impression : 2013
Pages : viii + 88
Copies : 500

Price : **Rs. 60/-**

DTP by : **M. Mahesh**
Kumuda Graphics, Bangalore-26.
Mobile : 9945814774

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
✆ ೨೬೬೧ ೩೧೨೩, ೨೬೬೧ ೮೭೫೨

ಮುಂಮಾತು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಮೂರು ದಶಕಗಳಿಗೂ ಮೀರಿದ ಅವಧಿಯಿಂದ ಕಾರ್ಯ ನಿರ್ವಹಿಸುತ್ತ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತ ಬಂದ ಸಂಸ್ಥೆ. ಇದರ ಬಗ್ಗೆ ನಾಡಿನ ಎಲ್ಲ ವಿದ್ವಾಂಸರೂ ಆದರಾಭಿಮಾನಗಳನ್ನು ಹೊಂದಿ ಸಂಸ್ಥೆಯೊಂದಿಗೆ ಸಹಕರಿಸುತ್ತಿದ್ದಾರೆ. ಹಾಗಾಗಿಯೇ ಅದರ ಪ್ರಕಟಣಕಾರ್ಯವೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ತಮ್ಮ ಹೊಚ್ಚ ಹೊಸ ಕೃತಿಗಳನ್ನು ಪ್ರಕಟಿಸಲು ನಮಗೆ ಅನುವುಮಾಡಿಕೊಡುತ್ತಿದ್ದಾರೆ.

ಪ್ರತಿಷ್ಠಾನದ ಮೂಲ ನೆಲೆ ಸಂಶೋಧನೆ. ಸಂಶೋಧನೆಯೆಂಬುದು ಹಿಂದಿನದನ್ನು ಕೆದಕುವುದಕ್ಕೆ ಮಾತ್ರ ಸೀಮಿತವಾದದ್ದೇನಲ್ಲ. ಎಲ್ಲ ಕಾಲದ ಸಂದರ್ಭ, ಸನ್ನಿವೇಶ, ಕೃತಿ, ಕಾರ್ಯ ಇವುಗಳಲ್ಲಿ ಅಂತರ್ಗತವಾದ ಸತ್ಯವನ್ನು ಗುರುತಿಸುವ ಕೆಲಸವೇ ಸಂಶೋಧನೆಯೆನ್ನಬಹುದೆಂದು ನನ್ನ ತಿಳಿವಳಿಕೆ. ಹಾಗಾಗಿ ಸಮಕಾಲೀನವಾದದ್ದರ ಬಗ್ಗೆಯೂ ಶಾಶ್ವತದ ಜೊತೆಗೆ ಸದ್ಯದ ಬಗ್ಗೆಯೂ ಸಂಶೋಧನೆ ನಡೆಯಬೇಕಾದುದು, ಆವಶ್ಯಕ. ಸಂಶೋಧನೆಯ ಅರ್ಥ ಹುಡುಕಾಟ ಎಂದಲ್ಲವೇ? ಆಗಲೇ ಹೇಳಿದಂತೆ 'ಸತ್ಯ'ವನ್ನು ಶೋಧಿಸುವುದು. ಆದರೆ ಸತ್ಯ ಎಂದರೇನೆಂಬುದನ್ನೇ ಯಾರೂ ಖಚಿತವಾಗಿ ನಿರ್ವಚಿಸಲಾಗುವುದಿಲ್ಲ! ಒಂದು ಕಾಲಕ್ಕೆ ಸತ್ಯ ಎನ್ನಿಸಿಕೊಳ್ಳುವಂಥದು ಮತ್ತೊಂದು ಕಾಲಕ್ಕೆ ಹಾಗೆ ಕಾಣದೇ ಹೋಗಬಹುದು; ಅಥವಾ ಒಬ್ಬ ವ್ಯಕ್ತಿಗೆ ಸತ್ಯವೆನಿಸಿದ್ದು ಮತ್ತೊಬ್ಬನಿಗೆ ಹಾಗನ್ನಿಸದೇ ಇರಬಹುದು; ಅಷ್ಟೇಕೆ, ಒಬ್ಬನೇ ವ್ಯಕ್ತಿಗೆ ಒಮ್ಮೆ ಸತ್ಯವೆನ್ನಿಸಿದುದು ಕಾಲ ಸರಿದಂತೆ ತನ್ನ ಅನಿಸಿಕೆಯ ಬಗ್ಗೆ ಅವನಿಗೆ ಅನುಮಾನವುಂಟಾಗ ಬಹುದು. ಅಂದರೆ ಸತ್ಯ ಎಂಬುದು ಅನಂತಮುಖಿ; ಅದಕ್ಕನುಗುಣವಾಗಿ ಸಂಶೋಧನೆಯೂ. ಹಳೆಯದನ್ನು ಹಾಗೂ ಹೊಸದನ್ನು ಹೊಸದೃಷ್ಟಿಯಿಂದ ನೋಡುವ, ವಿಶ್ಲೇಷಿಸುವ, ಪರಿಭಾವಿಸುವ, ವ್ಯಾಖ್ಯಾನಿಸುವ, ಅದರ ಪ್ರಸ್ತುತತೆಯನ್ನು ವಿವೇಚಿಸುವ ಎಲ್ಲ ಬೌದ್ಧಿಕ ಸಾಹಸಗಳೂ ಸಂಶೋಧನೆಗಳೇ.

ಇಂತಹ ಸಂಶೋಧನೆ ಹೆಚ್ಚಾಗಬೇಕು, ಅರಿಯುವ, ಬಗೆಯುವ ಪ್ರಕ್ರಿಯೆ ಮೊನಚಾಗಬೇಕು, ಆಳವಾಗಬೇಕು. ಅದಕ್ಕಾಗಿ ಹಿರಿಯರ ಮಾರ್ಗದರ್ಶನ ಬೇಕು, ಕಿರಿಯರ ಉತ್ಸಾಹಬೇಕು. ಪ್ರತಿಷ್ಠಾನವು ತಾನು ಆರಂಭಗೊಂಡ ಕಾಲದಿಂದ ಮೊದಲುಗೊಂಡ ಇಂತಹ ಕಾರ್ಯಗಳಿಗೆ ವೇದಿಕೆಯಾಗಿದೆ; ಉಪನ್ಯಾಸಗಳು, ವಿಚಾರ ಸಂಕಿರಣಗಳು, ಸಂವಾದಗಳು ಇವುಗಳ ಜೊತೆಗೆ ಎಂ.ಫಿಲ್ ಮತ್ತು ಪಿಎಚ್.ಡಿ ಅಭ್ಯರ್ಥಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನಗಳು, ಪುಸ್ತಕ ಪ್ರಕಟಣೆ ಇವುಗಳ

ಮೂಲಕ ಇಂಥ ಸಂಶೋಧನೆಗೆ ಪ್ರತಿಷ್ಠಾನವು ವೇದಿಕೆಯಾಗಿದೆ. ಈ ಕಾರ್ಯದಲ್ಲಿ ಎಲ್ಲರ ನೆರವು ಮತ್ತು ಪ್ರೋತ್ಸಾಹಗಳು ಆವಶ್ಯಕ.

ಪ್ರಸ್ತುತ, 'ಪ್ರಾಚೀನ ಕನ್ನಡ ಸಾಹಿತ್ಯ : ನಾಡು–ನುಡಿ ಚಿಂತನೆ' ಎಂಬ ಡಾ|| ಕಾ. ವೆಂ. ಶ್ರೀನಿವಾಸ ಮೂರ್ತಿಯವರ ಕೃತಿ ಓದುಗರಲ್ಲಿ ಕನ್ನಡದ ಬಗ್ಗೆ ಅರಿವು ಹೆಚ್ಚಿಸಬಲ್ಲದು, ನುಡಿಯ ಬಗ್ಗೆ ಆಳವಾಗಿ ಪರಿಭಾವಿಸಬಲ್ಲಂತೆ ಮಾಡಬಲ್ಲದು, ಹಾಗೂ ಕನ್ನಡಪ್ರೀತಿಯನ್ನು ಬೆಳಗಿಸಬಲ್ಲದು. ಲೇಖಕರಾಗಿ ಈಗಾಗಲೇ ಒಳ್ಳೆಯ ಹೆಸರನ್ನು ಮಾಡಿರುವ ಡಾ. ಮೂರ್ತಿಯವರು ಸ್ನಾತಕೋತ್ತರ ತರಗತಿಗಳಿಗೆ ಪಾಠಹೇಳುತ್ತ, ಬರೆಯುತ್ತ, ಮಾತನಾಡುತ್ತ ಕನ್ನಡದ ಕೆಲಸವನ್ನು ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದ್ದಾರೆ. ಅವರ ಕನ್ನಡಪ್ರೇಮವಂತೂ ಅನುಕರಣೀಯವೇ ಸರಿ. ಅದು ಕೇವಲ ಮಾತಾಗದೆ ಕನ್ನಡದ ಪರಿಧಿಯನ್ನು ಹಿಗ್ಗಿಸುವ ದಿಸೆಯಲ್ಲಿಯೂ ಕಾರ್ಯಶೀಲವಾದುದು. ತಮ್ಮ ಸೃಜನಾತ್ಮಕತೆಯಿಂದ ನಾಡುನುಡಿಗಳ ಬಗ್ಗೆ ಹಾಡು ಕಟ್ಟುತ್ತಾರೆ, ಚಿಂತನೆಯ ಮೂಲಕ ಆಲೋಚನೆಯನ್ನು ಹರಿತಗೊಳಿಸುತ್ತಾರೆ. ಅವರ ಈ ಕೃತಿಯನ್ನು ಪ್ರತಿಷ್ಠಾನವು ಪ್ರೀತಿಯಿಂದ ಹೊರತರುತ್ತಿದೆ; ಈ ಕೃತಿಯನ್ನು ಪ್ರಕಟಣೆಗೆ ನಮಗೆ ಒಪ್ಪಿಸಿದ್ದರಿಂದಾಗಿ ಪ್ರತಿಷ್ಠಾನ ಅವರಿಗೆ ಕೃತಜ್ಞವಾಗಿದೆ. ಓದುಗರು ಇದನ್ನು ಬರಮಾಡಿಕೊಳ್ಳುವರೆಂಬ ನಂಬಿಕೆ ನಮ್ಮದು.

ದಿನಾಂಕ : ೨೨–೭–೨೦೧೩ **ಡಾ|| ಪಿ. ವಿ. ನಾರಾಯಣ**

ಅಧ್ಯಕ್ಷರು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಲೇಖಕರ ಮಾತು

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ದಿನಾಂಕ ೨೪.೧೨.೨೦೧೨ ರಂದು ದತ್ತಿ ಉಪನ್ಯಾಸವೊಂದನ್ನು ಏರ್ಪಡಿಸಿ, ಅದರಲ್ಲಿ 'ಪಂಪನ ಕಾವ್ಯಗಳು ಮತ್ತು ನಾಡು–ನುಡಿ ಚಿಂತನೆ' ಎಂಬ ವಿಷಯವನ್ನು ಕುರಿತು ಮಾತನಾಡಲು ನನಗೆ ಆಹ್ವಾನವನ್ನು ನೀಡಿತು. ಇದಕ್ಕೆ ಕಾರಣಕರ್ತರು ಪ್ರತಿಷ್ಠಾನದ ಗೌರವ ಅಧ್ಯಕ್ಷರೂ, ಹಿರಿಯರೂ ಆದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು, ಗೌರವ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಮತ್ತು ಪ್ರೊ. ಜಿ. ಅಬ್ದುಲ್ ಬಷೀರ್ ಅವರು. ಇವರು ಆಹ್ವಾನವನ್ನು ನೀಡುತ್ತಲೇ ಮಾತನಾಡಿದ ವಿಷಯವನ್ನು ಕುರಿತ ವಿಸ್ತೃತ ಪ್ರಬಂಧವನ್ನು ನೀಡಲು ಸಹ ಹೇಳಿದರು. ಹಾಗಾಗಿ ಈ ಹಿಂದೆಯೇ ಬರೆದಿದ್ದ ಪ್ರಸ್ತುತ ಬರಹವನ್ನು ಇಲ್ಲಿ ನೀಡಿದ್ದೇನೆ. ಹೀಗಾಗಿ ಈ ಮೂವರಿಗೆ ಮೊದಲಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಖ್ಯಾತ ಸಾಹಿತಿಗಳೂ, ಪ್ರತಿಷ್ಠಾನದ ಈಗಿನ ಅಧ್ಯಕ್ಷರೂ ಆದ ಡಾ. ಪಿ.ವಿ. ನಾರಾಯಣ ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂತೆಯೇ ಈ ಉಪನ್ಯಾಸಕ್ಕೆ ದತ್ತಿನಿಧಿ ಸ್ಥಾಪಿಸಿದ ದಾನಿಗಳಿಗೂ ಮತ್ತು ಈ ಪುಸ್ತಿಕೆಯನ್ನು ಹೊರತರುತ್ತಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನಕ್ಕೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ದಿನಾಂಕ ೧೯.೭.೨೦೧೩ **ಕಾ. ವೆಂ. ಶ್ರೀನಿವಾಸಮೂರ್ತಿ**

ಪರಿವಿಡಿ

ಭಾಷೆ ಮತ್ತು ಸಂಸ್ಕೃತಿ

ವಾಸ್ತವವಾಗಿ ಭಾಷೆ ಮತ್ತು ಸಂಸ್ಕೃತಿಗಳಿಗೆ ನಿಯತ ಸಂಬಂಧವಿದೆ. ಒಂದನ್ನುಳಿದು ಇನ್ನೊಂದು ಪ್ರತ್ಯೇಕವಾದ ಅಸ್ತಿತ್ವವನ್ನು ಎಂದಿಗೂ ಪಡೆಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇವು ದೇಹ ಮತ್ತು ಪ್ರಾಣಗಳ ಸಂಬಂಧವನ್ನು ಪಡೆದಿವೆ.

ಇಲ್ಲಿ 'ನುಡಿ' ಎನ್ನುವಾಗ ಮುಖ್ಯವಾಗಿ ಮೌಖಿಕ ಪರಂಪರೆಯನ್ನು ಗಮನದಲ್ಲಿ ಇರಿಸಿಕೊಳ್ಳಲಾಗಿದೆ. ಲಿಪಿ ಹಾಗೂ ಮೌಖಿಕ ಅಭಿವ್ಯಕ್ತಿ ಪಡೆಯದ ಸಾಹಿತ್ಯವು ಅನೇಕ ಭಾಷೆಗಳಲ್ಲಿ ಇರುತ್ತದೆ. ಹೀಗೆ ಲಿಪಿಯಿಲ್ಲದ ನುಡಿ ಇರುವುದಾದರೂ ಭಾಷೆಯಿಲ್ಲದ ಸಂಸ್ಕೃತಿಯನ್ನು ಇಡೀ ಜಗತ್ತಿನ ಪರಿಧಿಯಲ್ಲಿ ಊಹಿಸಲೂ ಸಾಧ್ಯವಿಲ್ಲ. ಈ ನುಡಿಯೇ ಸಂಸ್ಕೃತಿಯ ಜೀವಂತಿಕೆಯ ಕುರುಹು. ಸಂಸ್ಕೃತಿಯ ಹಲವು ವ್ಯಕ್ತ ರೂಪಗಳಲ್ಲಿ ಒಂದಾಗಿರುವ ನುಡಿ ಆ ಹಿನ್ನೆಲೆಯಲ್ಲಿ ಅತ್ಯಂತ ಮುಖ್ಯವೂ ಆಗುತ್ತದೆ. ಈ ಸಂಗತಿಯನ್ನು ಹೆಚ್ಚು ಸ್ಪಷ್ಟಪಡಿಸಲು ಮನುಷ್ಯ ದೇಹವನ್ನು ರೂಪಕವನ್ನಾಗಿ ನೋಡಲಾಗುವುದು.

ಸಂಸ್ಕೃತಿಯ ಹಲವು ರೂಪಗಳಾದ ಕುಟುಂಬ, ವಿವಾಹ, ಆಚರಣೆಗಳೇ ಮೊದಲಾದ ಸಾಮಾಜಿಕ ಸಂಸ್ಥೆಗಳು; ಸರ್ಕಾರ, ಆಡಳಿತ, ಪ್ರಜೆ ಮುಂತಾದ ರಾಜಕೀಯ ಘಟಕಗಳು ಮತ್ತು ಕಲೆ, ನೃತ್ಯ, ಶಿಲ್ಪ ಮೊದಲಾದ ಸಾಂಸ್ಕೃತಿಕ ಆಯಾಮಗಳು ಮನುಷ್ಯ ದೇಹದ ವಿವಿಧ ಅಂಗಗಳನ್ನು ಪ್ರತಿನಿಧಿಸಿದರೆ, ದೃಗ್ಗೋಚರವಲ್ಲದ ಭಾಷೆ ಪ್ರಾಣವನ್ನು ಪ್ರತಿನಿಧಿಸುತ್ತದೆ. ಹೀಗೆ ಭಾಷೆಯ ಸಮಾನವಾದ ಪ್ರಾಣವು ದೇಹದಿಂದ ಬೇರ್ಪಟ್ಟಾಗ ಅದರ ಎಲ್ಲಾ ಅಂಗಗಳೂ ಸಾವನ್ನಪ್ಪುತ್ತವೆ. ಹೀಗಾಗಿ ಜೀವಿಯ ದೇಹದಲ್ಲಿ ಪ್ರಾಣಕ್ಕಿರುವ ಸ್ಥಾನ ನಾಡಿನ ವಿಷಯದಲ್ಲಿ ಆ ಭಾಷೆಗೆ ಒದಗುತ್ತದೆ.

ಈ ಹಿನ್ನೆಲೆಯಲ್ಲಿ ರಷ್ಯನ್ ಮಹಾ ಕಾದಂಬರಿಕಾರನಾದ ದಾಸ್ತಾವಸ್ಕಿಯು ತನ್ನ ದಿನಚರಿಯಲ್ಲಿ ಉಲ್ಲೇಖಿಸಿದ ಮಾತುಗಳು ಪ್ರಸ್ತುತವೆನಿಸುತ್ತವೆ. "ಭಾಷೆ ಎಂದರೆ ರಷ್ಯನ್ ಭಾಷೆಯಲ್ಲಿ 'ಜನತೆ' ಯೆಂದೂ ಅರ್ಥವಿದೆ........ ಭಾಷೆಯೆನ್ನುವುದು ಒಂದು ಜನತೆಯ ನುಡಿ ಮಾತ್ರವಲ್ಲ, ಆ ನುಡಿಯನ್ನು ಆಡುವ ಜನತೆಯೆಂದು ಹೇಳಲಾಗಿದೆ........ ಜನ ಮತ್ತು ಜನರ ಭಾಷೆ ಒಂದರ್ಥದಲ್ಲಿ ಅವಿಭಾಜ್ಯ. ಒಂದನ್ನು ತಿಳಿಯಲು ಮತ್ತೊಂದನ್ನು ತಿಳಿಯಲೇಬೇಕಾದ ಅನಿವಾರ್ಯತೆ ಇದೆ."[೧] ಈ ಮಾತುಗಳನ್ನು ರಷ್ಯನ್ ಭಾಷೆಯ ನಿಘಂಟಿನಲ್ಲಿ ಭಾಷೆ ಎಂಬ ಶಬ್ದಕ್ಕೆ ಇರುವ ಅರ್ಥವಂತಿಕೆಯನ್ನು ಗ್ರಹಿಸಿ ಬೆರಗಿನಿಂದ ಆಡಿದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಅವಿಭಾಜ್ಯ ಎನಿಸಿದ ಭಾಷೆ ಮತ್ತು ಸಂಸ್ಕೃತಿಗಳು ಅಂತಿಮವಾಗಿ ಏಕೀಭವಿಸಿ ಅತ್ಯಂತ ಉನ್ನತ ನೆಲೆಗೂ ಏರಿಬಿಡುತ್ತದೆ.

ಭಾಷೆ ಮತ್ತು ಸಂಸ್ಕೃತಿಗಳ ಪ್ರವರ್ತಕ ಮತ್ತು ಶಿಶುವಾದ ಮನುಷ್ಯ ಮತ್ತು ಅವನ ಸಂಸ್ಕೃತಿಯು ಜಗದ್ವ್ಯಾಪಿಯಾಗಿರುವ ಸಂದರ್ಭದಲ್ಲಿಯೇ ಪ್ರಾದೇಶಿಕವಾದ ವೈವಿಧ್ಯತೆಯನ್ನೂ ಪಡೆದಿದೆ. ಈ ನೆಲೆಯಲ್ಲಿ 'ಒಂದು ಸಂಸ್ಕೃತಿ'ಯ ಪರಿಕಲ್ಪನೆ ಜನ್ಮಧಾರಣ ಮಾಡುತ್ತದೆ. ಆದ್ದರಿಂದ ಒಬ್ಬ ಮನುಷ್ಯ ಒಟ್ಟು ಸಂಸ್ಕೃತಿಯಲ್ಲಿ ತನ್ನನ್ನು ಪ್ರತಿನಿಧಿಸಿಕೊಂಡಿರುವನಾದರೂ ತನ್ನ ವಿಕಾಸದ ನಿರ್ದಿಷ್ಟ ನೆಲೆಯಲ್ಲಿ ಮಾತ್ರ 'ಒಂದು ಸಂಸ್ಕೃತಿ' ಯೇ ಅತ್ಯಂತ ಗಮನಾರ್ಹವಾಗುತ್ತದೆ. ಆದ್ದರಿಂದ ಒಟ್ಟು ಸಂಸ್ಕೃತಿಯಲ್ಲಿ ಅಸಂಖ್ಯ ಸಂಸ್ಕೃತಿಗಳು ಮತ್ತು ಅವುಗಳದೇ ಆದ ಹಲವು ಭಾಷೆಗಳು ಪ್ರತ್ಯೇಕವಾಗಿ ಸಂಭವಿಸುತ್ತವೆ. ಇವುಗಳಿಗೆ ತಮ್ಮದೇ ಆದ ಪಾರಂಪರಿಕ ಸ್ಮೃತಿಗಳೂ ಇರುತ್ತವೆ. ಆದ್ದರಿಂದ ಈ ಒಂದೊಂದು ಸಂಸ್ಕೃತಿಯೂ ಒಂದೊಂದು ಭಾಷೆಯನ್ನು ಪ್ರಾಣವಾಗಿರಿಸಿಕೊಂಡು ಬೆಳೆಯುತ್ತಾ, ಪ್ರಾದೇಶಿಕ ಕಕ್ಷೆಗಳನ್ನು ವಿಸ್ತರಿಸಿಕೊಳ್ಳುತ್ತಾ ಸಾಗುತ್ತವೆ. ಈ ಪ್ರಕ್ರಿಯೆಯಲ್ಲಿ ಅದರ ಅಂತಃಸ್ಸತ್ವದ ವಕ್ತಾರನಾದ ಮನುಷ್ಯ ತನ್ನ ವಿಕಸನದ ಗತಿಶೀಲತೆಯಲ್ಲಿ ಭಾಷೆ-ಸಂಸ್ಕೃತಿಗಳನ್ನೂ ಹಾಸುಹೊಕ್ಕಾಗಿಸಿದ್ದಾನೆ. ಈ ಘಟ್ಟದಲ್ಲಿ ವಿಧವಿಧವಾಗಿ ಹೊಸರೂಪ ತಾಳುವ ಸಂಸ್ಕೃತಿಯು ಮುಖ್ಯವಾಗಿ ತನ್ನ ಭಾಷೆಯಲ್ಲಿ ಮಾತ್ರ ಸಮರ್ಥವಾದ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತದೆ. ಇದರ ಕ್ರಿಯಾಶಕ್ತಿಯಾಗಿ ಮನುಷ್ಯ ನಿಲ್ಲುತ್ತಾನೆ. ಈ ಕ್ರಿಯೆಯಲ್ಲಿ ತನ್ನ ಭಾಷೆ ಮತ್ತು ಸಂಸ್ಕೃತಿಗಳ ಪರವಾದ ಅಭಿಮಾನದ ವಿವಿಧ ನೆಲೆಗಳು ಸುಪ್ತವಾಗಿಯೋ, ವ್ಯಕ್ತವಾಗಿಯೋ ರೂಪುಧಾರಣೆ ಮಾಡುತ್ತವೆ. ಈ ಸಹಜ ಕ್ರಿಯೆ ತನಗೆ ತಾನೆ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಆದರೆ ಸಾಂದರ್ಭಿಕತೆಯ ಹಿನ್ನೆಲೆಯಲ್ಲಿ ಇದರಿಂದ ಒಳಿತೂ ಆಗಬಹುದು, ಕೆಡುಕೂ ಆಗಬಹುದು. ಅವುಗಳಲ್ಲಿ ಒಂದು ಅತಿರೇಕದ ನೆಲೆಗೆ ಹಿಟ್ಲರನ ನಾಡು-ನುಡಿಗಳ ಅಭಿಮಾನ ಸೂಕ್ತ ನಿದರ್ಶನವಾಗುತ್ತದೆ.

ಒಟ್ಟಾರೆಯಾಗಿ ಅಭಿನ್ನರೂಪಿ ಭಾಷೆ ಮತ್ತು ಸಂಸ್ಕೃತಿಯಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡ ಮನುಷ್ಯ ಪ್ರಜ್ಞೆಗೆ ಸೂಕ್ತ ಕನ್ನಡಿಯಾಗಿ, ಪ್ರಾಚೀನ ತಮಿಳಿನ ಒಂದು ಕಾವ್ಯ ಭಾಗ ಇಲ್ಲಿ ಪ್ರಸ್ತುತವಾಗುತ್ತದೆ.

> ನೆಲೆಗೊಂಡ ತಮಿಳೆ, ನಿನ್ನಿಂದ ನಾನಿರುವೆ, ದೇವತೆಗಳ
> ಔತಣದ ಅಮೃತವಿದೆಯೆಂದರೂ ಅದನೊಲ್ಲೆನು
>
> – ಕವಿ : ಪಲಪಟ್ಟಡೈ ಜೊಕ್ಕನಾಥ ಕವಿ
> ಕೃತಿ : ತಮಿಳ್ ಎಡುದೂದು

ಈ ಪದ್ಯಭಾಗವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ತಮಿಳು ಭಾಷೆ, ತಮಿಳು ಸಂಸ್ಕೃತಿ ಮತ್ತು ತಮಿಳು ಜನತೆ ಕ್ರಮವಾಗಿ 'ನೆಲೆಗೊಂಡ ತಮಿಳೆ, ನಿನ್ನಿಂದ ನಾನಿರುವೆ', 'ಅದನೊಲ್ಲೆನು' ಎಂಬ ಪದಗಳಲ್ಲಿ ವ್ಯಕ್ತವಾಗುತ್ತವೆ. ಜೊತೆಗೆ 'ನಿನ್ನಿಂದ ನಾನಿರುವೆ' ಎಂಬ ಅವಳ ಮಾತಿನಲ್ಲಿ ಅತ್ಯಂತ ಆಳವಾದ ಅರ್ಥವಿದೆ. ಅದೆಂದರೆ 'ನಿನ್ನಿಂದ ನಾನು' ಎನ್ನುವಾಗ ನಿನ್ನಿಂದ ಎನ್ನುವುದು ಭಾಷೆಯಾಗಿಯೂ ನಾನು ಎಂಬುದು ಸಂಸ್ಕೃತಿಯಾಗಿಯೂ ಧ್ವನಿಗೊಡುವುದನ್ನು ಲಕ್ಷಿಸಬೇಕು. ಹೀಗೆ ತಮಿಳಿನ ಸಂದರ್ಭದಲ್ಲಿ

'ಭಾಷೆ, ಸಂಸ್ಕೃತಿ ಮತ್ತು ಮನುಷ್ಯ' – ಈ ಅವಿನಾಭಾವ ಸಂಬಂಧವು ಪ್ರಾಚೀನ ಕಾಲದಲ್ಲಿಯೇ ವ್ಯಕ್ತಗೊಂಡಿರುವುದು ಇಂದಿಗೂ ಗಮನಾರ್ಹ ಸಂಗತಿ. ಈ ಹಿನ್ನೆಲೆಯಲ್ಲಿ 'ಒಂದು ಸಂಸ್ಕೃತಿ ಮತ್ತು ಅದರ ಭಾಷೆ' ಇವುಗಳ ಮಹತ್ವ ವೇದ್ಯವಾಗುತ್ತದೆ. ಈ ಚರ್ಚೆಯನ್ನು ಮತ್ತಷ್ಟು ವಿಸ್ತರಿಸಿದಾಗ ಮತ್ತೂ ಕೆಲವು ಆನುಷಂಗಿಕ ವಿಚಾರಗಳು ಬೆಳಕಿಗೆ ಬರುತ್ತವೆ.

ಈ ಪದ್ಯಭಾಗಕ್ಕೆ ಹಿನ್ನೆಲೆಯಾದ ಸನ್ನಿವೇಶ : ನಲ್ಲನಿಗೆ ಯಾವುದೋ ವಿಚಾರವನ್ನು ತಿಳಿಸಬೇಕೆನ್ನುವ ಕಡೆಯಲ್ಲಿ ನಲ್ಲೆ ಈ ರೀತಿ ನುಡಿಯುತ್ತಾಳೆ. "ನೀನೇ ನನ್ನ ಅಭಿಪ್ರಾಯವನ್ನು ಪೂರ್ಣ ಮಾಡುವುದಕ್ಕೆ ಯೋಗ್ಯತೆಯುಳ್ಳವನಾಗಿದ್ದಿಯೆ. ನೀನೇ ನನ್ನ ಕೊರತೆಯನ್ನು ತಕ್ಕ ರೀತಿಯಲ್ಲಿ ನಾಯಕನ ಬಳಿ ಎತ್ತಿ ಹೇಳುವುದಕ್ಕೆ ಸಾಧ್ಯ."[೨೧] ಈ ಮಾತಿನಲ್ಲಿ ಧ್ವನಿತವಾಗುವ ಸತ್ಯವೆಂದರೆ ಈಕೆ ತಮಿಳು ಸಂಸ್ಕೃತಿಯ ಅವಿಭಾಜ್ಯ ಭಾಗ. ಹಾಗಾಗಿ ತಮಿಳು ಭಾಷೆ ಈಕೆಗೆ ಅಂತರ್ಗತ ಅಥವಾ ತಮಿಳು ಭಾಷೆಯೇ ಇವಳು. ಈ ಅರ್ಥವಂತಿಕೆಯ ಹಿನ್ನೆಲೆಯಲ್ಲಿ ತನ್ನ ಭಾವನೆಗಳಿಗೆ ಅತ್ಯಂತ ಸಮರ್ಪಕವಾದ ಅಭಿವ್ಯಕ್ತಿ ತಮಿಳಿನಿಂದ ಮಾತ್ರ ಸಾಧ್ಯ. ಆದ್ದರಿಂದಲೇ ಈಕೆ ತಮಿಳಿನ ಮೂಲಕ ಸಂವಹನವನ್ನು ಸಾಧಿಸಲು ಯತ್ನಿಸುತ್ತಿರುವುದು. ಈ ಹಿನ್ನೆಲೆಯಲ್ಲಿಯೂ ಒಂದು ನಿರ್ದಿಷ್ಟ ಭಾಷೆ, ಜನ ಮತ್ತು ಸಂಸ್ಕೃತಿಗಳ ಪರಸ್ಪರಾವಲಂಬನದ ವಾಸ್ತವತೆ ಸಾಧಿಸುವ ಮಹತ್ತುಗಳ ಅರಿವು ಸಂವೇದ್ಯಗೊಳ್ಳುವುದು. ಈ ನಿಟ್ಟಿನಲ್ಲಿ ಚರ್ಚೆ ಮತ್ತೂ ಮುಂದುವರಿಯುತ್ತದೆ.

ಸಂಸ್ಕೃತಿಯೇ ಮನುಷ್ಯ ಕೇಂದ್ರಿತವಾದುದು. ಒಬ್ಬ ಮನುಷ್ಯ ಜೀವಿ ಕಣ್ಣು ತೆರೆಯುವುದು 'ಒಂದು ಭಾಷೆ' ಮತ್ತು 'ಒಂದು ಸಂಸ್ಕೃತಿ'ಯ ನೆಲೆಯಲ್ಲಿಯೇ. ಆದ್ದರಿಂದ ಅವನಿಗೆ ಪ್ರಾಥಮಿಕವಾಗಿ ಸಾಮಾನ್ಯ ಅಥವಾ ವಿಶಾಲ ಸಂಸ್ಕೃತಿ ಮತ್ತು ಭಾಷೆಗಳಿಗಿಂತಲೂ ತನ್ನ ಒಂದು ಸಂಸ್ಕೃತಿ ಮತ್ತು ಅದರ ಒಂದು ಭಾಷೆಯೇ ಮುಖ್ಯವಾಗುತ್ತದೆ. ಸಹಜವಾಗಿ ಅದರ ಬಗ್ಗೆ ಪ್ರೀತ್ಯಾದರಗಳು ಬೆಳೆದಿರುತ್ತವೆ. ಜನ್ಮ ಕೊಟ್ಟ ತಾಯಿಯಂತೆ ಒಂದು ನಿರ್ದಿಷ್ಟ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಗಳು ತಮ್ಮ ತೋಳ್ತೆಕ್ಕೆಯಲ್ಲಿ ತನ್ನನ್ನು ಪೋಷಿಸಿ ಬೆಳೆಸಿದ್ದರಿಂದ ಅವನ್ನು ಕುರಿತು ಯಾವುದಾದರೊಂದು ನೆಲೆಯಲ್ಲಿ ಮಾತನಾಡುತ್ತಾನೆ. ಅಂತಹ ನಿದರ್ಶನಗಳನ್ನು ಜಗತ್ತಿನ ಯಾವುದೇ ಭಾಷಾ ಸಾಹಿತ್ಯದಿಂದ ಹೆಕ್ಕಿ ತೆಗೆಯಬಹುದು. ಉದಾಹರಣೆಗೆ–

> 'ಸ್ವದೇಶೋ ಭುವನತ್ರಯ'[೨೨]
> (ನನಗೆ ನನ್ನ ದೇಶ ಮೂರೂ ಲೋಕ) –ಆದಿ ಶಂಕರಾಚಾರ್ಯ
>
> ಒಬ್ಬ ಮನುಷ್ಯ ತನ್ನ ದೇಶವನ್ನು ಏಕೆ ಪ್ರೀತಿಸುತ್ತಾನೆ? ಏಕೆಂದರೆ, ಅಲ್ಲಿ
> ರೊಟ್ಟಿ ಹೆಚ್ಚು ರುಚಿಯಾಗಿರುತ್ತದೆ. ಗಾಳಿ ಇನ್ನೂ ಸುಗಂಧವಾಗಿರುತ್ತದೆ,
> ದನಿಗಳು ಹೆಚ್ಚು ಶಕ್ತವಾಗಿ ಕೇಳುತ್ತವೆ, ಆಕಾಶ ಬೇರೆಡೆಗಿಂತ ಎತ್ತರವಾಗಿರುತ್ತದೆ,
> ನೆಲದ ಮೇಲೆ ನಡೆಯುವುದು ಇನ್ನೂ ಸುಲಭವಾಗಿರುತ್ತದೆ.
>
> –ಬರ್ಟೋಲ್ಟ್ ಬ್ರೆಕ್ಟ್

ಈ ಉಲ್ಲೇಖಗಳು ಅಭಿಮಾನದ ನೆಲೆಯಲ್ಲಿ ಅಭಿವ್ಯಕ್ತಿ ಪಡೆದಿವೆಯಾದರೂ ಅವುಗಳ ಆಳದಲ್ಲಿ ವೈಚಾರಿಕ ಸತ್ಯ ಅಡಕವಾಗಿರುವುದು ವೇದ್ಯವಾಗದೆ ಇರಲಾರದು. ಈ ಹಿನ್ನೆಲೆಯಲ್ಲಿ ಭಾಷೆ ಎಂಬುದು ಕೇವಲ ವ್ಯವಹಾರಕ್ಕಾಗಿ ಮಾತ್ರವಿರದೆ, ಒಂದು ಜನಾಂಗವನ್ನು ಸಂಸ್ಕಾರದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗುವುದಾಗಿರುತ್ತದೆ. ಆದ್ದರಿಂದ ಒಬ್ಬ ಮನುಷ್ಯ ಯಾವ ಕಾಲಕ್ಕೂ ತನ್ನ ಭಾಷೆ ಮತ್ತು ಸಂಸ್ಕೃತಿಗಳನ್ನು ಕಡೆಗಣಿಸಲಾಗುವುದಿಲ್ಲ. ಬದಲಿಗೆ ಮಗುವು ತಾಯಿಯ ಎದೆಯನ್ನು ಅವುಚಿಕೊಳ್ಳುವಂತೆ ತಾಯ್ನುಡಿಯನ್ನು ಅವುಚಿಕೊಂಡು, ಅದರಿಂದ ಜೀವದಾಯಕವಾದ ಹಾಲನ್ನು ಪಡೆಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಒಬ್ಬ ಮನುಷ್ಯ ತನ್ನ ಭಾಷೆ ಮತ್ತು ಸಂಸ್ಕೃತಿಯನ್ನು ಕಡೆಗಣಿಸುವುದೆಂದರೆ, ಅದು ತನ್ನ ಇಳಿಗಾಲದ ಪೂರ್ವ ಸೂಚನೆಯೇ ಆಗಿರುತ್ತದೆ. ಈ ಮಾತನ್ನು ಪೋಷಿಸುವ ಮಿಲ್ಟನ್ ಕವಿಯ ಒಂದು ಮಾತನ್ನು ಇಲ್ಲಿ ಗಮನಿಸಬಹುದು.

> I much more inclined to believe that the downfall of a domination and humiliation of its high estate will ensure when the essential rightness of language falls into disrepute[೪]

ಒಬ್ಬ ವ್ಯಕ್ತಿ ಯಾವುದೇ ಅನ್ಯ ಭಾಷೆಯ ಮೂಲಕ ತನ್ನ ಸಂವರ್ಧನೆಯನ್ನು ಕಾಣಬಹುದು. ಆದರೆ ತನಗೆ ತನ್ನ ಪರಿಸರದಿಂದ ದತ್ತವಾದ ಭಾಷೆಯ ಮೂಲಕ ಮುಟ್ಟುವ ಎಲ್ಲೆಯನ್ನು ಇತರೆ ಯಾವುದೇ ಭಾಷೆಯಿಂದ ಮುಟ್ಟಲು ಸಾಧ್ಯವಿಲ್ಲ. ಈ ಕ್ರಿಯೆ ತಮ್ಮ ದೇಶ ಭಾಷೆಯಲ್ಲಿ ಸುಲಭ ಸಾಧ್ಯವಾದರೆ, ಅನ್ಯ ಭಾಷೆಯಲ್ಲಿ ಕಷ್ಟಸಾಧ್ಯವೂ ಆಗಿ ನಿರೀಕ್ಷಿತ ನೆಲೆಯನ್ನು ಪರಿಣಾಮಕಾರಿಯಾಗಿ ತಲುಪುವುದು ಅನವಶ್ಯಕ ಶ್ರಮಕ್ಕೆ ಕಾರಣವಾಗುತ್ತದೆ. ಕಾರಣ, ತನ್ನ ಭಾಷೆ ಮತ್ತು ಸಂಸ್ಕೃತಿಗಳು ಅಭಿನ್ನವಾಗಿದ್ದು, ಆ ಜಾಯಮಾನದಲ್ಲಿ ಕಂಡ ನುಡಿಯ ಅರ್ಥ, ಸೊಬಗು, ಇಂಪು, ತೂಕ, ಹದ ಮೊದಲಾದವನ್ನು ತನ್ನ ಭಾಷೆಯಲ್ಲಿಯಂತೆ ನಿರಾಯಾಸವಾಗಿ ತನ್ನದಲ್ಲದ ಭಾಷೆಯಲ್ಲಿ ಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಒಬ್ಬ ಮನುಷ್ಯನಿಗೆ ಭಾಷೆ ಮತ್ತು ಸಂಸ್ಕೃತಿಗಳ ಸಂದರ್ಭದಲ್ಲಿ ಅದಕ್ಕಿಂತಲೂ ಮಿಗಿಲಾದ, ತನ್ನದಾದ 'ಒಂದು ಭಾಷೆ' ಮತ್ತು 'ಒಂದು ಸಂಸ್ಕೃತಿ'ಗಳ ಪರಿಕಲ್ಪನೆ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಮಹಾತ್ಮ ಗಾಂಧೀಜಿ ಅವರು ದೇಶ ಭಾಷೆಗಳ ವಿಷಯದಲ್ಲಿ ಆಡಿದ ಒಂದು ಮಾತು ಇಲ್ಲಿ ಮುಖ್ಯವಾಗುವುದು. "ಯಾರು ಎಷ್ಟೇ ಪರೋಪಕಾರ ಬುದ್ಧಿಯಿಂದ ಅಥವಾ ಉದಾರ ಬುದ್ಧಿಯಿಂದ ಯಾವ ತರಹದ ಸ್ವರಾಜ್ಯವನ್ನೇ ಕೊಡಲಿ, ನಮ್ಮ ತಾಯಂದಿರಾಡುವ ಭಾಷೆಯ ವಿಷಯದಲ್ಲಿ ನಮ್ಮ ಮನದಲ್ಲಿ ಆದರ ಬುದ್ಧಿಯಿಲ್ಲದಿದ್ದರೆ ನಾವು ನಿಜವಾದ ಸ್ವರಾಜ್ಯ ಭೋಗಿಗಳಾಗಲಾರೆವು."[೫] ಈ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೂ ಒಂದು ಸಂಗತಿಯೇನೆಂದರೆ, ಯಾವುದೇ ಒಂದು ನಿರ್ದಿಷ್ಟ ಭಾಷೆ ಮತ್ತು ಸಂಸ್ಕೃತಿಯ ಬಗೆಗೆ ಒಬ್ಬ ಮನುಷ್ಯ ಇಟ್ಟುಕೊಳ್ಳುವ ಸಹಜವಾದ ಪ್ರೀತಿ, ಆದರಗಳು ಅತಿರೇಕಕ್ಕೇರಿದರೆ ಅಥವಾ ಅಧಃಪತನಕ್ಕಿಳಿದರೆ ಆ ಭಾಷಾ-ಸಂಸ್ಕೃತಿಗಳ ಬೆಳವಣಿಗೆಯಲ್ಲಿಯೂ ಏರು

– ಪೇರುಗಳಾಗುತ್ತವೆ. ಈ ಎರಡು ಅತಿರೇಕದ ನೆಲೆಗಳನ್ನು ದುರಭಿಮಾನ ಮತ್ತು ನಿರಭಿಮಾನ ಎಂದು ಗುರುತಿಸಬಹುದು. ಆದ್ದರಿಂದ ಒಂದು ನಿರ್ದಿಷ್ಟ ಭೂಪ್ರದೇಶದ ಜನ ಸಮುದಾಯ ತಮ್ಮ 'ಭಾಷಾ– ಸಂಸ್ಕೃತಿ'ಗಳ ಕಿಟಕಿ, ಬಾಗಿಲುಗಳನ್ನು ತೆರೆದಿಟ್ಟು, ಅನ್ಯಭಾಷಾ– ಸಂಸ್ಕೃತಿಗಳ ತಂಗಾಳಿಯೊಂದಿಗೆ ಬೆಳೆಯಲು ಇಚ್ಛಿಸುತ್ತಾರೆ. ಹಲವು ಸಂದರ್ಭಗಳಲ್ಲಿ ಮತ್ತೂ ಕೆಲವರು ಕಿಟಕಿ, ಬಾಗಿಲುಗಳನ್ನಲ್ಲದೆ ಗೋಡೆಗಳನ್ನು ಕೆಡವಿ ಅನ್ಯಭಾಷಾ ಸಂಸ್ಕೃತಿಗಳ ಬಿರುಗಾಳಿಗೆ ತಮ್ಮ ಭಾಷಾ – ಸಂಸ್ಕೃತಿಯನ್ನು ಒಡ್ಡಿ, ಸ್ವಂತಿಕೆಯ ನಾಮಾವಶೇಷವನ್ನೂ ಮಾಡಿಕೊಳ್ಳುತ್ತಾರೆ. ಇಂತಹ ಚಾರಿತ್ರಿಕ ಸತ್ಯಗಳು ಜಗತ್ತಿನ ಹಲವು 'ಭಾಷಾ– ಸಂಸ್ಕೃತಿ' ಗಳ ಸಂದರ್ಭದಲ್ಲಿ ಗೋಚರಿಸಿವೆ.

ಈ ತಾತ್ವಿಕ ಹಿನ್ನೆಲೆಯಲ್ಲಿ ಕನ್ನಡ ನಾಡು ಮತ್ತು ನುಡಿಗಳ ಸಂಬಂಧದ ಸ್ವರೂಪವನ್ನು ಗ್ರಹಿಸಬೇಕಾಗಿದೆ. ಈ ನೆಲೆಯಲ್ಲಿ ಚರ್ಚಿತವಾದ 'ಸಂಸ್ಕೃತಿ' ಯ ಜಾಗದಲ್ಲಿ ಕನ್ನಡ ನಾಡು, 'ಭಾಷೆ'ಯ ನೆಲೆಯಲ್ಲಿ ಕನ್ನಡ ನುಡಿ ಮತ್ತು ಅವುಗಳ ಶಿಶುವಾದ 'ಮನುಷ್ಯ'ನ ಜಾಗದಲ್ಲಿ 'ಕನ್ನಡಿಗ' ನನ್ನು ಇಟ್ಟು ನೋಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಚರ್ಚೆಯು ಜಾಗತಿಕ ನೆಲೆಯಿಂದ ಕನ್ನಡದ ಪ್ರಾದೇಶಿಕ ನೆಲೆಗೆ ಜಾರಿದಂತಾಗುತ್ತದೆ. ಈ ತಾತ್ವಿಕತೆಯಲ್ಲಿ 'ಕನ್ನಡ ನಾಡಿಗೆ ಕನ್ನಡವೇ ಗತಿ' ಯಾಗುತ್ತದೆ. ಕನ್ನಡಿಗನಿಗೆ ಕನ್ನಡವೇ ಮತಿಯಾಗುತ್ತದೆ. ಒಟ್ಟಾರೆಯಾಗಿ ಕನ್ನಡ ಸಂಸ್ಕೃತಿಯ ವಿಕಾಸ ಕನ್ನಡ ಭಾಷೆಯಿಂದ ಮಾತ್ರ ಸಾಧಿತಗೊಳ್ಳುವ ಸತ್ಯ ಎಂಬುದು ಅರಿವಾಗುತ್ತದೆ. ಅದನ್ನು ಭೀಮ ಕವಿ ಸೂಕ್ತವಾದ ರೀತಿಯಲ್ಲಿಯೇ ಹೀಗೆ ಅಭಿವ್ಯಕ್ತಿಸುತ್ತಾನೆ.

> ಲೇಸೆನಿಪ ಕನ್ನಡ ಭಾಷೆಯೆಂದೆನಲಾಗದಿಳೆಗಿದು
> ಲೇಸೆನಿಪ ವೇದ ಪ್ರಮಾಣದ ಭಾಷೆಯೆನಿಪುದು॥[೬]

* * *

ನಾಡು ಎಂಬುದು ಒಂದು ನಿರ್ದಿಷ್ಟ ಸಾಂಸ್ಕೃತಿಕ ಭೌಗೋಳಿಕ ವಲಯ. ಕನ್ನಡದ ಸಂದರ್ಭದಲ್ಲಿ ಪರಂಪರೆಯ ಉದ್ದಕ್ಕೂ ನೂರಾರು ನಾಡುಗಳು ಇರುವುದು ವೇದ್ಯವಾಗುತ್ತವೆ. ಉದಾಹರಣೆಗೆ, ಪಂಪನ ಕಾಲಕ್ಕೆ ಬನವಾಸಿ ನಾಡು, ಅನಂತರದ ಬೆಳುವೊಲ ನಾಡು, ಕೆಳದಿ ನಾಡು, ತುಳುನಾಡು, ಮಲೆನಾಡು, ಯಲಹಂಕ ನಾಡು, ನೊಳಂಬ ದೇಶ ಇತ್ಯಾದಿ. ಇವು ವಿಶಿಷ್ಟ ಸಂಸ್ಕೃತಿಯ ಹಿನ್ನೆಲೆಯಿಂದ ಕೂಡಿದ್ದಿರಬಹುದು ಅಥವಾ ಒಂದು ಪ್ರಭುತ್ವದ ನಿರ್ದಿಷ್ಟ ಭೂವಲಯವಿರಬಹುದು ಅಥವಾ ತನ್ನದೇ ಆದ ಮೇರೆಗಳನ್ನು ನಿರ್ಮಿಸಿಕೊಂಡಿದ್ದ ಪ್ರಾಕೃತಿಕ ವಲಯವೂ ಆಗಿರಬಹುದು ಅಥವಾ ಏಕಕಾಲಕ್ಕೆ ಇವೆಲ್ಲವೂ ಒಂದೇ 'ನಾಡಿ'ನಲ್ಲಿ ಪರಿಣಮಿಸಿಯೂ ಇರಬಹುದು. ಇದು ಖಚಿತವಾಗಿ ವಸಾಹತುಪೂರ್ವದ ನಾಡಿನ ಕಲ್ಪನೆ.

ಆದರೆ ಭಾರತಕ್ಕೆ ಬ್ರಿಟಿಷರ ಆಗಮನವಾಗಿ, ಅವರಿಂದ ಇಲ್ಲಿ ವಸಾಹತುಶಾಹಿ ಸಂಸ್ಕೃತಿ ಮೈತಾಳಿದಾಗ, ಈ ನಾಡಿನ ಕಲ್ಪನೆ ಮಹತ್ತರ ತಿರುವನ್ನು ಪಡೆಯುತ್ತದೆ. ವಸಾಹತು ಕಾಲದಲ್ಲಿ ಕಾಣಿಸಿಕೊಂಡ ಹಲವು ನೂತನ ಕಲ್ಪನೆಗಳಲ್ಲಿ ಒಂದಾದ ಇದು

ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ನಡೆದ ಕರ್ನಾಟಕ ಏಕೀಕರಣ ಚಳವಳಿಯ ತೀವ್ರತೆಯಲ್ಲಿ ಜಾಗೃತಗೊಳ್ಳುತ್ತದೆ. ಈಗಾಗಲೇ ಇದ್ದ ಈ ಪ್ರಾಚೀನ 'ನಾಡಿ'ನ ಕಲ್ಪನೆ ಇಲ್ಲಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತದೆ. ಉದಾಹರಣೆಗೆ, ದಕ್ಷಿಣ ಭಾರತದ ಸಂದರ್ಭದಲ್ಲಿ 'ಕನ್ನಡ' ನಾಡು, 'ತಮಿಳು' ನಾಡು, 'ತೆಲುಗು' ನಾಡು ..... ಹೀಗೆ.

ಹೀಗೆ ಭಾರತೀಯ ಪರಂಪರೆಯ ಉದ್ದಕ್ಕೂ ಮುಖ್ಯವಾಗಿ ಸಾಂಸ್ಕೃತಿಕ ಪರಿಕಲ್ಪನೆಯಾಗಿ ಉಳಿದು ಬಂದಿದ್ದ 'ನಾಡು' ಎಂಬುದು ಇಪ್ಪತ್ತರ ಶತಮಾನದಲ್ಲಿ ರಾಜಕೀಯ ಛಾಯೆಯನ್ನು ಪಡೆಯುತ್ತದೆ. ಆದ್ದರಿಂದ ಭೂವೈಶಾಲ್ಯತೆ ಮತ್ತು ರಾಜಕೀಯ ನೆಲೆ – ಈ ಎರಡೂ ಮೇಳೈಸಿದ ಸಾಂಸ್ಕೃತಿಕ 'ನಾಡು' ಹೊಸ ವಿನ್ಯಾಸದಲ್ಲಿ ಕಾಣಿಸಿಕೊಳ್ಳತೊಡಗುತ್ತದೆ.

ಹೀಗೆ ಸಾವಿರ ವರ್ಷಗಳಿಗೂ ಮೀರಿದ ಚರಿತ್ರೆಯನ್ನು ಹೊಂದಿರುವ 'ನಾಡು' ಎಂಬ ಪರಿಕಲ್ಪನೆ ಕರ್ನಾಟಕದ ಸಂದರ್ಭದಲ್ಲಿ ಕೂಡ ಇದೇ ರೀತಿಯಲ್ಲಿ ವಿಕಸನ ಹೊಂದಿ ಬಂದಿದೆ. ಇದು ನಾನು ಗ್ರಹಿಸಿರುವ ಕ್ರಮವೂ ಹೌದು.

ಈ ಹಿನ್ನೆಲೆಯಲ್ಲಿ ಕನ್ನಡ ಪರಂಪರೆಯ ಕವಿಗಳು ನಾಡನ್ನು ಗ್ರಹಿಸಿರುವ ಕ್ರಮ, ಅದು ಅವರಿಗೆ ಕಂಡ ಬಗೆಯನ್ನು ಚರ್ಚಿಸಲಾಗಿದೆ. ಇಂತಹ ಅಭಿವ್ಯಕ್ತಿಯ ಚರ್ಚೆಯನ್ನು ಅವರ ಅಭಿಮಾನದ ಚಿಂತನೆಯ ವಿವಿಧ ನೆಲೆಗಳಲ್ಲಿ ನಿರ್ವಚಿಸಲಾಗಿದೆ.

ನುಡಿ ಎಂಬುದು ಒಂದು ನಾಡಿನ ಜೀವದ್ರವ್ಯ. ಇದಿಲ್ಲದೆ ನಾಡಿನ ಅಸ್ತಿತ್ವ ಇಲ್ಲ. ಈ ಚರ್ಚೆ ಕರ್ನಾಟಕದ ಸಂದರ್ಭದಲ್ಲಿ ಕನ್ನಡವನ್ನು ಮುಖ್ಯವಾಗಿ ಗುರುತಿಸಿದೆ. ಆದ್ದರಿಂದ ಕನ್ನಡ ನಾಡು ಎಂದಾಗ ಅದರ ಪ್ರಾಣರೂಪಿಯಾಗಿ ಕನ್ನಡ ನುಡಿ ಮೊದಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಒಟ್ಟು ಅಧ್ಯಯನವು 'ಕನ್ನಡ ನಾಡು–ನುಡಿ–ಕನ್ನಡಿಗ' ಇವುಗಳ ಅನ್ಯೋನ್ಯ ಸಂಬಂಧದ ನೆಲೆಯಲ್ಲಿಯೇ ಸಾಗುತ್ತದೆ.

ಅಡಿಟಿಪ್ಪಣಿಗಳು

೧. ಸುಜನಾ (ಸಂ.), ಸಾಪ್ತಾಹಿಕ ಪ್ರಭ, ಪು. ೧, ಕನ್ನಡಪ್ರಭ, ೮.೯.೧೯೯೬.

೨. ಮು. ವರದರಾಜನ್ (ಸಂ.), ತಮಿಳು ಸಾಹಿತ್ಯ ಚರಿತ್ರೆ, (ಅನು: ಎಲ್. ಗುಂಡಪ್ಪ), ಪು. ೧೫೩, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೮೦.

೨.೧ ಅದೇ,

೨.೨. ಅದೇ,

೩. ಎಲ್.ಎಸ್. ಶೇಷಗಿರಿರಾವ್ (ಸಂ.), ಕನ್ನಡ ತಾಯಿಗೆ ನುಡಿ ನಮನ, ಪು. V, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩.

೪. ಅದೇ, ಪು. V.

೫. ಶಂಬಾ ಜೋಶಿ (ಸಂ.), ಕಂನುಡಿಯ ಹುಟ್ಟು, ಪು. ೨, ಸಮಾಜ ಪುಸ್ತಕಾಲಯ, ಧಾರವಾಡ, ೧೯೪೫.

೬. ಎಲ್.ಎಸ್. ಶೇಷಗಿರಿರಾವ್ (ಸಂ.), ಪೂರ್ವೋಕ್ತ.

ಕವಿರಾಜಮಾರ್ಗ ಮತ್ತು ನಾಡು-ನುಡಿ ಜಿಜ್ಞಾಸೆ

ಕನ್ನಡ ನಾಡು ಮತ್ತು ನುಡಿಯ ದೃಷ್ಟಿಯಿಂದ 'ಕವಿರಾಜಮಾರ್ಗ'ದ ಚಿಂತನೆಗಳನ್ನು ಎರಡು ಪ್ರಮುಖ ನೆಲೆಗಳಲ್ಲಿ ಚರ್ಚಿಸಬಹುದು.

೧. ಸಾಹಿತ್ಯಕ ನೆಲೆ

೨. ಸಾಂಸ್ಕೃತಿಕ ನೆಲೆ

೧. ಸಾಹಿತ್ಯಕ ನೆಲೆ: ಶ್ರೀವಿಜಯನಿಂದ ರಚಿಸಲ್ಪಟ್ಟ 'ಕವಿರಾಜಮಾರ್ಗ'ದ ಕಾಲ ಕ್ರಿ.ಶ. ೯ನೆಯ ಶತಮಾನದ ಉತ್ತರಾರ್ಧ. ಇದು ಕನ್ನಡದ ಮೊಟ್ಟ ಮೊದಲ ಉಪಲಬ್ಧ ಕೃತಿ. ಇದರ ವಸ್ತು ವಿನ್ಯಾಸ ಅಲಂಕಾರಗಳ ವಿವೇಚನೆ. ಕಾವ್ಯದೋಷ, ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಮೂರು ಪರಿಚ್ಛೇದಗಳಲ್ಲಿ ಚರ್ಚಿಸುವ ಪೂರ್ವ ಭಾಗದಲ್ಲಿ ಹಲವು ಮಹತ್ತರ ಸಾಹಿತ್ಯಕ ವಿವರಗಳನ್ನು ಕೃತಿಕಾರ ಕಟ್ಟಿಕೊಡುತ್ತಾನೆ. ಈ ವಿವರಗಳು ಇಂದಿಗೂ ಅಜ್ಞಾತವಾಗಿ ಉಳಿದಿರುವ ಪಂಪಪೂರ್ವ ಕಾಲದ ಕನ್ನಡ ಸಾಹಿತ್ಯ ಲೋಕಕ್ಕೆ ಬೆಳಕನ್ನು ನೀಡುವಲ್ಲಿ ಸಹಾಯಕವಾಗಿವೆ. ಅದರಲ್ಲಿ ಗದ್ಯ ಕವಿಗಳಾದ ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಹಾಗೂ ಪದ್ಯ ಕವಿಗಳಾದ ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ - ಇವರನ್ನು ಹೆಸರಿಸುತ್ತಾನೆ. ಆದರೆ ಅವರಿಂದ ರಚಿಸಲ್ಪಟ್ಟ ಕೃತಿಗಳ ವಿವರ ಲಭ್ಯವಿಲ್ಲ. ಅಂತೆಯೇ ಬಳಕೆಯಿಂದ ತಪ್ಪಿಹೋಗಿರುವ ಬೆದಂಡೆ ಮತ್ತು ಚತ್ತಾಣಗಳೆಂಬ ಅಚ್ಚಗನ್ನಡದ ಕಾವ್ಯ ಪ್ರಬೇಧಗಳನ್ನು ಸಹ ಪ್ರಸ್ತಾಪಿಸುತ್ತಾನೆ.

ಹೀಗೆ ಕವಿರಾಜಮಾರ್ಗಕಾರನು ಕನ್ನಡ ಸಾಹಿತ್ಯದ ಆರಂಭದ ಘಟ್ಟದ ಬಗೆಗಿನ ಚರ್ಚೆಯಲ್ಲಿ ಈ ಮಹತ್ತರ ವಿವರಗಳನ್ನು ನೀಡುವ ಮೂಲಕ ವಿಶಿಷ್ಟ ಪಾತ್ರವನ್ನು ನಿರ್ವಹಿಸುತ್ತಾನೆ.

'ಕವಿರಾಜಮಾರ್ಗ'ದ ರಚನೆಯ ಕಾಲಕ್ಕೆ ಸಂಸ್ಕೃತ ಸಾಹಿತ್ಯವು ಕನ್ನಡಕ್ಕಿಂತ ಉಜ್ವಲ ಪರಂಪರೆಯನ್ನು ಹೊಂದಿತ್ತು. ವಾಲ್ಮೀಕಿ, ವ್ಯಾಸ, ಗುಣಸೂರಿ, ಭಟ್ಟನಾರಾಯಣ, ಭಾರವಿ, ಕಾಳಿದಾಸ, ಮಾಘ ಮೊದಲಾದ ಕವಿಗಳು ಆ ಹೊತ್ತಿಗಾಗಲೇ ಆ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರು. ಇದರಲ್ಲಿ ಕಾವ್ಯ ಮತ್ತು ಶಾಸ್ತ್ರ - ಎರಡೂ ಪ್ರಭೇದಗಳು ಸಮೃದ್ಧವಾಗಿದ್ದವು. ಇವು ಲಿಖಿತ ಪರಂಪರೆಯಲ್ಲಿ ದೇಸಿ-ಕನ್ನಡ-ಕಾವ್ಯ ಪರಂಪರೆಗೂ ಮಿಗಿಲಾಗಿತ್ತು. ಈ ಕಾಲದಲ್ಲೂ ಕಾವ್ಯದ ಮಾನದಂಡಗಳನ್ನು ಸಂಸ್ಕೃತ ಸಾಹಿತ್ಯದ

ಗರಡಿಯಲ್ಲಿಯೇ ಪಡೆಯುವುದು ರೂಢಿಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಕನ್ನಡ ಕಾವ್ಯ ಲೋಕದ ಬಗೆಗಿನ ಪ್ರಜ್ಞೆಯನ್ನು ಹೊಂದಿದ್ದ ಕವಿರಾಜಮಾರ್ಗಕಾರ ಅದರಲ್ಲಿ ಕೊರತೆಯನ್ನು ಕಂಡದ್ದು ಸಹಜವೇ ಆಗಿದೆ. ಈ ನಿಟ್ಟಿನಲ್ಲಿ ಕನ್ನಡಕ್ಕೊಂದು ಶಾಸ್ತ್ರ ರಚನೆ ಮಾಡುವುದು ಅವನ ಕನ್ನಡಾಭಿಮಾನಕ್ಕೆ ದ್ಯೋತಕವಾಗುತ್ತದೆ. ಅಲ್ಲದೆ ಈ ಬಗೆಯ ಕೃತಿ ಕನ್ನಡದ ಮಟ್ಟಿಗೆ ಮೊದಲ ಪ್ರಯತ್ನ ಎಂಬ ಸೂಚನೆಯನ್ನು ಸಹ ಕೊಡುತ್ತಾನೆ.[೧]

ಹೀಗೆ ಸಂಸ್ಕೃತ ಸಾಹಿತ್ಯದ ಸಮೃದ್ಧತೆಯು ಕನ್ನಡಕ್ಕೂ ಲಭಿಸಬೇಕೆಂಬ ಉತ್ಕಟ ಇಚ್ಛೆಯಿಂದ ಕನ್ನಡ ಕವಿಗಳಿಗೊಂದು ರಾಜಮಾರ್ಗವನ್ನು ನಿರ್ಮಿಸಿಕೊಡುತ್ತಾನೆ. ಈ ನಿರ್ಮಿತಿಯಲ್ಲಿ ಲಕ್ಷ್ಯ ಮತ್ತು ಲಕ್ಷಣಗಳನ್ನು ಹಿಂದಿನ ಕನ್ನಡ ಕಾವ್ಯ ಪರಂಪರೆ ಹಾಗೂ ಸ್ವರಚಿತ ಪದ್ಯಗಳ ಮೂಲಕ ನೀಡುತ್ತಾನೆ. ಈ ಪ್ರಕ್ರಿಯೆಯಲ್ಲಿ ಸದರಿ ಶಾಸ್ತ್ರ ಕೃತಿಯು ಕಾವ್ಯ ಕೃತಿಯೂ ಆಗಿ ಮಾರ್ಪಡುತ್ತದೆ.

ಹೀಗೆ ಕನ್ನಡಕ್ಕೊಂದು ಕಾವ್ಯ ಕಮ್ಮಟವನ್ನು ನಿರ್ಮಿಸಿ, ಅದನ್ನು ಚಿರಾಯುಗೊಳಿಸುತ್ತಾನೆ. ಅನಂತರದ ಪಂಪಾದಿ ಕವಿಗಳೂ ಈ ಕಮ್ಮಟದ ವಿದ್ಯಾರ್ಥಿಗಳಾಗಿರಲು ಸಾಧ್ಯವಿದೆ!

ಹೀಗೆ ಕನ್ನಡ ಕಾವ್ಯ ಪರಂಪರೆಗೆ 'ಕವಿರಾಜಮಾರ್ಗ'ದ ಮೂಲಕ ಹೊಸ ದಿಕ್ಕನ್ನು ತೋರಿದ ಶ್ರೀವಿಜಯನು ಶ್ರೀಮಂತವಾದ ಕನ್ನಡ ಚಂಪೂ ಪರಂಪರೆಗೆ ನಿರ್ದೇಶನವನ್ನು ಸಹ ಮಾಡಿದಂತಾಗಿದೆ.

ವೃತ್ತಪತ್ರಿಕೆ, ಆಕಾಶವಾಣಿ, ದೂರದರ್ಶನ, ಸಿನೆಮಾ, ಟೆಲಿಫೋನ್ ಮುಂತಾದ ಅನೇಕ ಸಮೂಹ ಮಾಧ್ಯಮಗಳ ಜಾಲ ಇಂದು ಕರ್ನಾಟಕವನ್ನು ಆವರಿಸಿದೆ. ಆಧುನೀಕರಣಗೊಂಡ ಸಾರಿಗೆ ವ್ಯವಸ್ಥೆಯಿಂದ ಇಡೀ ಪ್ರಪಂಚ ಹಳ್ಳಿಯಾಗಿರುವಾಗ, ಕರ್ನಾಟಕವು ಅದರಲ್ಲೊಂದು ಬಡಾವಣೆಯಂತಾಗಿದೆ.* ಹೀಗಿರುವಾಗಲೂ ಕರ್ನಾಟಕದಲ್ಲಿ ಕನ್ನಡ ಭಾಷೆಯ ಹಲವು ಪ್ರಬೇಧಗಳನ್ನು ಕಾಣಲು ಸಾಧ್ಯವಿದೆ. ಮುಂಬೈ ಕರ್ನಾಟಕದ ಕನ್ನಡ, ಹೈದರಾಬಾದ್ ಕರ್ನಾಟಕದ ಕನ್ನಡ, ಮೈಸೂರು ಕನ್ನಡ, ಕರಾವಳಿ ಕನ್ನಡ–ಹೀಗೆ ಕೆಲವು ಪ್ರಮುಖ ನೆಲೆಗಳಲ್ಲಿ ಕನ್ನಡ ಭಾಷೆಯ ವೈವಿಧ್ಯವಿದೆ. ಅದರಲ್ಲೂ ಜಿಲ್ಲೆಯಿಂದ ಜಿಲ್ಲೆಗೆ, ತಾಲ್ಲೂಕಿನಿಂದ ತಾಲ್ಲೂಕಿಗೆ ಇದರ ವೈವಿಧ್ಯವನ್ನು ಗುರುತಿಸಬಹುದಾಗಿದೆ. ಇದು ಆಧುನೀಕರಣಗೊಂಡು, ಭಾಷಿಕವಾಗಿ ಸಾಮೀಪ್ಯವನ್ನು ಸಾಧಿಸಿರುವ ಕನ್ನಡ ನಾಡಿನ ವಿವಿಧ ಭಾಗಗಳ ಸಾಕ್ಷಾತ್ ಚಿತ್ರ. ಹೀಗಿರುವಾಗ, ಇದಕ್ಕಿಂತ ಹನ್ನೊಂದು ಶತಮಾನಗಳಷ್ಟು ಹಿಂದಿನ ಕಾಲಘಟ್ಟದಲ್ಲಿ ಕಾವೇರಿಯಿಂದ ಗೋದಾವರಿಯವರೆಗೂ ಹಬ್ಬಿದ್ದ ಭೌಗೋಳಿಕ ವಲಯದಲ್ಲಿ ಕನ್ನಡದ ಭಾಷಿಕ ವೈವಿಧ್ಯವನ್ನು ಊಹಿಸಬಹುದಾಗಿದೆ. ಈ ಊಹೆಯನ್ನು ದೃಢಪಡಿಸುವ ನಿಟ್ಟಿನಲ್ಲಿ ಕವಿರಾಜಮಾರ್ಗಕಾರನು ಕೆಳಕಂಡ ಮಾತನ್ನು ಆಡುತ್ತಾನೆ.

---

* ಈ ಮಾತು ಗ್ರಾಮೀಣ ಪ್ರದೇಶಕ್ಕೆ ಅನ್ವಯಿಸುವುದಿಲ್ಲ.

ಕನ್ನಡಂಗಳೊಳೆಂದುಂ। ವಾಸುಗಿಯುಮಱೆಯಲಾಱದೆ
ಬೇಸಱುಗುಂ ದೇಸಿ ಬೇಱೆಬೇಱಪ್ಪುದಱೆಂ॥

ಹೀಗೆ ಏಳು ನಾಲಗೆಗಳನ್ನು ಹೊಂದಿರುವ ಆದಿಶೇಷನು ಸಹ ಎಣಿಸಲಾರದಷ್ಟು ದೇಸಿಗಳನ್ನು ಹೊಂದಿರುವ ಕನ್ನಡ ನಾಡಿನ ಭಾಷಿಕ ವೈವಿಧ್ಯತೆಯನ್ನು ಕುರಿತ ಪ್ರಜ್ಞೆಯನ್ನು ಮಾತಿನ ಮೂಲಕ ವ್ಯಕ್ತಪಡಿಸುವ ಕವಿರಾಜಮಾರ್ಗಕಾರ ಅಂದಿನ ಕಾಲಕ್ಕೆ– ಕನ್ನಡ– ಭಾಷಾ ವಿಜ್ಞಾನಿಯಾಗಿಯೂ ಮಾರ್ಪಡುತ್ತಾನೆ.

ಹೀಗೆ ಅಸಂಖ್ಯ ಭಾಷಾ ಪ್ರಬೇಧಗಳನ್ನು ಹೊಂದಿರುವ ಕನ್ನಡದ ಭಾಷೆಯ ಸಂದರ್ಭದಲ್ಲಿ ಕಾವ್ಯಕ್ಕೆ ಯಾವ ಪ್ರಬೇಧವನ್ನು ಬಳಸಬೇಕೆಂಬ ಪ್ರಶ್ನೆ ಕವಿಗಳಿಗೆ ಸಹಜ ಸವಾಲಾಗಿತ್ತು. ಕಾರಣ, ಪ್ರತಿಯೊಂದು ಪ್ರಬೇಧವೂ ತನ್ನದೇ ಆದ ಭಾಷಿಕ ಮಿತಿಗಳನ್ನು ಪಡೆದದ್ದರಿಂದ ಉತ್ಕೃಷ್ಟ ಕಾವ್ಯ ರಚನೆಯಲ್ಲಿ ಅದೊಂದು ತೊಡಕು ಆದಂತಾಯಿತು. ಆದ್ದರಿಂದ ಕಾವ್ಯ ಕಟ್ಟುವ ಕ್ರಿಯೆಯಲ್ಲಿ ಈ ಎಲ್ಲವನ್ನು ಪ್ರತ್ಯೇಕವಾಗಿ ಬಳಸುವುದು ವಿವಿಧ ಕಾರಣಗಳಿಂದಾಗಿ ಸೂಕ್ತವಲ್ಲವೆಂದು ಕವಿರಾಜಮಾರ್ಗಕಾರ ಭಾವಿಸುತ್ತಾನೆ. ಈ ಪ್ರಾದೇಶಿಕ ಭಾಷಾ ವೈವಿಧ್ಯದ ಹಿನ್ನೆಲೆಯಲ್ಲಿ ಪ್ರಮಾಣಬದ್ಧವಾದ ಕನ್ನಡ ಭಾಷೆಯೊಂದನ್ನು ರೂಪಿಸಲು ಪ್ರಯತ್ನಿಸುತ್ತಾನೆ. ಇಂತಹ ಪ್ರಮಾಣೀಕೃತ ಭಾಷೆಯಿಂದ ಮಾತ್ರ ಹಲವು ಶಿಸ್ತುಗಳ ವಿಷಯಗಳನ್ನು ಸಮರ್ಥವಾಗಿ ಹೇಳಲು ಸಾಧ್ಯ ಎಂದು ಭಾವಿಸುತ್ತಾನೆ. ಇದು ಔಚಿತ್ಯಪೂರ್ಣ ವಿವೇಚನಾ ಪ್ರಜ್ಞೆಯೂ ಹೌದು. ಈ ಹಿನ್ನೆಲೆಯಲ್ಲಿ ಸಾರವತ್ತಾದ ಕನ್ನಡ ಭಾಷಾ ಮಾದರಿಯನ್ನು ಕಟ್ಟಿಕೊಡುತ್ತ, ಪ್ರಾದೇಶಿಕ ವೈವಿಧ್ಯದ ಕನ್ನಡ ಸಂಸ್ಕೃತಿಯನ್ನು ಮೊದಲಿಗೆ ಏಕೀಕರಣ ಮಾಡುತ್ತಾನೆ. ಇದರಿಂದ ಹಲವು ಅನುಕೂಲಗಳು ಉಂಟಾದರೂ ಕೆಲವು ಸೂಕ್ಷ್ಮ ನಕಾರಾತ್ಮಕ ಸಂಗತಿಗಳಿಗೂ ಕಾರಣೀ ಭೂತವಾಗುತ್ತದೆ. ಅವುಗಳಲ್ಲಿ ಮುಖ್ಯವಾದುದು ಹೀಗಿದೆ–

ಕನ್ನಡ ನಾಡಿನ ಸಂದರ್ಭದಲ್ಲಿ ಒಂದು ಪ್ರಮಾಣೀಕೃತ ಭಾಷೆ ಹೆಚ್ಚು ಪ್ರಚಲಿತಕ್ಕೆ ಬಂದಾಗ, ಪ್ರಾದೇಶಿಕವಾದ ಅನೇಕ ಭಾಷಾ ಮಾದರಿಗಳು ಸಾಹಿತ್ಯದ ಅಭಿವ್ಯಕ್ತಿಯಲ್ಲಿ ದಾಖಲಾಗದೆ ದೂರವೇ ಉಳಿದವು. ಕ್ರಮೇಣ ಇವು ಇತಿಹಾಸದ ಗರ್ಭದಲ್ಲಿ ಮರೆಯಾಗುತ್ತಾ ಬಂದವು. ಹೀಗೆ ಮರೆಯಾಗುತ್ತಾ ಬಂದ ಪ್ರಾದೇಶಿಕ ಭಾಷಾ ರೂಪಗಳು ಭಿನ್ನ ಸ್ವರೂಪದಲ್ಲಿ ಇಂದಿಗೂ ಬೆಳೆದು ಬಂದಿರುವುದಾದರೂ ಅಂದಿನ ಸ್ವರೂಪ ಇಂದು ಉಳಿದಿಲ್ಲ ಎಂಬುದು ನಿಜ ಸಂಗತಿಯಾಗುತ್ತದೆ. 'ತಿರುಳ್ಗನ್ನಡ' ಎಂಬ ಭಾಷಿಕ ರೂಪವೂ ಇದೇ ಕಾರ್ಯವನ್ನೇ ಮಾಡಿದ್ದು.

ಈ ಹಿನ್ನೆಲೆಯಲ್ಲಿ ಪ್ರಮಾಣೀಕೃತ ಕನ್ನಡ ಕಾವ್ಯ ಭಾಷೆಯು 'ಕವಿರಾಜ ಮಾರ್ಗ'ದ ಆಶಯಕ್ಕನುಸಾರವಾಗಿ ಪಂಪಾದಿ ಕವಿಗಳಿಂದ ಪರಂಪರೆಯಾಗಿ ಮುಂದುವರೆಯಿತು. ಈ ನಿಟ್ಟಿನಲ್ಲಿ 'ಛಂದೋಂಬುಧಿ', 'ಶಬ್ದಮಣಿದರ್ಪಣ', 'ಶಬ್ದಾನುಸಾಸನ' ಮೊದಲಾದ ಶಾಸ್ತ್ರಕೃತಿಗಳ ಪರಂಪರೆಯೂ ಮೊದಲಾಯಿತು.

ಇದರ ನಡುವೆ ಕಾವ್ಯಕ್ಕೆ ಒದಗುವ ದೋಷಗಳು ಮತ್ತು ಅವುಗಳ ನಿವಾರಣೋಪಾಯಗಳನ್ನು ಸೂಚಿಸುತ್ತಾನೆ. ಈ ದಿಸೆಯಲ್ಲಿ 'ಅರಿಸಮಾಸ' ದೋಷವನ್ನು ಪ್ರಧಾನವಾಗಿ ಚರ್ಚಿಸುತ್ತಾನೆ. ಹಾಗೂ ಕನ್ನಡದ ಜಾಯಮಾನಕ್ಕೊಗ್ಗುವ 'ಯತಿ'ಯ ವಿಚಾರವನ್ನೂ ಪ್ರಸ್ತಾಪಿಸುತ್ತಾನೆ.

ಈ ವಿಚಾರಗಳ ತರುವಾಯ ಅರ್ಥಶೂನ್ಯ, ವಿರುದ್ಧಾರ್ಥ, ಪುನರುಕ್ತ, ಛಂದೋಭಂಗ ಮೊದಲಾದ ಕಾವ್ಯದೋಷಗಳ ವಿಚಾರಗಳನ್ನು ಮಂಡಿಸಿ, ಪ್ರಥಮ ಪರಿಚ್ಛೇದವನ್ನು ಮುಗಿಸುತ್ತಾನೆ.

ಉಳಿದೆರಡು ಪರಿಚ್ಛೇದಗಳಲ್ಲಿ ಶಬ್ದ ಮತ್ತು ಅರ್ಥಾಲಂಕಾರಗಳ ಚರ್ಚೆಯನ್ನು ಕ್ರಮವಾಗಿ ಮಾಡುತ್ತಾನೆ. ಸಂಸ್ಕೃತ ಅಲಂಕಾರ ಶಾಸ್ತ್ರದ ವಿಚಾರಗಳನ್ನು ಇಲ್ಲಿ ಕನ್ನಡಮಯಗೊಳಿಸಿ, ಕನ್ನಡ ಕವಿಗಳಿಗೆ ನೆರವಾಗುತ್ತಾನೆ.

ಹೀಗೆ ಕವಿರಾಜಮಾರ್ಗಕಾರನು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಶಾಸ್ತ್ರೀಯವಾದ ನೆಲೆಗಟ್ಟನ್ನು ರೂಪಿಸುತ್ತಾನೆ. ಇದರಿಂದ ಕನ್ನಡವು ಹಲವು ದಿಕ್ಕುಗಳಲ್ಲಿ ಬೆಳೆಯು ವಂತಾಗುತ್ತದೆ. ಇದರ ಮೂಲಕ ತಾನು ಶ್ರೀಮಂತ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಿರಂತರ ಅನುರಣನಕ್ಕೆ ಪಾತ್ರನಾಗುತ್ತಾನೆ.

೨. ಸಾಂಸ್ಕೃತಿಕ ನೆಲೆ: 'ಕವಿರಾಜ ಮಾರ್ಗ'ವು ಸಾಹಿತ್ಯಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ಅಧ್ಯಯನದ ನೆಲೆಯಲ್ಲಿಯೂ ಮುಖ್ಯವಾಗುವ ಕೃತಿ. ಈ ದೃ ಷ್ಟಿಯಿಂದ ಇದನ್ನು ಹಲವು ಶಿಸ್ತುಗಳ ಮೂಲಕ ಪ್ರವೇಶಿಸಬಹುದಾಗಿದೆ. ಇದಕ್ಕೆ ಕಾರಣ ಅದು ರಚನೆಯಾದ ಕಾಲದ ಹಿನ್ನೆಲೆ ಮತ್ತು ಆ ಕಾಲದ ಬಗೆಗೆ ನೀಡುವ ಹಲವು ಒಳನೋಟಗಳು.

'ಕವಿರಾಜಮಾರ್ಗ'ವು ರಚನೆಯಾದ ಕಾಲಘಟ್ಟದಲ್ಲಿ ಕನ್ನಡ ನಾಡು ಹಲವು ಚಾರಿತ್ರಿಕ ಸ್ಥಿತ್ಯಂತರಗಳಿಗೆ ಒಳಗಾಗಿತ್ತು. ಈ ಕಾಲದ ರಾಜಕೀಯ ವಿಘಟನೆಗಳಿಂದಾಗಿ ದೊಡ್ಡ ಸಾಮ್ರಾಜ್ಯಗಳು ಅಳಿದು, ಸಣ್ಣ-ಪುಟ್ಟ ರಾಜಕೀಯ ಘಟಕಗಳು ಸ್ವತಂತ್ರವಾಗಿ ಅಸ್ತಿತ್ವ ಪಡೆಯುತ್ತಿದ್ದವು. ಆ ನಿಟ್ಟಿನಲ್ಲಿ ದೇಶೀ ಸಂಸ್ಥಾನಗಳು ರೂಪು ತಾಳತೊಡಗಿದುದು ದೇಸಿ ಸಂಸ್ಕೃತಿ ಮತ್ತು ಭಾಷೆಗಳ ಪ್ರಾದುರ್ಭಾವವೇ ಆಗಿದೆ. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಮೂಡಿದ ಈ ಕೃತಿ ಸಹಜವಾಗಿಯೇ ಅನೇಕ ಒಳನೋಟಗಳನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ಪ್ರಾದೇಶಿಕವಾದ ಕನ್ನಡ ಭಾಷೆ - ಸಾಹಿತ್ಯಕ್ಕೊಂದು ಶಾಸ್ತ್ರಕೃತಿ ನಿರ್ಮಾಣ ಗೊಂಡದ್ದು ಹಾಗೂ ಈ ಕಾಲದಿಂದಾಚೆಗೆ ಗೋದಾವರಿಯ ಭೂವಲಯದಲ್ಲಿಯೂ ಕಲ್ಯಾಣ ಚಾಲುಕ್ಯ, ಕಲಚೂರಿ, ಯಾದವ ಮುಂತಾದವರು ಕ್ರಮವಾಗಿ ಆಡಳಿತದ ಚುಕ್ಕಾಣಿಯನ್ನು ಹಿಡಿದು ಕನ್ನಡ ಭಾಷೆಯ ಶಾಸನಗಳನ್ನು ವಿಶೇಷವಾಗಿ ನೆಡಿಸಿದ್ದು ಈ ದೃಷ್ಟಿಯಿಂದ ಮುಖ್ಯವಾಗುವ ಸಂಗತಿಗಳು.

'ಕವಿರಾಜಮಾರ್ಗ'ದ ಮತ್ತೊಂದು ಮಹತ್ವದ ನೆಲೆಯೆಂದರೆ -ಇದರಲ್ಲಿ ಕನ್ನಡದ ಕಾವ್ಯ ಪರಂಪರೆ, ಪ್ರಾದೇಶಿಕ ಭಾಷಾ ವೈವಿಧ್ಯಗಳ ಸೂಚನೆ, ಕನ್ನಡಿಗರ ಗುಣ ಸ್ವಭಾವ,

ವ್ಯಾಕರಣ, ಛಂದಸ್ಸು, ಅಲಂಕಾರ, ಕರ್ನಾಟಕದ ಭೌಗೋಳಿಕ ಗಡಿ –ಹೀಗೆ ಹಲವು ಕನ್ನಡ ಸಂಬಂಧಿ ವಿಚಾರಗಳು ಪ್ರಸ್ತಾಪಗೊಂಡಿರುವುದರಿಂದ ಇದು ಅಂದಿನ ಕನ್ನಡ ನಾಡಿನ ಸಂದರ್ಭದ ಚಾರಿತ್ರಿಕ ಕೃತಿ ಮಾತ್ರವಾಗದೆ, ಕಿರು ವಿಶ್ವಕೋಶವೂ ಆಗುತ್ತದೆ. ಆದ್ದರಿಂದಲೇ ಇದನ್ನು ಹಲವು ಶಿಸ್ತುಗಳ ಮೂಲಕ ಪ್ರವೇಶಿಸಲು ಸಾಧ್ಯ ಎಂದು ಹೇಳಿದ್ದು.

ನಾಡಿನ ಬಗೆಗಿನ ಅಭಿಮಾನವು ಕಾಲದಿಂದ ಕಾಲಕ್ಕೆ ಭಿನ್ನ ಸ್ವರೂಪದಲ್ಲಿ ಅಭಿವ್ಯಕ್ತಿಗೊಂಡದ್ದು ಕನ್ನಡ ಸಾಹಿತ್ಯ ಪರಂಪರೆಯಿಂದ ವೇದ್ಯಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಆಧುನಿಕ ಪೂರ್ವ ಸಂದರ್ಭದ ಕನ್ನಡ ನಾಡಿನಲ್ಲಿ ಅಂತಹ ಅಭಿಮಾನ ರಾಜನ ಬಗೆಗೆ ಆಡುವ ಮಾತುಗಳ ಮೂಲಕವೂ ವ್ಯಕ್ತವಾಗುತ್ತಿತ್ತು. (ಇದಕ್ಕೆ ಹಲವು ನಿದರ್ಶನಗಳು ಮುಂದಿನ ಅಧ್ಯಾಯಗಳಲ್ಲಿ ದೊರೆಯುತ್ತವೆ.) ಇದಕ್ಕೆ ರಾಜಪ್ರಭುತ್ವದ ರಾಜಕೀಯ ವಿನ್ಯಾಸವೂ ಕಾರಣವಾಗಿದ್ದಿತು. ಈ ಹಿನ್ನೆಲೆಯಲ್ಲಿ ಶ್ರೀವಿಜಯನು ತನ್ನ ಆಶ್ರಯದಾತನಾದ ನೃಪತುಂಗನನ್ನು ಕಾವ್ಯಾರಂಭ ಮತ್ತು ಅಂತ್ಯ ಭಾಗದಲ್ಲಿ ನೆನೆಯುವುದು ಪ್ರಸ್ತುತ ಅಧ್ಯಯನದ ದೃಷ್ಟಿಯಿಂದಲೂ ಮುಖ್ಯವಾಗುವ ಸಂಗತಿ.

ಕೃತಿಯ ಆರಂಭದ ಮೊದಲೆರಡು ಪದ್ಯಗಳಲ್ಲಿ ವೀರನಾರಾಯಣನನ್ನು ನೆನೆಯುವಾಗ, ಅವನಿಗೆ ನೃಪತುಂಗನ ಬಿರುದಾವಳಿಗಳನ್ನು ಆರೋಪಿಸುತ್ತಾನೆ. 'ನೀತಿನಿರಂತರ', 'ಉದಾರ', 'ನೃಪತುಂಗ', 'ಅಪ್ರತಿಹತ – ವಿಕ್ರಮ' ಮುಂತಾದ ಬಿರುದುಗಳನ್ನು ಆರೋಪಿಸುವ ಮೂಲಕ ನಾರಾಯಣನಲ್ಲಿ ನೃಪತುಂಗನನ್ನು ಒಂದು ನೆಲೆಯಲ್ಲಿ ಸಮೀಕರಿಸುತ್ತಾನೆ.

ಅಂತೆಯೇ ಇದೇ ಭಾಗದ ಆರನೆಯ ಪದ್ಯದಲ್ಲಿ ನೃಪತುಂಗನ ಅತ್ಯುನ್ನತ ಕಾವ್ಯ ಸಹೃದಯತೆಯನ್ನೂ ಪ್ರಸ್ತಾಪಿಸುತ್ತಾ 'ವಿವೇಕ ಬೃಹಸ್ಪತಿ' ಎಂಬ ನುಡಿಗಟ್ಟನ್ನು ಬಳಸುತ್ತಾನೆ. ಹೀಗೆ ತನ್ನ ರಾಜನನ್ನು ಬಣ್ಣಿಸುವ ಮೂಲಕ ನಾಡಿನ ಬಗೆಗಿನ ಉತ್ಕಟ ಅಭಿಮಾನವನ್ನು ಪ್ರಕಟಿಸುತ್ತಾನೆ.

'ಕವಿರಾಜಮಾರ್ಗ'ದ ಒಂದು ಘಟ್ಟದಲ್ಲಿ ಕನ್ನಡಿಗರ ಗುಣ–ಸ್ವಭಾವದ ಪ್ರಸ್ತಾಪ ಬರುತ್ತದೆ. ಇದು ಕೃತಿಯ ವಸ್ತು ವಿನ್ಯಾಸದ ದೃಷ್ಟಿಯಿಂದ ಅನಿವಾರ್ಯವೇನಲ್ಲ. ಆದರೂ ಕೃತಿಕಾರ ಇದನ್ನು ಪದ್ಯಗಳ ಮೂಲಕ ಕಡ್ಡಾಯವಾಗಿ ಪ್ರಸ್ತಾಪಿಸಿರುವನೆಂದರೆ, ಅದಕ್ಕೆ ಕಾರಣ ಅವನ ನಾಡು ಮತ್ತು ಆ ನಾಡ ಜನರ ಬಗೆಗೆ ಇರುವ ಉತ್ಕಟ ಅಭಿಮಾನವೇ ಆಗುತ್ತದೆ. ಈ ಹಿನ್ನೆಲೆಯಲ್ಲಿ ತಾನು ಆಡುವ ಮಾತುಗಳು ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ಮಾತ್ರ ಮುಖ್ಯವಾಗದೆ ಪ್ರಸ್ತುತ ಅಧ್ಯಯನದ ತಾತ್ವಿಕ ನೆಲೆಯಲ್ಲಿಯೂ ಮುಖ್ಯವಾದ ಸಂಗತಿಯಾಗುತ್ತದೆ. ಈ ಹಿನ್ನೆಲೆಯ ಕೃತಿಕಾರನ ಮಾತುಗಳಲ್ಲಿ ಅಭಿಮಾನದ ಭಾವುಕ ಎಳೆಯೂ ಸೇರಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದಲೆ ಈ ನಾಡಿನ "ಹುಟ್ಟು ಮೂಗರೂ ಸಹ ವಿವೇಕವನ್ನು ಇಲ್ಲವೆ ಜಾಣ್ನುಡಿಗಳನ್ನು ತಿಳಿಸಬಲ್ಲವ"ರಾಗುತ್ತಾರೆ.

ಇಂತಹ ಕನ್ನಡಿಗರನ್ನು ಹೊಂದಿದ್ದ ನಾಡು ದಕ್ಷಿಣದ ಕಾವೇರಿಯಿಂದ ಉತ್ತರದ ಗೋದಾವರಿ ನದಿಯವರೆಗೂ ಚಾಚಿಕೊಂಡಿತ್ತು ಎಂದು ಕವಿರಾಜಮಾರ್ಗಕಾರ ಹೇಳುತ್ತಾನೆ. ಇದು ಕರ್ನಾಟಕದ ಸಂದರ್ಭದಲ್ಲಿ ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಗಮನಾರ್ಹ ಸಂಗತಿ. ಕಾರಣ, ಇಂದು ಕರ್ನಾಟಕದ ಭೌಗೋಲಿಕ ವ್ಯಾಪ್ತಿ ಇಷ್ಟೊಂದು ವ್ಯಾಪಕವಾಗಿಲ್ಲದಿರುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಇದರ ಗಡಿ ವಿಚಾರದ ಸತ್ಯಾಸತ್ಯತೆ ಮತ್ತು ಅದರ ಕುಗ್ಗುವಿಕೆಗೆ ಕಾರಣೀಭೂತವಾದ ಸಂಗತಿಗಳ ಕಡೆಗೆ ದೃಷ್ಟಿ ಹರಿಯುವುದು ಕುತೂಹಲಕರ ಅಧ್ಯಯನಕ್ಕೆ ಈಡಾಗುತ್ತದೆ.

ಆದ್ದರಿಂದ ಮುಂದುವರೆದ ಈ ಭಾಗದಲ್ಲಿ ಕನ್ನಡ ನಾಡಿನ ಅಂದಿನ ಗಡಿ ವಿಚಾರದ ಸತ್ಯಾಸತ್ಯತೆಯನ್ನು ಪರಿಶೀಲಿಸಲಾಗುವುದು. ಆನಂತರದ ಅನುಬಂಧ ವೊಂದರಲ್ಲಿ ಇದರ ಉತ್ತರದ ಗಡಿ ದಕ್ಷಿಣದ ಕಡೆಗೆ ಸರಿದುದರ ಬಗೆಗೆ ಹಲವು ಅಂತರ್‌ಶಿಸ್ತೀಯ ವಿಚಾರಗಳನ್ನು ಮಂಡಿಸಲಾಗುವುದು.

ಕ್ರಿ.ಶ. ೯ನೆಯ ಶತಮಾನದ ಕಾಲಕ್ಕೆ ಕನ್ನಡ ನಾಡು ಉತ್ತರದ ಗೋದಾವರಿಯಿಂದ ದಕ್ಷಿಣದ ಕಾವೇರಿಯವರೆಗೂ ಚಾಚಿತ್ತೆ? ಎಂಬ ಪ್ರಶ್ನೆಯನ್ನು ಕುರಿತು ಹಲವಾರು ವಿದ್ವಾಂಸರು ಈಗಾಗಲೇ ಉತ್ತರಗಳಾಗಿದ್ದಾರೆ. ಆದರೂ ನನ್ನ ಅಧ್ಯಯನದ ಸಂದರ್ಭದಲ್ಲಿ ಅವುಗಳ ಪರಾಮರ್ಶೆಯನ್ನು ಮಾತ್ರ ಮಾಡುವುದು ಇಲ್ಲಿ ಸೂಕ್ತ ಎನ್ನಿಸಿದೆ.

ಒಂದು ನಿರ್ದಿಷ್ಟ ಭೂಪ್ರದೇಶದ ಪ್ರಾಚೀನ ಸಂಸ್ಕೃತಿಯನ್ನು ತಿಳಿಯಲು ಅನೇಕ ಸಹಾಯಕ ಸಾಮಗ್ರಿಗಳು ಅಧ್ಯಯನ ಯೋಗ್ಯವಾಗುತ್ತವೆ. ಆದ್ದರಿಂದ ಈ ಕೆಳಕಂಡ ಆಯ್ದ ಸಾಮಗ್ರಿಗಳನ್ನು ಇಲ್ಲಿ ಪರಿಶೀಲಿಸಲಾಗುವುದು.

೨.೧. ಶಾಸನಗಳು

೨.೨. ಸ್ಥಳನಾಮಗಳು

೨.೩. ವೀರ-ಮಾಸ್ತಿಕಲ್ಲುಗಳು

೨.೪. ಹಸ್ತಪ್ರತಿಗಳು, ದೇವಾಲಯಗಳು ಮತ್ತು ಮಠಗಳು

೨.೧. ಶಾಸನಗಳು: ಪ್ರಾಚೀನ ಸಂಸ್ಕೃತಿಯ ಸಾಕ್ಷಾತ್ಕಾರಕ್ಕೆ ಒದಗುವ ಮಹತ್ವದ ದಾಖಲೆಗಳಲ್ಲಿ ಶಾಸನಗಳು ಮುಖ್ಯವಾದವು. ಇದಕ್ಕೆ ಕಾರಣ ಇವು ಚರ ದಾಖಲೆಗಳಾಗಿರದೆ ಸ್ಥಿರ ದಾಖಲೆಗಳಾಗಿರುವುದೇ ಆಗಿದೆ; ಮತ್ತು ಯಾವುದೇ ಭಾಷೆಯ ಶಾಸನಗಳ ಆಶಯವೆಂದರೆ ತಾನು ಹೇಳಬೇಕಾದ ವಿಚಾರವನ್ನು ಆ ಪ್ರದೇಶದ ಜನರ ಭಾಷೆಯಲ್ಲಿಯೇ ಸಂವಹಿಸುವುದಾಗಿದೆ. ಈ ಹಿನ್ನೆಲೆಯಲ್ಲಿ ಶಾಸನಗಳು ನಿರ್ದಿಷ್ಟ ಭೂವಲಯದ ಸಂಸ್ಕೃತಿಯ ಪ್ರತೀಕಗಳಾಗಿ ಇತಿಹಾಸದ ಕಾಲವನ್ನು ಮೀರಿ ನಿಲ್ಲುತ್ತವೆ.

ದಕ್ಷಿಣ ಮಹಾರಾಷ್ಟ್ರದ ಶಾಸನಗಳನ್ನು ಈವರೆಗೆ ಅಧ್ಯಯನ ಮಾಡಿದ ಮುಖ್ಯರಲ್ಲಿ ಆಲೂರ ವೆಂಕಟರಾಯ, ಶಂಬಾ ಜೋಶಿ, ಎಂ.ಎಂ. ಕಲಬುರ್ಗಿ, ಆರ್ಕೆ ಮಣಿಪಾಲ,

ಜಿ.ಎನ್. ಉಪಾಧ್ಯ, ಎ.ವಿ. ನರಸಿಂಹಮೂರ್ತಿ, ಶ್ರೀನಿವಾಸ ರಿತ್ತಿ ಮೊದಲಾದವರನ್ನು ಹೆಸರಿಸಲೇಬೇಕಾಗಿದೆ. ಅಂತೆಯೇ ಮರಾಠಿ ವಿದ್ವಾಂಸರಾದ ಶಾಂತಾರಾಮ್‌ದೇವ, ಎನ್.ಜಿ. ತಾಳಪುಳೆ, ರಾನಡೆ, ಸ್ಟೆನ್‌ಸ್ಕೊ, ಸಿಂಧೆ ಮೊದಲಾದವರು ಸಹ ಮುಖ್ಯರಾಗುತ್ತಾರೆ. ಇವರ ಅಧ್ಯಯನದ ಪ್ರಕಾರ ಕ್ರಿ.ಶ. ಹತ್ತನೆಯ ಶತಮಾನದವರೆಗೆ ದಕ್ಷಿಣ ಮಹಾರಾಷ್ಟ್ರ ಅಥವಾ 'ಕವಿರಾಜಮಾರ್ಗ'ದ ಕನ್ನಡ ಜನಪದದ ಉತ್ತರದ ಗಡಿಯಲ್ಲಿ ಕನ್ನಡ ಅಥವಾ ಮರಾಠಿ ಭಾಷೆಯ ಒಂದೂ ಶಾಸನ ಲಭ್ಯವಿಲ್ಲ. ಇದಕ್ಕೆ ಪರ್ಯಾಯವಾಗಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಯ ಶಾಸನಗಳು ಹೇರಳವಾಗಿ ಸಿಗುತ್ತವೆ. ಇದಕ್ಕೆ ರಾಜಕೀಯ ಕಾರಣಗಳಿವೆ.

ಕ್ರಿ.ಶ. ೬-೭ನೆಯ ಶತಮಾನದವರೆಗೆ ಈ ಪ್ರದೇಶವನ್ನು ಆಳಿದವರು ಶಾತವಾಹನರು. ಇವರ ಪ್ರಮುಖ ರಾಜ ಭಾಷೆ ಪ್ರಾಕೃತವಾದ್ದರಿಂದ ದೇಶೀ ಭಾಷೆಯಲ್ಲಿ ಶಾಸನಗಳು ರಚನೆಯಾಗಲಿಲ್ಲ. ಆನಂತರದಲ್ಲಿ ಈ ಪ್ರದೇಶವನ್ನು ಬಾದಾಮಿ ಚಾಲುಕ್ಯರು ಆಕ್ರಮಿಸಿಕೊಳ್ಳುವುದರಿಂದ ಸಂಸ್ಕೃತ ಶಾಸನಗಳು ಇಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಬಾದಾಮಿ ಚಾಲುಕ್ಯರು ವೈಷ್ಣವರು ಎಂಬ ಚಾರಿತ್ರಿಕ ಸತ್ಯ ಸ್ಮರಣೀಯ. ಆದ್ದರಿಂದ ಕ್ರಿ.ಶ. ಹತ್ತನೆಯ ಶತಮಾನದವರೆಗೆ ಪ್ರಾಂತೀಯ ಭಾಷೆಯಲ್ಲಿ ಶಾಸನಗಳು ರಚನೆಯಾಗದಿರುವುದಕ್ಕೆ ಪ್ರಭುತ್ವ-ಧರ್ಮ ಮತ್ತು ಪ್ರಾಕೃತ, ಸಂಸ್ಕೃತಗಳ ಪರವಾದ ಅಂತರ್ ಸಂಬಂಧಿ ನೆಲೆಯ ಸಾಮ್ರಾಜ್ಯಶಾಹಿ ಧೋರಣೆಯೇ ಮುಖ್ಯ ಕಾರಣವಾಗಿದೆ. ಈ ನೆಲೆಯಲ್ಲಿ ಸಂಸ್ಕೃತವು ಜನಸಾಮಾನ್ಯರ ಆಡುಭಾಷೆಯಾಗಿ ಯಾವ ಕಾಲಕ್ಕೂ ಅಸ್ತಿತ್ವದಲ್ಲಿ ಇರಲಿಲ್ಲವೆಂಬ ಸಂಗತಿಯನ್ನು ನೆನಪಿಸಿಕೊಳ್ಳಬೇಕು.

ಕ್ರಿ.ಶ. ಹತ್ತನೆಯ ಶತಮಾನದ ಹೊತ್ತಿಗೆ ರಾಜಕೀಯ ವಿಘಟನೆಗಳಿಂದಾಗಿ (ಹಿಂದೆ ಪ್ರಸ್ತಾಪಿಸಿದಂತೆ) ದೇಶೀ ಸಂಸ್ಥಾನಗಳು ಪ್ರಾದರ್ಭವಿಸುತ್ತಾ ಬಂದವು. ಇದರಿಂದ ದೇಶೀ ಭಾಷೆಗಳಿಗೆ ಅಧಿಕ ಮನ್ನಣೆ ದೊರೆತಂತಾಯಿತು. ಇದೇ ಸಂದರ್ಭದಲ್ಲಿ ಸಣ್ಣ ಪುಟ್ಟ ರಾಜಕೀಯ ಸಂಸ್ಥಾನಗಳ ನಡುವೆ ಕ್ಷೋಭೆಯೂ ಹೆಚ್ಚಿತು. ಪರಿಣಾಮವಾಗಿ 'ಯುದ್ಧ' ಅಥವ 'ವೀರ' ಎನ್ನುವುದು ಆ ನಾಡಿನ ಸಂಸ್ಕೃತಿಯಲ್ಲಿ ಉನ್ನತ ಮೌಲ್ಯವಾಗಿ ಪರಿಗಣಿತವಾಯಿತು. ಆದ್ದರಿಂದ ಈ ಚಾರಿತ್ರಿಕ ಸನ್ನಿವೇಶದಲ್ಲಿ 'ವೀರ' ಮೌಲ್ಯದ ಪ್ರಸಾರ ಮಾಧ್ಯಮಗಳಾಗಿ ಶಿಲಾಶಾಸನಗಳು ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲತೊಡಗಿದವು. ಹೀಗೆ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲತೊಡಗಿದಾಗ ಆ ಶಾಸನಗಳಲ್ಲಿ ಸಹಜವಾಗಿಯೇ ಸ್ಥಳೀಯ ಭಾಷೆ ಸ್ಥಾನ ಪಡೆಯಿತು. ಈ ನಿಟ್ಟಿನಲ್ಲಿ ಕ್ರಿ.ಶ. ಹತ್ತನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗಿನ ಕಾಲದಲ್ಲಿ ಈ ಪ್ರದೇಶದಲ್ಲಿಯೂ ನೂರಾರು ಶಾಸನಗಳು ತಲೆಯೆತ್ತಿದವು. ಹೀಗೆ ತಲೆ ಎತ್ತಲ್ಪಟ್ಟ ಶಾಸನಗಳ ಭಾಷಿಕ ಸ್ವರೂಪವನ್ನು ಪರಾಮರ್ಶಿಸುವ ಮೂಲಕ ಅವುಗಳ ನೆಲದ ಭಾಷೆಯನ್ನು ತಿಳಿಯಲೆತ್ನಿಸಲಾಗುವುದು.

ಕ್ರಿ.ಶ. ೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗಿನ ಕಾಲಘಟ್ಟದಲ್ಲಿ ಈ ಪ್ರದೇಶದಲ್ಲಿ ಕ್ರಮವಾಗಿ ಕಲ್ಯಾಣ ಚಾಲುಕ್ಯರು, ಕಲಚೂರಿ ಮತ್ತು ಸೇವುಣರು ಆಳಿದ್ದಾರೆ. ಇವರ ಒಟ್ಟು ಶಾಸನಗಳ ಸಂಖ್ಯೆ ಹೀಗಿದೆ-

ಮಹಾರಾಷ್ಟ್ರದಲ್ಲಿ ಕ್ರಿ.ಶ. ೧೯೭೦ರವರೆಗೆ ಶೋಧಿತವಾಗಿರುವ ಶಾಸನಗಳ ಒಟ್ಟು ಸಂಖ್ಯೆ ೯೨೦. ಅದರಲ್ಲಿ ಗೋವಾ ಮತ್ತು ಮಹಾರಾಷ್ಟ್ರ ಎರಡೂ ಪ್ರದೇಶಗಳಲ್ಲಿ ದೊರೆತಿರುವ ಮರಾಠಿ ಹಾಗೂ ಅರೆ ಮರಾಠಿ ಶಾಸನಗಳ ಸಂಖ್ಯೆ ಕೇವಲ ೭೬. ಹೀಗೆ ಅಂತಿಮವಾಗಿ ಉಳಿಯುವ ೮೪೪ ಶಾಸನಗಳು ಅನ್ಯಭಾಷೆಯವು. ಇವುಗಳಲ್ಲಿ ೨೭೦ ಕನ್ನಡ ಭಾಷೆಯಿಂದ ಕೂಡಿದ್ದರೆ, ಉಳಿದಂತೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಯಿಂದ ಕೂಡಿವೆ. ಸಂಸ್ಕೃತ ಮತ್ತು ಪ್ರಾಕೃತವು ಎಂದೂ ಜನಸಾಮಾನ್ಯರ ಭಾಷೆಯಾಗಿರಲಿಲ್ಲ ಎಂದಾಗ ಕನ್ನಡ ಭಾಷೆಯ ಶಾಸನಗಳಿಗೆ ಸಂಸ್ಕೃತಿಯ ದೃಷ್ಟಿಯಿಂದ ಪ್ರಾಮುಖ್ಯತೆ ಉಂಟಾಗುತ್ತದೆ. ಅಲ್ಲದೆ ಈ ೨೭೦ ಕನ್ನಡ ಶಾಸನಗಳು ವಿಶೇಷವಾಗಿ ಹರಡಿರುವುದು ಗೋದಾವರಿಯ ದಕ್ಷಿಣ ಪ್ರದೇಶದಲ್ಲಿ. ಈ ಪ್ರದೇಶದ ಜಿಲ್ಲೆಗಳು ದಕ್ಷಿಣ ಮಹಾರಾಷ್ಟ್ರದ ಕೊಲ್ಲಾಪುರ, ಸಾಂಗಲಿ, ಸೊಲ್ಲಾಪುರ, ಉಸ್ಮಾನಾಬಾದ್ ಮತ್ತು ನಾಂದೇಡ ಜಿಲ್ಲೆಗಳಾಗಿವೆ. ಇವು ಕ್ರಮವಾಗಿ ಕರ್ನಾಟಕದ ಉತ್ತರ ಜಿಲ್ಲೆಗಳಾದ ಉತ್ತರ ಕನ್ನಡ, ಬೆಳಗಾವಿ, ಬಿಜಾಪುರ, ಕಲಬುರ್ಗಿ ಮತ್ತು ಬೀದರ್‌ಗಳಿಗೆ ಹೊಂದಿಕೊಂಡಿವೆ. ಹೀಗೆ ಈ ಜಿಲ್ಲೆಗಳಿಗೆ ಹೊಂದಿಕೊಂಡ ದಕ್ಷಿಣ ಮಹಾರಾಷ್ಟ್ರದ ಅಥವಾ ಗೋದಾವರಿಯ ದಕ್ಷಿಣ ಭಾಗ ಕ್ರಿ.ಶ. ೧೩ನೆಯ ಶತಮಾನದವರೆಗೆ ಕನ್ನಡ ಸಂಸ್ಕೃತಿಯನ್ನು ಪೋಷಿಸುತ್ತಿತ್ತು ಎಂಬ ಮಾತು ಚಾರಿತ್ರಿಕ ಸತ್ಯವಾಗಿ ದೃಢಪಡುತ್ತದೆ. ಇದನ್ನು ಪೋಷಿಸುವ ನಿಟ್ಟಿನಲ್ಲಿ ಗರಿಷ್ಠ ೭೬ ಮರಾಠಿ ಶಾಸನಗಳು ಸತ್ವ ಮತ್ತು ಗಾತ್ರದ ದೃಷ್ಟಿಯಿಂದ ಸಾಧಾರಣವಾಗಿದ್ದು, ಆ ಭೂಭಾಗದಲ್ಲಿ ಕನ್ನಡ ಶಾಸನಗಳೇ ಸಾರ್ವಭೌಮ ಸ್ಥಾನವನ್ನು ಪಡೆದಿದ್ದವು ಎಂಬುದನ್ನು ಸಾಬೀತುಪಡಿಸುತ್ತವೆ. ಈ ಸಂದರ್ಭದಲ್ಲಿ ಕನ್ನಡ ಶಾಸನಗಳು ಗೋದಾವರಿಯ ಉತ್ತರಕ್ಕೂ ಆಂಶಿಕವಾಗಿ ಹರಡಿದ್ದವು ಎಂಬುದನ್ನು ಮರೆಯಲಾಗದ್ದಾಗಿದೆ.

ಕ್ರಿ.ಶ. ೧೩ನೆಯ ಶತಮಾನದ ಉತ್ತರಾರ್ಧದ ಸಂದರ್ಭದಲ್ಲಿ ಈ ಎಪ್ಪತ್ತಾರು ಮರಾಠಿ ಶಾಸನಗಳಲ್ಲಿ ಹಲವು ಕಣ್ಣು ತೆರೆಯಲಾರಂಭಿಸಿದವು. ಇದಕ್ಕೆ ಕಾರಣ ಆಗ ಈ ಭೂಭಾಗದಲ್ಲಿ ಮರಾಠಿ ಸಂಸ್ಕೃತಿಯು ಪ್ರವರ್ಧಮಾನಕ್ಕೆ ಬರುತ್ತಿತ್ತು. ಆದ್ದರಿಂದಲೇ ಈ ಭಾಗವನ್ನು ಆಳುತ್ತಿದ್ದ ಸೇವುಣ "ರಾಜಮನೆತನದ ಕೊನೆಯ ಕಾಲಕ್ಕೆ ಸೇರಿದ ಕೆಲವು ಶಾಸನಗಳು ಮರಾಠಿ ಭಾಷೆಯಲ್ಲಿವೆ."[2]

೨.೨. ಸ್ಥಳನಾಮಗಳು: ಪ್ರಾಚೀನ ಸಂಸ್ಕೃತಿಯ ಅಧ್ಯಯನದ ವಿಷಯದಲ್ಲಿ ಶಾಸನಗಳಿಗಿಂತಲೂ ಸ್ಥಳನಾಮಗಳಿಗೆ ಅಧಿಕ ಮನ್ನಣೆ ಇದೆ. ಕಾರಣ, ಇವು ಶಾಸನಗಳಿಗಿಂತ ಪ್ರಾಚೀನವಾದವು ಮತ್ತು ಕೆಲವು ಶಾಸನಗಳಂತೆ ಇವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸಲಾರವು. ಹೀಗೆ ನಿರ್ದಿಷ್ಟ ಸಂಸ್ಕೃತಿಯೊಂದರ ಪ್ರತೀಕವಾಗಿ ಕಾಣುವ ಈ ಸ್ಥಳನಾಮಗಳು ನೂರಾರು, ಸಾವಿರಾರು ವರ್ಷಗಳವರೆಗೂ ತಾಳಿಕೆಯ ಗುಣವನ್ನು ಹೊಂದಿವೆ. ಆದ್ದರಿಂದ ಪ್ರಾಚೀನ ಸಂಸ್ಕೃತಿಯ ಪಳೆಯುಳಿಕೆಗಳಾಗಿ ಕಾಣುವ ಇವು ಅದೇ ಸಂಸ್ಕೃತಿಯ ಬೇರುಗಳಾಗಿ ಸಹ ಗೋಚರಿಸುತ್ತವೆ.

ಈ ಹಿನ್ನೆಲೆಯಲ್ಲಿ ಗೋದಾವರಿಯ ದಕ್ಷಿಣ ಭಾಗದ ಸ್ಥಳನಾಮಗಳು ಆ ಪ್ರದೇಶದ ಪ್ರಾಚೀನ ಭಾಷೆ ಮತ್ತು ಸಂಸ್ಕೃತಿಯತ್ತ ಕೈತೋರುತ್ತವೆ. ಈ ಭಾಗದ ಕನ್ನಡ ಶಾಸನಗಳನ್ನು ಆಧರಿಸಿ ಅಲ್ಲಿಯ ಮೂಲಭೂತ ಸ್ಥಳನಾಮಗಳು ಇಂದು ಪಡೆದಿರುವ ಅವಸ್ಥಾಂತರವನ್ನು ಗುರುತಿಸಿ ಪ್ರಸ್ತುತ ಚರ್ಚೆ ಸಾಗುತ್ತದೆ. ಅಂದಿನ 'ಲಟ್ಟಲೂರು' ಇಂದು 'ಲಾತೂರ್' ಆಗಿದೆ. ಇದು ಉಸ್ಮಾನಬಾದ್ ಜಿಲ್ಲೆಯಲ್ಲಿದೆ. ಅಂತೆಯೇ ಕ್ರಮವಾಗಿ–

ಸೊನ್ನಾಲಿಗೆ	–	ಸೊಲ್ಲಾಪುರ	–	ಸೊಲ್ಲಾಪುರ ಜಿಲ್ಲೆ
ನಂದಿತಟ	–	ನಾಂದೇಡ್	–	ಸೊಲ್ಲಾಪುರ ಜಿಲ್ಲೆ
ತಡಕಲ್ಲು	–	ತಡಖೇಲ್	–	ನಾಂದೇಡ್ಜಿಲ್ಲೆ
ಕುಂತಲವಾಡ	–	ಕುತ್ವಾಡ	–	ನಾಂದೇಡ್ ಜಿಲ್ಲೆ
ಇಟ್ಟಿಗೆಹಳ್ಳಿ	–	ಇಟ್ಕಲ್	–	ಉಸ್ಮಾನಬಾದ್ ಜಿಲ್ಲೆ
ಸಂಗವಳ್ಳಿ	–	ಸಾಂಗಲಿ	–	ಸಾಂಗಲಿ ಜಿಲ್ಲೆ
ಅಮರಾವತಿಪುರ	–	ಅಮರಪುರ್	–	ನಾಂದೇಡ್ ಜಿಲ್ಲೆ[೮]

ಹೀಗೆ ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ಈ ಸ್ಥಳನಾಮಗಳ ಪಟ್ಟಿಯನ್ನು ಸಂಖ್ಯೆ ನೂರಕ್ಕೂ ಮಿಕ್ಕಿ ಬೆಳೆಸಬಹುದು. ಆದ್ದರಿಂದ ಕವಿರಾಜಮಾರ್ಗಕಾರನ ಕನ್ನಡ ಜನಪದದ ಗಡಿವಿಚಾರಕ್ಕೆ ಇವುಗಳಿಂದಲೂ ಪುಷ್ಟಿ ದೊರೆತಂತಾಯಿತು.

೨.೩. ವೀರ–ಮಾಸ್ತಿಕಲ್ಲುಗಳು: ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಕನ್ನಡ ಸಂಸ್ಕೃತಿಯ ವೈಶಿಷ್ಟ್ಯಗಳು. ಇವು ಕ್ರಿ.ಶ. ಹತ್ತರಿಂದ ಹದಿಮೂರನೆಯ ಶತಮಾನಗಳ ಅವಧಿಯಲ್ಲಿ ಹಿಂದೆ ಪ್ರಸ್ತಾಪಿಸಿದ ಗೋದಾವರಿ ನದಿಯ ದಕ್ಷಿಣ ಪ್ರದೇಶದಲ್ಲಿ ನೂರಾರು ಸಂಖ್ಯೆಯಲ್ಲಿ ದೊರೆತಿವೆ. ಅಲ್ಲದೆ ಇವುಗಳ ಮೇಲೆ ಲಿಖಿಸಲ್ಪಟ್ಟ ಭಾಷೆಯೂ ಕನ್ನಡದ್ದೇ ಆಗಿದೆ. ಈ ನಡುವೆ ಮರಾಠಿ ಮತ್ತು ಅರೆ ಮರಾಠಿ ಲಿಖಿತಗಳನ್ನೊಳಗೊಂಡ ಇಂತಹ ಕಲ್ಲುಗಳು ಹತ್ತು – ಹದಿನೈದಕ್ಕಿಂತ ಹೆಚ್ಚು ದೊರಕಲಾರದು ಎಂಬ ಶಂಬಾ ಜೋಶಿ ಅವರ ಮಾತನ್ನೇ ಎಂ.ಎಂ. ಕಲಬುರ್ಗಿ ಅವರು ಸಹ ಪೋಷಿಸುತ್ತಾರೆ.[೯]

ಈ ಹಿನ್ನೆಲೆಯಲ್ಲಿ ವೀರ– ಮಾಸ್ತಿಕಲ್ಲುಗಳು ಕೂಡ ಗೋದಾವರಿಯ ದಕ್ಷಿಣ ಪ್ರದೇಶದಲ್ಲಿ ಕನ್ನಡ ಸಂಸ್ಕೃತಿ ಇತ್ತು ಎಂಬುದನ್ನು ದೃಢೀಕರಿಸುತ್ತವೆ.

೨.೪. ಹಸ್ತಪ್ರತಿಗಳು, ದೇವಾಲಯಗಳು ಮತ್ತು ಮಠಗಳು : ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ನೂರಾರು ದೇವಾಲಯಗಳು, ಹತ್ತಾರು ಮಠಗಳು ಇಂದಿಗೂ ಮಹಾರಾಷ್ಟ್ರದಲ್ಲಿ ಇವೆ. ಅದರಲ್ಲೂ ಸೊಲ್ಲಾಪುರ, ಸಾಂಗಲಿ, ನಾಂದೇಡ್ ಮೊದಲಾದ ಜಿಲ್ಲೆಗಳಲ್ಲಿ ಇಂದಿಗೂ ಇದರ ಆಧಿಕ್ಯ ಹೆಚ್ಚು. ಈ ನಿಟ್ಟಿನಲ್ಲಿ ಕೆಲವು ದೇವಾಲಯಗಳ ಹೆಸರುಗಳನ್ನು ಗಮನಿಸಬಹುದು–

ಜೋಗೇಶ್ವರ	–	ಉಸ್ಮಾನಾಬಾದ್ ಜಿಲ್ಲೆ
ಮಾಣಿಕೇಶ್ವರ	–	ಉಸ್ಮಾನಾಬಾದ್ ಜಿಲ್ಲೆ
ನಗರೇಶ್ವರ	–	ನಾಂದೇಡ್ ಜಿಲ್ಲೆ
ಸರ್ವೇಶ್ವರ	–	ನಾಂದೇಡ್ ಜಿಲ್ಲೆ
ರೇವಣೇಶ್ವರ	–	ನಾಂದೇಡ್ ಜಿಲ್ಲೆ
ಕಪಿಲಸಿದ್ಧ ಮಲ್ಲೇಶ್ವರ	–	ಸೊಲ್ಲಾಪುರ ಜಿಲ್ಲೆ
ಕನ್ನೇಶ್ವರ	–	ಸೊಲ್ಲಾಪುರ ಜಿಲ್ಲೆ
ಮಲ್ಲಿಕಾರ್ಜುನ	–	ಸೊಲ್ಲಾಪುರ ಜಿಲ್ಲೆ
ಸಿದ್ಧನಾಥ	–	ಸಾಂಗ್ಲಿ ಜಿಲ್ಲೆ
ಉಕ್ಕೇಶ್ವರ	–	ಸಾಂಗ್ಲಿ ಜಿಲ್ಲೆ

ಸೊಲ್ಲಾಪುರ ಮುಂತಾದೆಡೆಗಳಲ್ಲಿ ಇಂದಿಗೂ ಉಳಿದಿರುವ ವೀರಶೈವ ಮಠಗಳಲ್ಲಿ ಕನ್ನಡ ಹಸ್ತಪ್ರತಿಗಳು ವಿಶೇಷ ಸಂಖ್ಯೆಯಲ್ಲಿ ದೊರೆಯುತ್ತವೆ.

ಈ ಹಿನ್ನೆಲೆಯಲ್ಲಿ ದಕ್ಷಿಣ ಮಹಾರಾಷ್ಟ್ರವನ್ನು ಪ್ರಾಚೀನ ಕರ್ನಾಟಕದ ಒಂದು ಭಾಗ ಎಂದು ಕರೆಯುವುದರಲ್ಲಿ ಸತ್ಯಾಂಶವೇ ಅಡಗಿದೆ. ಅಲ್ಲದೆ ೨೦,೦೦೦ ಕನ್ನಡ ಶಾಸನಗಳನ್ನು ಹೊಂದಿರುವ ಕನ್ನಡ ನಾಡು ಇಂದು ಭೌಗೋಳಿಕವಾಗಿ ಕಿರಿದಾಗಿದ್ದರೂ ಹಿರಿದಾದ ಇತಿಹಾಸವನ್ನು ಹೊಂದಿದೆ. ಇದಕ್ಕೆ ವ್ಯತಿರಿಕ್ತವಾಗಿ ಕೇವಲ ೭೬ ಮರಾಠಿ ಶಾಸನಗಳ ಮೂಲಕ ಕಿರಿಯ ಇತಿಹಾಸವನ್ನು ಹೊಂದಿರುವ ಮಹಾರಾಷ್ಟ್ರ ಇಂದು ಭೌಗೋಳಿಕವಾಗಿ ಹಿರಿದಾಗಿದೆ.

ಈ ಸನ್ನಿವೇಶದಲ್ಲಿ 'ಕವಿರಾಜಮಾರ್ಗ'ದಲ್ಲಿ ಪ್ರಸ್ತಾಪಗೊಳ್ಳುವ ಕನ್ನಡ ನಾಡಿನ ಉತ್ತರದ ಗಡಿ ವಿಚಾರ ಸಮಕಾಲೀನ ಸಂದರ್ಭದಲ್ಲಿ ಹಲವು ತಲ್ಲಣಗಳನ್ನು ಉಂಟುಮಾಡುತ್ತದೆ.

ಇನ್ನು ದಕ್ಷಿಣದ ಗಡಿಯ ವಿಚಾರ : ಅಂದಿನ ಕನ್ನಡ ನಾಡಿನ ದಕ್ಷಿಣದ ಗಡಿ ಕಾವೇರಿ ನದಿಯಾಗಿತ್ತೆಂಬುದು 'ಕವಿರಾಜಮಾರ್ಗ'ದ ಮಾತು. ಈ ಮಾತನ್ನು ಪೋಷಿಸುವ ಮತ್ತು ದೃಢಪಡಿಸುವ ನಿಟ್ಟಿನಲ್ಲಿ ಆ ಗಡಿ ಇಂದಿಗೂ ಕಾವೇರಿ ನದಿಯ ಪ್ರದೇಶವೇ ಆಗಿರುವುದರಿಂದ ಪ್ರಸ್ತುತ ಅಧ್ಯಾಯ ಇಲ್ಲಿಗೆ ಕೊನೆಗೊಳ್ಳುತ್ತದೆ.

ಅಡಿಟಿಪ್ಪಣಿಗಳು

೧. ಕೆ. ಕೃಷ್ಣಮೂರ್ತಿ (ಸಂ.), ಕವಿರಾಜಮಾರ್ಗಂ, ಪು. ೪೫, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೩.

೨. ಅದೇ, ಪು. ೧೨.

೩. ಅದೇ, ಪು. ೪೫.

೪. ಅದೇ, ಪು. ೨.

೫. ಅದೇ, ಪು. ೧೦.

೬. ಎಂ.ಎಂ. ಕಲಬುರ್ಗಿ (ಸಂ.), ಮಹಾರಾಷ್ಟ್ರದ ಕನ್ನಡ ಶಾಸನಗಳು, ಪು. ೬, ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ೧೯೮೭.

೭. ಎ.ವಿ. ನರಸಿಂಹಮೂರ್ತಿ (ಸಂ.), ಕರ್ನಾಟಕದ ಸೇವುಣರ ಇತಿಹಾಸ, ಪು. ೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧.

೮. ಜಿ.ಎನ್. ಉಪಾಧ್ಯ (ಸಂ.), ಸಾಧನೆ (ತ್ರೈಮಾಸಿಕ), ಸಂ. ೨೫, ಸಂಚಿಕೆ ೩–೪, ಪು. ೫೮, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೬.

೯. ಅದೇ, ಪು. ೧೪.

*

ಪಂಪ : ನಾಡು-ನುಡಿಗಳ ಅಭಿಮಾನ

ಕನ್ನಡ ಮತ್ತು ಸಂಸ್ಕೃತ -ಈ ಎರಡೂ ಭಾಷೆಗಳಲ್ಲಿ ಅಗಾಧವಾದ ವ್ಯುತ್ಪತ್ತಿಯನ್ನು ಪಡೆದಿದ್ದ ಕವಿ ಪಂಪ. ಅಂತೆಯೇ ಪ್ರಾಕೃತದಲ್ಲಿ ಕೂಡ. ಅದಕ್ಕೆ ನಿದರ್ಶನಗಳಾಗಿ ಅವನ ಎರಡೂ ಕಾವ್ಯಗಳು ಇವೆ.

ಪಂಪನ ಗುರು ದೇವೇಂದ್ರ ಮುನೀಂದ್ರ ; ಜೈನಯತಿ, ಸಂಸ್ಕೃತ ಪಂಡಿತ. ಇವನಿಂದ ಸಂಸ್ಕೃತವನ್ನು ಕಲಿತ ಪಂಪ ಸಂಸ್ಕೃತ ಜೈನ ಸಾಹಿತ್ಯವನ್ನು ವಿಶೇಷ ಆಸಕ್ತಿಯಿಂದ ಅಧ್ಯಯನ ಮಾಡಿರುವುದು ವೇದ್ಯವಾಗುತ್ತದೆ. ಸಂಸ್ಕೃತದ ಜೈನ ಕಾವ್ಯ ಪರಂಪರೆ ಬಹು ದೊಡ್ಡದು. ಇವರಲ್ಲಿ ಮುಖ್ಯರಾದ ಸಮಂತಭದ್ರ, ಪೂಜ್ಯಪಾದ, ರವಿಷೇಣ, ಜಟಾಸಿಂಹನಂದಿ, ವೀರಸೇನ, ಕವಿಪರಮೇಷ್ಠಿ, ಜಿನಸೇನ ಇವರೆಲ್ಲರ ಗಾಢ ಪರಿಚಯ ಕವಿಗಿದೆ. ಸಂಸ್ಕೃತ ಶಾಸ್ತ್ರ ಸಾಹಿತ್ಯದ ಅರಿವೂ ಇದೆ. ಅದರಲ್ಲಿ ಸಂಗೀತ, ನಾಟ್ಯ, ಛಂದಸ್ಸು, ಅಲಂಕಾರಗಳೂ ಸೇರಿವೆ.[೧] ಈ ಹಿನ್ನೆಲೆಯಲ್ಲಿ ಸ್ವತಃ ಕವಿಪ್ರಜ್ಞೆಯುಳ್ಳ ಪಂಪ 'ಆದಿಪುರಾಣ'ವನ್ನು ಸುಂದರವಾಗಿ ಬರೆದನು. ಉದಾಹರಣೆಗೆ 'ಆದಿಪುರಾಣ'ದ ೧೬ನೆಯ ಆಶ್ವಾಸದ ಪದ್ಯವೊಂದರಲ್ಲಿ ತೀರ್ಥಂಕರರ ಸ್ತೋತ್ರವನ್ನು, ಚೈತ್ಯ ಸ್ತೋತ್ರವನ್ನು ಸುದೀರ್ಘವಾಗಿ ಸಂಸ್ಕೃತದಲ್ಲಿಯೇ ಮಾಡುತ್ತಾನೆ. ಅಂತಹ ಕೆಲವು ಪದ್ಯಗಳಲ್ಲಿ ಇದೂ ಒಂದು-

> ಸ ವಹತಿ ಕವಿತಾಗುಣಾರ್ಣವಾಖ್ಯಾನಂ
> ನನು ಭುವನತ್ರಿತಯೇಪ್ಯನನ್ಯರೂಢಾಂ ।
> ನ ವಿಷಯಮಮದೇದದೀಯ ವಾಚಾಂ ರೇದ್ಯ
> ಚತುರಕಧಿಕಾ ಜಿನವಿಂಶತಿಶ್ಶುಭಾಯ ॥

'ವಿಕ್ರಮಾರ್ಜುನ ವಿಜಯ'ಕ್ಕೆ ಸಂಬಂಧಿಸಿದಂತೆ ಸಂಸ್ಕೃತದ ಕವಿ ಪ್ರಮುಖರಾದ ವ್ಯಾಸ, ಗುಣವರ್ಮ, ಬಾಣ, ಭಾರವಿ, ಮಾಘ, ವಲ್ಲಭದೇವ, ಭರ್ತೃಹರಿ, ಅಮರಕವಿ, ಭಾಸ, ಕಾಳಿದಾಸ ಮೊದಲಾದವರ ಕಾವ್ಯಗಳ ಅಧ್ಯಯನವನ್ನು ಕವಿ ಮಾಡಿದ್ದಾನೆ. ಆದ್ದರಿಂದ ತನ್ನ ಈ ಕಾವ್ಯದ ಪೀಠಿಕಾ ಭಾಗದಲ್ಲಿ ವ್ಯಾಸನನ್ನು ನೆನೆಯುತ್ತಾನೆ. "ವ್ಯಾಸ ಮುನೀಂದ್ರರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ ವ್ಯಾಸನನೆಂಬ ಗರ್ವಮೆನಗಿಲ್ಲ" - ಈ ಮಾತಿನಲ್ಲಿ ಕವಿ ವ್ಯಾಸನ ಸಂಸ್ಕೃತ ಭಾರತದ ಆಳ ಅಗಲಗಳನ್ನು ಅರಿತ ಧ್ವನಿಯಿದೆ. ಇಷ್ಟಾಗಿಯೂ ವಿನಯವಿದೆ. ಈ ಅಂಶವನ್ನು ತನ್ನ ಸಮಕಾಲೀನ ಕವಿಗಳೂ ಪಂಡಿತರೂ ಅರಿತಿದ್ದರು ಎಂಬುದಕ್ಕೆ ತಾನೇ ಒಂದು ಉಲ್ಲೇಖವನ್ನು ನೀಡುತ್ತಾನೆ.

ಕತೆ ಪಿರಿದಾದೊಡಂ ಕತೆಯ ಮೆಯ್ಗಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಟಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ॥

ಹೀಗೆ ಒಟ್ಟು ಕಾವ್ಯದ ಕತೆಯ ಆಶಯಕ್ಕೆ ಧಕ್ಕೆ ಬರದ ರೀತಿಯಲ್ಲಿ ಸಮಸ್ತ ಭಾರತವನ್ನು ಅಪೂರ್ವವೆನ್ನುವಂತೆ ಚೆನ್ನಾಗಿ ಹೇಳಲು ಪಂಪನೇ ಸಮರ್ಥ ಎಂದು ಪಂಪನೇ ಹೇಳಿದರೂ ಇದರಲ್ಲಿ ಒಣ ಪ್ರತಿಷ್ಠೆ ಇರದೆ ಸತ್ಯ ನಿರೂಪಣೆ ಇದೆಯೆಂಬುದನ್ನು ಎಲ್. ಬಸವರಾಜು, ಕೆ. ಕೃಷ್ಣಮೂರ್ತಿ ಅವರು ಸಾಧಾರವಾಗಿ ನಿರೂಪಿಸಿದ್ದಾರೆ. ಇದಕ್ಕೆ ನಿದರ್ಶನವಾಗಿ ಒಂದು ಪದ್ಯವನ್ನು ಇಲ್ಲಿ ನೋಡಬಹುದು.

ಅರ್ಜುನನ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲಿ ವೈತಾಳಿಕರು ಹಾಡುವ ನಾಲ್ಕು ಸಂಸ್ಕೃತ ಪದ್ಯಗಳಲ್ಲಿ ಇದು ಒಂದು–

ಆಸೇತೋ ರಾಮ ಚಾಪಾಟನಿ ತಟಯುಗ ಟಂಕಾಕಿತಾಖಂಡ ಖಂಡಾ ।
ದಾ ಪೀಯೂಷಾಬ್ಧಿ ದುಗ್ಧಪ್ಲವ ಧವಳ ಕನತ್ಕಂದರಾನ್ಮಂದ ರಾದ್ರೇಃ ॥
ಆಚಂದ್ರಾರ್ಕ ಪ್ರತಿತೋಭಯಗಿರಿಶಿಖರಾತ್ (ಸ್ವೋ) ದಯಸ್ಯೈಕಹೇತ್ಕೋಃ ।
ಶೈಲೇಳಾಃ ಕಲ್ಪಕಾಳಃ ಕ್ಷಿತಿವಲಯಮಿದಾ ಪಾತು ವಿಕ್ರಾಂತತುಂಗಃ ॥

ಇಂತಹ ಪದ್ಯಭಾಗಗಳು ಎರಡೂ ಕಾವ್ಯಗಳ ಉದ್ದಕ್ಕೂ ಹರಡಿವೆ. ಇದಕ್ಕೆ ಪೂರಕವಾಗಿ "ಕಾಳಿದಾಸ, ವ್ಯಾಸರಷ್ಟೇ ಸಂಸ್ಕೃತ ಪಾಂಡಿತ್ಯ ಪಂಪನಿಗೂ ಇತ್ತು" ಎಂಬ ಎಲ್. ಬಸವರಾಜು ಅವರ ಮಾತು ಇಲ್ಲಿ ಸ್ಮರಣೀಯ.

ಹೀಗೆ ಪಂಪ ಸಂಸ್ಕೃತದಲ್ಲಿ ಗಾಢವಾದ ಪಾಂಡಿತ್ಯವನ್ನು ಪಡೆದಿದ್ದನಾದರೂ ಕಾವ್ಯ ಕೃಷಿ ಮಾಡಿದ್ದು ಮಾತ್ರ ಕನ್ನಡದಲ್ಲಿ; ತನ್ನ ತಾಯ್ನುಡಿಯಲ್ಲಿ. ಈತ ಸಂಸ್ಕೃತದಲ್ಲಿಯಾಗಲಿ ಅಥವಾ ಪ್ರಾಕೃತದಲ್ಲಿಯಾಗಲಿ ಕಾವ್ಯಗಳನ್ನು ಬರೆದಿದ್ದರೆ ರಾಷ್ಟ್ರೀಯ (ಭಾರತೀಯ) ಮಟ್ಟದ ಖ್ಯಾತಿ ಲಭಿಸುತ್ತಿತ್ತು. ಹೀಗಿದ್ದೂ ತಾನು ಸಂಸ್ಕೃತದಲ್ಲಿ ಕಾವ್ಯ ರಚನೆ ಮಾಡದೆ ಎರಡೂ ಕಾವ್ಯಗಳನ್ನು ಕನ್ನಡದಲ್ಲಿಯೇ ರಚಿಸಿದ್ದು ಅವನ ಅಗಾಧ ಕನ್ನಡ ನಾಡು–ನುಡಿಗಳ ಪ್ರೇಮದ ದ್ಯೋತಕವಾಗುತ್ತದೆ.

ಮಾರ್ಗ ದೇಸಿಗಳನ್ನು ಸಮನ್ವಯ ಮಾಡಿಕೊಂಡು ಕನ್ನಡವನ್ನು ಬೆಳೆಸಿ, ಅದರ ಮೂಲಕ ಮುಂದಿನ ಕವಿಗಳಿಗೆ ರಾಜಮಾರ್ಗವನ್ನು ನಿರ್ಮಿಸಿಕೊಟ್ಟ ಶ್ರೇಯಸ್ಸು ಪಂಪನದು. ಯಾವ ಲಕ್ಷಣಕ್ಕೂ ಒಳಗಾಗದೆ ದೇಸಿಗಬ್ಬಿಗ – ದೇಸಿಗರ ಪ್ರತಿಭಾ ಬಲದಿಂದ ಪದ – ಹಾಡುಗಳ ರೂಪದಲ್ಲಿ ಉದಯಿಸಿ ದೇಸಿ ಮತ್ತು ಛಂದಸ್ಸು, ಅಲಂಕಾರ ಮೊದಲಾದ ಲಕ್ಷಣ ಸಂಸ್ಕಾರಗಳನ್ನೊಳಗೊಂಡ ಕವಿಗಳ ಪ್ರತಿಭೆಯಿಂದುಕ್ಕಿದ ಮಾರ್ಗ – ಇವೆರಡನ್ನೂ ತನ್ನ ಕಾವ್ಯಗಳಲ್ಲಿ ಸಮನ್ವಯಗೊಳಿಸಿರುವುದಾಗಿ ಮತ್ತು ಅದರ ಮಹತ್ವವನ್ನು ಅರಿತಿರುವುದಾಗಿ ಪಂಪ ತನ್ನ ಕಾವ್ಯದಲ್ಲಿ ಹೇಳಿದ್ದಾನೆ ಮತ್ತು ಪಾಲಿಸಿದ್ದಾನೆ. ಆ ಉಲ್ಲೇಖಗಳು ಕ್ರಮವಾಗಿ ಹೀಗಿವೆ–

......ಆದಿಪುರಾಣ ವಸ್ತು ಕೃತಿಯಂ ಪೇೞ್ದಿಂ ಬೆಡಂಗಪ್ಪ ಮಾ
ರ್ಗದೊಳಂ ದೇಸಿಯೊಳಂ ಪೊದಟ್ದೆಸೆವಿನಂ ಸಂಸಾರ ಸಾರೋದಯಂ॥[೫]

ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ-
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಿಲ್ದು ತುಂ-
ಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್॥[೬]

ಹೀಗೆ ದೇಸಿ ಮತ್ತು ಮಾರ್ಗದ ಸತ್ವಗಳು ಅವನ ಎರಡೂ ಕಾವ್ಯಗಳಲ್ಲಿ ಸಾಂಸ್ಕೃತಿಕ ನೆಲೆಗಳಲ್ಲಿ ಅಭಿವ್ಯಕ್ತಗೊಂಡಿವೆ.

ವಸ್ತು, ಅಲಂಕಾರ, ಅಷ್ಟಾದಶ ವರ್ಣನೆ ಮೊದಲಾದ ಮಾರ್ಗ ಗುಣಗಳು ಈ ಎರಡೂ ಕಾವ್ಯಗಳಲ್ಲಿ ಇವೆ. ದೇಸಿಗೆ ಸಂಬಂಧಿಸಿದ ಸನ್ನಿವೇಶ ನಿರ್ಮಾಣ, ನುಡಿಗಟ್ಟು, ನಾಣ್ನುಡಿ, ಗಾದೆ ಮೊದಲಾದವೂ ಹೇರಳವಾಗಿವೆ. ಇದರಲ್ಲಿ ದೇಸಿಗೆ ಸಂಬಂಧಿಸಿದಂತೆ ಒಂದು ಉತ್ತಮ ನಿದರ್ಶನವನ್ನು 'ಆದಿಪುರಾಣ'ದಲ್ಲಿ ಕಾಣಬಹುದು.

'ಆದಿಪುರಾಣ'ದ ನಾಲ್ಕನೆಯ ಆಶ್ವಾಸದಲ್ಲಿ ಶ್ರೀಮತಿ – ವಜ್ರಜಂಘರ ವಿವಾಹ ಪ್ರಸಂಗವಿದೆ. ಇದು ಪೂರ್ಣವಾಗಿ ಕನ್ನಡ ಸಂಸ್ಕೃತಿಯ ಒಂದು ವಿವಾಹ ಪದ್ಧತಿ ಮತ್ತು ಅದರ ಪೂರ್ವೋತ್ತರಗಳನ್ನು ಚಿತ್ರಿಸುತ್ತದೆ. ಉದಾಹರಣೆಗೆ ಶ್ರೀಮತಿಯು ತನ್ನ ವಿವಾಹದ ಅನಂತರ ತನ್ನ ಪತಿ ಮತ್ತು ಅತ್ತೆ–ಮಾವಂದಿರ ಜೊತೆಯಲ್ಲಿ ತವರನ್ನು ಬಿಟ್ಟು ಹೊರಡುತ್ತಾಳೆ. ಆಗ ತನ್ನ ತಾಯಿ ಮಗಳಿಗೆ ಹಿತೋಪದೇಶ ಮಾಡುತ್ತಾಳೆ. ಗಂಡನೊಂದಿಗೆ ವಿನಯದಿಂದ ವರ್ತಿಸು, ಗಂಡನ ಸಿಡುಕಿಗೆ ಕೋಪಿಸಬೇಡ, ಅನೇಕ ಉತ್ತಮ ಮಕ್ಕಳನ್ನು ಪಡೆ ಮೊದಲಾಗಿ ನುಡಿದು ಕಣ್ಣೀರು ಸುರಿಸುವ ತಾಯಿಯು ಮಗಳನ್ನು ಬೀಳ್ಕೊಡುತ್ತಾಳೆ. ಹೀಗೆ ಬೀಳ್ಕೊಡುವಾಗಲೂ–

ಪೊಡೆವಡುವಪ್ಪಿಕೊಳ್ವ, ನೆನೆಯುತ್ತಿರಿಮೆಂಬ, ಸಮಸ್ತವಸ್ತುವಂ
ಕುಡುವ, ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ, ಬುದ್ಧಿವೇೞ್ವ ಕ ।
ಯ್ಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ
ಸಿಡಿವ ಬಹುಪ್ರಕಾರ ಜನ ಸಂಕಟಮೊಪ್ಪಿದುದಾ ಪ್ರಯಾಣದೊಳ್॥[೭]

ಹೀಗೆ ಮದುಮಗಳು ತವರನ್ನು ಬಿಟ್ಟು ಹೊರಡುವಾಗ ಮತ್ತೆ ಮತ್ತೆ ತಾಯಿಯನ್ನು, ಸಂಬಂಧಿಕರನ್ನು ನೋಡುವ, ನಮಸ್ಕರಿಸುವ, ನೆನೆಯುತ್ತಿರೆಂದು ಹೇಳುವ, ಕಂಬನಿ ಸುರಿಸುವ ಚಿತ್ರಣಗಳು ಇಂದಿಗೂ ಕಣ್ಣ ಮುಂದೆ ನಡೆಯುತ್ತಿರುತ್ತವೆ. ಇಂತಹ ಸನ್ನಿವೇಶಗಳನ್ನು ಪಂಪ ತನ್ನ ನಾಡಿನಲ್ಲಿ ಕಂಡಿದ್ದಾನೆ, (ಅನುಭವಿಸಿರಲೂಬಹುದು) ಇಲ್ಲಿ ಕಂಡರಿಸಿದ್ದಾನೆ.

ಹೀಗೆ ದೇಸಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ತನ್ನ ಕಾವ್ಯಗಳಲ್ಲಿ ಕಟ್ಟಿಕೊಡುವುದರ ಜೊತೆಗೆ ನಾಲ್ವೆರಲ್ ಮೇಗು (ಪಂ. ಭಾ ೧–೫೦), ನೂಂಕಿ ಕೊಂಕಿ ಮೊಲೆಗಳನುಣ್ಬ ಕಿಶೋರ ಕೇಸರಿಗಳುಮಂ (ವಚನ), ಒಂದಡಕೆಯುಮಿಲ್ಲ (ಪಂ. ಭಾ ೧–೪೪),

ಕೋಡಗಗಟ್ಟುಗಟ್ಟಿ (ಪಂ.ಭಾ. ೧-೬೧), ಪಾವಿಂಗೆ ಪಾಲನೆರೆ (ಪಂ. ಭಾ, ೨-೧), ಆನೆಯ ಕೋಡು ಬಾಗದೆಂಬಂತೆ (ವಚನ) - ಹೀಗೆ ನೂರಾರು ನುಡಿಗಟ್ಟುಗಳನ್ನು ಪಂಪ ತನ್ನ ಭಾರತ ಕತೆಯಲ್ಲಿ ತುಂಬಿದ್ದಾನೆ. ಅಕ್ಕಿಗೊಟ್ಟುಮಡಗೂಳುಣ್ಬಂದಮಂ ಪೋಲದೇ (ಆ.ಪು. ಸಂಗ್ರಹ, ಪ.ಸಂ. ೩೮೦), ಒಡನುಂಡನಲ್ಲನೇ (೬-೬೭), ಜೋಳಕ್ಕೆ ತಪ್ಪು (೯-೮೪), ಮರುಳ್ಗೆ ಧೂಪಮಂ ತೋರಿದ ಮಾಟ್ಕೆಯಿಂ (೭-೧೧) ಈ ಮೊದಲಾದ ನಿದರ್ಶನಗಳು 'ಆದಿಪುರಾಣ'ದ ನುಡಿಗಟ್ಟುಗಳು. ಅಂತೆಯೇ ವೃಷಭನಾಥ ತನ್ನ ಮಗಳಾದ ಸುನಂದೆಗೆ ಪಾಠ ಹೇಳುವಲ್ಲಿ ಅವಳನ್ನು ಸಂಬೋಧಿಸುವ ನಿಟ್ಟಿನಲ್ಲಿ 'ಅಕ್ಕ' ಎನ್ನುವ ಶಬ್ದ, ಭಾರತ ಕತೆಯಲ್ಲಿ ಕರ್ಣನ ಸಾವಿನ ಅನಂತರ ಆತನನ್ನು ಕುರಿತು ಭಾವೋನ್ಮಾದದಿಂದ ಆಡುವ 'ಅಣ್ಣ' (ನೆನೆಯದಿರಣ್ಣ ಭಾರತದೊಳಿಂ ಪೆಱಱಾರುಮನೊಂದೆ") ಎಂಬ ಶಬ್ದಗಳೂ ದೇಸೀ ನುಡಿಗಳೇ ಆಗಿವೆ.

ಹೀಗೆ ಪಂಪ ತನ್ನ ಎರಡೂ ಕೃತಿಗಳಲ್ಲಿ ಮಾರ್ಗ ಮತ್ತು ದೇಸಿಗಳನ್ನು ತಂದಿದ್ದಾನೆ. ಇವೆರಡೂ ಕಾವ್ಯಗಳ ಕೆಲವೆಡೆಗಳಲ್ಲಿ ಪ್ರತ್ಯೇಕವಾಗಿ ಮೇಲ್ಮೆಯನ್ನು ಸಾಧಿಸುತ್ತವೆ. ಉದಾಹರಣೆಗೆ 'ಆದಿಪುರಾಣ'ದ ಮೊದಲ ಆಶ್ವಾಸದ ಪ್ರಾರ್ಥನಾ ಪದ್ಯಗಳು, ಕಡೆಯ ಆಶ್ವಾಸದ ಬಹುಪಾಲು ಪದ್ಯಗಳು ಮೊದಲಾಗಿ ಇಡೀ ಕೃತಿಯ ಹಲವು ಪದ್ಯಭಾಗಗಳೇ ದೀರ್ಘ ಸಮಾಸ ರೂಪಗಳು 'ಮಾರ್ಗ'ವನ್ನು ಪ್ರತಿನಿಧಿಸುತ್ತವೆ. ಇದರ ವಸ್ತು ಕೂಡ 'ಮಾರ್ಗ'ವೇ ಆಗಿದೆ. ಈ ಅಂಶವನ್ನು ಕಾವ್ಯದ ಕಡೆಯ ಆಶ್ವಾಸದ ೪೦ನೆಯ ಪದ್ಯದಲ್ಲಿ "ಆದಿಪುರಾಣ ವಸ್ತು ಕೃತಿಯಂ ಪೇಟ್ದಿಂ ಬೆಡಂಗಪ್ಪ ಮಾರ್ಗದೊಳಂ ದೇಸೆಯೊಳಂ" ಎಂದೂ ದೃಢಪಡಿಸುತ್ತಾನೆ.

ಇಂತಹ ಮಾರ್ಗ- ದೇಸಿ ಸಮನ್ವಯ ಎರಡೂ ಕಾವ್ಯಗಳಲ್ಲಿ ಕಂಡಿದ್ದರೂ 'ಆದಿಪುರಾಣ'ದಲ್ಲಿ 'ಮಾರ್ಗ' ಪ್ರಾಧಾನ್ಯತೆಯನ್ನು ಪಡೆದಿದ್ದರೆ, 'ವಿಕ್ರಮಾರ್ಜುನ ವಿಜಯ'ದಲ್ಲಿ 'ದೇಸಿ' ಪ್ರಾಧಾನ್ಯತೆಯನ್ನು ಪಡೆದಿದೆ.

ಹೀಗೆ ಪಂಪ ಸಂಸ್ಕೃತದಿಂದ ವಸ್ತುವನ್ನು ಸ್ವೀಕರಿಸಿ, ಸಂಸ್ಕೃತ ಪಾಂಡಿತ್ಯ ಮತ್ತು ದೇಸಿಗಬ್ಬ- ನುಡಿಗಳನ್ನು ಕರತಲಾಮಲಕ ಮಾಡಿಕೊಂಡು ಈ ಮಣ್ಣಿನಲ್ಲಿಯೇ ನಿಂತು ಕಾವ್ಯಗಳನ್ನು ಬರೆಯುತ್ತಾನೆ. ಈ ಮೂಲಕ ಕನ್ನಡದ ಪದ ಸಂಪತ್ತಿ, ಕಾವ್ಯದ ಆಯಾಮಗಳು ಸಹ ವಿಸ್ತರಿಸುತ್ತವೆ. ಹೀಗೆ ಕನ್ನಡವನ್ನು ಬಳಸಿ, ಬೆಳಸಿದ್ದಷ್ಟೇ ಅಲ್ಲದೆ ಮುಂದಿನ ಅನೇಕಾನೇಕ ಕವಿಗಳಿಗೂ ಕನ್ನಡವನ್ನು ಬೆಳೆಸಲು ಸ್ಫೂರ್ತಿ - ಪ್ರೇರಣೆಯನ್ನು ನೀಡುತ್ತಾನೆ.

ಇದಿಷ್ಟು ಚರ್ಚೆಯನ್ನು ಪಂಪನ ಎರಡೂ ಕಾವ್ಯಗಳನ್ನು ಅನುಲಕ್ಷಿಸಿ ಮಾಡಲಾಗಿದೆ. ಈಗ 'ಆದಿಪುರಾಣ'ವನ್ನು ಕುರಿತು ಹೆಚ್ಚುವರಿಯಾದ ಪ್ರತ್ಯೇಕ ಚರ್ಚೆಯನ್ನು ಮಾಡಲಾಗುತ್ತದೆ.

'ಆದಿಪುರಾಣ' ಮಹಾಕಾವ್ಯ ಕನ್ನಡದ ಆದಿಕವಿ ಪಂಪನ ಮೊದಲ ಕೃತಿಯಲ್ಲದೇ, ದೊರೆತ ಕೃತಿಗಳನ್ನು ಆಧರಿಸಿ ಇಡೀ ಕನ್ನಡ ಸಾಹಿತ್ಯ ಪರಂಪರೆಯ ಮೊಟ್ಟಮೊದಲ

– ಪದ್ಯ– ಕಾವ್ಯ ಎಂಬುದು ಸರ್ವವಿದಿತ ಸಂಗತಿ. ಸಂಸ್ಕೃತದ ಜಿನಸೇನ ವಿರಚಿತ 'ಪೂರ್ವಪುರಾಣ'ದ ವಸ್ತುವನ್ನಾಧರಿಸಿ ಈ ಕೃತಿಯನ್ನು ರಚನೆ ಮಾಡುವಾಗ ಬಹುಪಾಲು ಮೂಲಕ್ಕೇ ಋಣಿಯಾಗಿದ್ದರೂ ಹಲವೆಡೆಗಳಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾನೆ. ಈ ಸ್ವಂತಿಕೆಯಲ್ಲಿ ನಾಡು–ನುಡಿಗಳ ಪರವಾದ ಕಾಳಜಿಯೂ ವ್ಯಕ್ತವಾಗುತ್ತದೆ. ಅದನ್ನಿಲ್ಲಿ ಸೋದಾಹರಣವಾಗಿ ನಿರೂಪಿಸಲಾಗುವುದು.

'ಆದಿಪುರಾಣ'ದ ಎಂಟನೆಯ ಆಶ್ವಾಸದಲ್ಲಿ ಭರತನು ಚಕ್ರವರ್ತಿಯಾಗುವ ಪ್ರಸಂಗವಿದೆ. ತಂದೆಯಿಂದ ಬಂದ ಸಾಮ್ರಾಜ್ಯಕ್ಕೆ ಚಕ್ರವರ್ತಿಯಾದ ಭರತ ಅದನ್ನು ಮಾಂಡಳಿಕರಿಗೆ ಪುನರ್ ಹಂಚಿಕೆ ಮಾಡುತ್ತಾನೆ. ಅದರಲ್ಲಿ ಕಳಿಂಗ, ವಂಗ, ಗೂರ್ಜರ, ಮಾಳವ, ಚೋಳ, ಪಾಂಡ್ಯ, ಪಲ್ಲವ – ಈ ದೇಶಗಳು ಸೇರಿವೆ. ಈ ಪಟ್ಟಿಯಲ್ಲಿ ಕರ್ಣಾಟ ದೇಶ ಸೇರಿಲ್ಲ.

> ವಿವಿಧ ಕಳಿಂಗ ವಂಗ ಖಸ ಗೂರ್ಜರ ಮಾಳವ ಚೋಳ ಪಾಂಡ್ಯ ಪ
> ಲ್ಲವ ನೃಪಮಂಡಲಂಗಳೊಳಿವರ್ಗಿವು ಜೀವಿತಮೆಂದು ಕೊಟ್ಟು ಪೊ–
> ಣ್ಮುವ ನಿಜವಿಕ್ರಮೈಕರಸಮಂ ಶಿಶು ಭಾವದೊಳಂ ನಿರಂತರಂ
> ಭುವನ ಜನಕ್ಕೆ ಸೂಚಿಸಿದನೀ ತೆಱದಿಂ ಪುರದೇವನಂದನಂ॥

ಇಲ್ಲಿ 'ಕರ್ಣಾಟ'ದ ಪ್ರಸ್ತಾಪ ಇಲ್ಲದಿರುವುದು ಕುತೂಹಲಕರ ಸಂಗತಿಯಾಗಿದೆ. ಇದಕ್ಕೆ ಕಾರಣ, ಪಂಪನು ತನ್ನ ಕನ್ನಡ ದೇಶವನ್ನು ಇಲ್ಲಿ ಯಾವ ರಾಜನಿಗೂ ಕೊಡದೆ, ತನ್ನಲ್ಲೇ ಉಳಿಸಿಕೊಂಡಿರುವುದಾಗುತ್ತದೆ, ವ್ಯಕ್ತವಾಗುತ್ತದೆ. ಆದ್ದರಿಂದ ಇಲ್ಲಿ ಭರತನ ದೇಶ ಕನ್ನಡ ದೇಶವೇ ಆಗಿದೆ. ಆದ್ದರಿಂದ ಈ ಪ್ರದೇಶವನ್ನು ಯಾವ ಮಾಂಡಳಿಕನಿಗೂ ನೀಡುವ ಪ್ರಮೇಯವೇ ಬರುವುದಿಲ್ಲ. ಆದರೆ ಭೌಗೋಳಿಕವಾಗಿ ಇವನ ದೇಶ ಅಯೋಧ್ಯೆಯಾದರೂ ಅದನ್ನು ಸಹ ಕನ್ನಡವೆಂದೇ ಪಂಪ ಇಲ್ಲಿ ಭಾವಿಸಿರುವಂತಿದೆ. ಇದು ಕವಿಯ ಅಭಿಮಾನದ ನೆಲೆ.

ಇದೇ ಕಾವ್ಯದ ೧೩ನೆಯ ಆಶ್ವಾಸದಲ್ಲಿ ಭರತನ ಷಟ್‌ಖಂಡಮಂಡಲವನ್ನು ಗೆಲ್ಲಲು ಕೈಗೊಳ್ಳುವ ದಿಗ್ವಿಜಯ ಮಾಡುವ ಚಿತ್ರಣವಿದೆ. ತನ್ನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟಿದ ಅನಂತರ ಭರತನು ಹಲವು ಸೈನ್ಯಗಳನ್ನು ಒಟ್ಟುಗೂಡಿಸಿ, ಅಂತಃಪುರ ಸ್ತ್ರೀಯರು ಮೊದಲಾದವರೊಂದಿಗೆ ದಿಗ್ವಿಜಯಕ್ಕೆ ಹೊರಡುತ್ತಾನೆ. ಹೀಗೆ ಹೊರಟಾಗ ಆನೆಯ ಮೇಲೆ ಕುಳಿತು ವಿವಿಧ ದೇಶದ ಸೈನ್ಯಗಳನ್ನು ಅವಲೋಕಿಸುತ್ತಾನೆ. ಆಗ ಸೈನ್ಯಾಧಿಪತಿಯು ಆ ಒಂದೊಂದು ಸೈನ್ಯದ ವೈಶಿಷ್ಟ್ಯವನ್ನೂ, ಪರಾಕ್ರಮವನ್ನೂ ಭರತನಿಗೆ ಪರಿಚಯಿಸುತ್ತಾ ಸಾಗುತ್ತಾನೆ. ಅದರಲ್ಲಿ ಪ್ರಾಸಂಗಿಕವಾಗಿ ಕರ್ಣಾಟದೇಶದ ಬಲವನ್ನು ಕುರಿತು ಆಡುವ ಸೇನಾಧಿಕಾರಿಯ ಮಾತುಗಳಲ್ಲಿ ಪಂಪನ ಮನಸ್ಸು ಕೆಲಸ ಮಾಡುವುದನ್ನು ಈ ವಚನ ಭಾಗದಲ್ಲಿ ಕಾಣಬಹುದು.

"ಕೋಮಲ ಶ್ಯಾಮಲಚ್ಛಾಯಾಕಾಯಂ, ಉಪನಿಟಿಲ ಕುಟಿಲ ಘಟಿತ ಜೂಟ ಬಂಧಂ, ಆ ಕೂರ್ಪರ ರಚಿತ ಕಾಲಾಯಸವಲಯ ಭಯಂಕರ ಕರದ್ವಯಂ, ಅಭಿನವ

ಶುಂಭತ್ ಕೌಸುಂಭವೇಣಿಕಾ- ಬಂಧೊಲ್ಲಸನ್ ಮಲ್ಲಿಕಾ ಮುಕುಳಾಕಾರ ವಿತಸ್ತಿ ಮಾತ್ರಾಸಿಧೇನು ಕೋಶಂ, ಅನೇಕ ರುಚಿ ವಿಚಿತ್ರ ನೇತ್ರ ಚೀರಿಕಾತಿರುಚಿರಪ್ರಾಂತ್ರ ಕುಂತಂ, ಅನುತ್ತರೀಯ ಕಂಟಕಂ, ಅತಿಸುಭಟಮದೋತ್ಕಟ ಮಿದುಕಾರ್ಣಾಟ ಬಲಂ॥"

'ಆದಿಪುರಾಣ'ದ ೧೧ನೆಯ ಆಶ್ವಾಸದಲ್ಲಿ ಭರತನ ದಿಗ್ವಿಜಯ ಆರಂಭವಾಗುತ್ತದೆ. ಸಕಲಸೈನ್ಯ ಮತ್ತು ಅಂತಃಪುರ ಸ್ತ್ರೀಯರೊಂದಿಗೆ ದಿಗ್ವಿಜಯ ಹೊರಟ ಭರತ ಹಲವು ರಾಜರನ್ನು ಗೆದ್ದು ಗಂಗಾ ನದಿಯ ತೀರಕ್ಕೆ ಬರುತ್ತಾನೆ. ಅದು ಬೇಸಿಗೆಯ ಕಾಲ. ಸಹಜವಾಗಿಯೇ ಬಳಲಿಕೆ ಹೆಚ್ಚಾಗಿರುತ್ತದೆ. ಆದ್ದರಿಂದ ಭರತನು ಅಲ್ಲಿಯೇ ವಿರಮಿಸುತ್ತಾನೆ. ಆಗ ಅವನ ಅಂತಃಪುರಸ್ತ್ರೀಯರು ಮಾತ್ರ ಸಮೀಪವಿದ್ದ ವನವೊಂದಕ್ಕೆ ಪ್ರವೇಶ ಮಾಡುತ್ತಾರೆ. ಆ ವನದಲ್ಲಿ ವಿವಿಧ ಜಾತಿಯ ಮರ, ಗಿಡ, ಬಳ್ಳಿಗಳು ಹೆಣೆದಿರುತ್ತವೆ. ಹೂ, ಚಿಗುರು, ಫಲ ಮೊದಲಾದವುಗಳಿಂದ ಸಮೃದ್ಧತೆಯನ್ನು ಪಡೆದಿರುತ್ತದೆ. ಇಂತಹ ವನವನ್ನು ಪ್ರವೇಶಿಸಿದ ಅಂತಃಪುರ ಸ್ತ್ರೀಯರು ಇವುಗಳೊಂದಿಗೆ ವಿವಿಧ ಕೇಳಿ-ವಿಹಾರಗಳಲ್ಲಿ ತೊಡಗುತ್ತಾರೆ. ಅವುಗಳ ಸಾಮೀಪ್ಯ ಹೊಂದಿ ಹೃದಯಸಂವಾದ ನಡೆಸುತ್ತಾರೆ. ಆಗ ಒಬ್ಬೊಬ್ಬ ಸ್ತ್ರೀ ಕೂಡ ಒಂದೊಂದು ಜಾತಿಯ ಹೂ, ಗಿಡ, ಮರಗಳನ್ನು ಮೆಚ್ಚಿ, ಅವುಗಳೊಂದಿಗೆ ಆತ್ಮೀಯತೆಯನ್ನು ಸಂಪಾದಿಸುತ್ತಾರೆ. ಈ ಸನ್ನಿವೇಶದಲ್ಲಿ ಒಂದೊಂದು ಗಿಡ-ಮರ-ಬಳ್ಳಿಯನ್ನು ಕುರಿತು ವಿವಿಧ ಸ್ತ್ರೀಯರು ಸಂಭಾಷಿಸುವಲ್ಲಿ ಪಂಪನ ಪ್ರಕೃತಿ ಪ್ರೇಮ ವ್ಯಕ್ತವಾಗುತ್ತದೆ. ಅಂತಿಮವಾಗಿ ಅವುಗಳಿಂದ ಹೂವು, ಚಿಗುರುಗಳನ್ನು ಕಿತ್ತು ಮುಡಿದುಕೊಳ್ಳುವಲ್ಲಿ ಅವುಗಳಿಗೆ ನೋವಾಯಿತೆಂದು ಭಾವಿಸಿ ಕ್ಷಮೆ ಯಾಚಿಸುತ್ತಾರೆ, ವಿಷಾದಪಡುತ್ತಾರೆ. ಈ ಸನ್ನಿವೇಶದಲ್ಲಿ ಪಂಪನ ಪರಿಸರಪ್ರಜ್ಞೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ನನ್ನ ಅಧ್ಯಯನದ ವಿವಕ್ಷೆಯಂತೆ, ಕಾವ್ಯದ ಕತೆಯ ದೃಷ್ಟಿಯಿಂದ ಇದು ಉತ್ತರದೇಶದ ಗಂಗಾ ತೀರದ ವನವೇ ಆಗಿದ್ದರೂ ವಾಸ್ತವವಾಗಿ ಪಂಪ ತನ್ನ ಬದುಕಿನ ಸಾರವತ್ತಾದ ದಿನಗಳನ್ನು ಕಳೆದ ಭೂಮಿಕೆಯೇ ಇದಾಗಿದೆ. ಇದು ಬನವಾಸಿ ನಾಡನ್ನು ನೆನಪಿಗೆ ತರುವುದಲ್ಲದೇ ಅದೇ ಆಗಿದ್ದರೂ ಆಶ್ಚರ್ಯವಿಲ್ಲ. ಅಲ್ಲದೇ ಮಾವು, ಮಲ್ಲಿಗೆ, ಜಾಜಿ, ಸಂಪಿಗೆ, ಗೊಜ್ಜಗೆ, ಸುರಹೊನ್ನೆ, ಕರ್ಣಿಕಾರ, ಸೇವಂತಿಗೆ ಮೊದಲಾದ ಹೂವುಗಳು ಕರ್ನಾಟಕದ ವೈಶಿಷ್ಟ್ಯವಲ್ಲದೇ ಗಂಗಾ ನದಿ ತೀರ ಪ್ರದೇಶದ ವೈಶಿಷ್ಟ್ಯಗಳೆಂದು ಯಾರೂ ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಹೇಳಲಾರರು. ಆದ್ದರಿಂದ ಇದು ಸ್ಪಷ್ಟವಾಗಿ ಅಭಿಮಾನದ ನೆಲೆಯಿಂದ ಕೂಡಿದ ಪಂಪನ ನಾಡಿನ ವರ್ಣನೆ. ಕವಿ ಪ್ರತಿಭೆ ನಾಡಿನ ಅನುಭವಗಳನ್ನು ಗ್ರಹಿಸುವುದು ಹೀಗೆ.

ಈ ಪ್ರಸಂಗದಲ್ಲಿ ವಿವಿಧ ಜಾತಿಯ ಮರ, ಗಿಡ, ಬಳ್ಳಿ ಮತ್ತು ಅವುಗಳ ಚಿಗುರು, ಹೂವುಗಳೊಂದಿಗೆ ಹೆಂಗಳೆಯರು ಸಂವಾದಿಸುವಲ್ಲಿ ಅವರ ಮನದಲ್ಲಿ ಪಂಪನ ನಿಸರ್ಗಪ್ರೇಮ ಕ್ರಿಯಾಶೀಲವಾಗಿದೆ ಎಂದು ಹಿಂದೆ ಹೇಳಲಾಗಿದೆ. ಆದರೆ ಮಾವು ಮತ್ತು ಕೋಗಿಲೆಯನ್ನು ಕುರಿತಾಗ ಮಾತ್ರ ಪಂಪನ ಒಟ್ಟು ನಿಸರ್ಗ ಪ್ರೇಮ ಏಕೀಭವಿಸಿ

ಅವುಗಳನ್ನು ಕುರಿತ ಅಭಿವ್ಯಕ್ತಿಯನ್ನು ನೀಡುತ್ತದೆ. ಮಾವನ್ನು ಕುರಿತು ತನ್ನ ಎರಡೂ ಕಾವ್ಯಗಳ ಉದ್ದಕ್ಕೂ ವಿವಿಧ ನೆಲೆಗಳಲ್ಲಿ ಅಭಿವ್ಯಕ್ತಿ ನೀಡುತ್ತಾನೆ ಕವಿ. ಆದರೂ ಪ್ರಸ್ತುತ ಸನ್ನಿವೇಶದಲ್ಲಿ ಇದನ್ನು ಕುರಿತು ಹಲವಾರು ಪದ್ಯಗಳಲ್ಲಿ ತನ್ನ ಪ್ರೀತಿಯನ್ನು ತೋರ್ಪಡಿಸಿಕೊಳ್ಳುತ್ತಾನೆ. ಹೀಗೆ ವಿವಿಧ ಜಾತಿಯ ಗಿಡ–ಬಳ್ಳಿ–ಮರ, ಹೂ–ಚಿಗುರುಗಳಿಗೆ ಈ ಆಶ್ವಾಸದಲ್ಲಿ ತಲಾ ಒಂದೆರಡು ಪದ್ಯಗಳು ಮಾತ್ರ ಮೀಸಲಾಗಿದ್ದರೆ, ಮಾವನ್ನು ಕುರಿತು ಓತಪ್ರೋತವಾಗಿ ವರ್ಣಿಸುತ್ತಾನೆ. ಅಂತಹ ಪದ್ಯಗಳಲ್ಲಿ ಒಂದು ಹೀಗಿದೆ–

> ತಳಿರೊಳ್ ನೀನೆ ಬೆಡಂಗನಯ್, ನನೆಗಳೊಳ್ ನೀ ಚೆನ್ನನಯ್, ಪುಷ್ಪಸಂ
> ಕುಳದೊಳ್ ನೀನೆ ವಿಳಾಸಿಯಯ್, ಮಿಡಿಗಳೊಳ್ ನೀ ನೀರನಯ್, ಪಣ್ತ ಪ ।
> ಣ್ಗಳೊಳೋವೋ ಪೆಱತೇನೋ ನೀನೆ ಭುವನಕ್ಕಾರಾಧ್ಯನೈ, ಭೃಂಗ–ಕೋ
> ಕಿಳ – ಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ॥[10]

ಚಿಗುರಿನಲ್ಲಿ, ಮೊಗ್ಗುಗಳಲ್ಲಿ, ಹೂಗಳ ಸಮೂಹದಲ್ಲಿ, ಮಿಡಿಗಳಲ್ಲಿ ಮಾವೇ ಅತ್ಯಂತ ಚೆಲುವು. ಹಣ್ಣಾದ ಹಣ್ಣುಗಳಲ್ಲಿಯಂತೂ ಮಾವೇ ಇಡೀ ಭೂಮಿಯಿಂದ ಆರಾಧಿಸಲ್ಪಡುವುದು. ಅಲ್ಲದೇ ದುಂಬಿ, ಕೋಗಿಲೆ ಮತ್ತು ಗಿಡಗಳಿಗೆ ಪ್ರಿಯವಾದ ಚೂತ (ಮಾವು) ರಾಜ ಇತರೆ ಮರಗಳು ನಿನ್ನಷ್ಟು ಚೆಲುವಾಗಿರುವುವೆ? ಎನ್ನುವಲ್ಲಿ ಪಂಪನ ಪರಿಸರ ಪ್ರೇಮ ವ್ಯಕ್ತವಾಗುತ್ತದೆ. ಇದರ ಮೂಲಕ ಕವಿ ತನ್ನ ನಾಡಿನ ಒಂದು ಭಾಗವಾದ ಸಸ್ಯ ಸಂಪತ್ತಿನ ಅಭಿವ್ಯಕ್ತಿ ಮತ್ತು ಅದರ ಬಗೆಗಿನ ಅಭಿಮಾನವನ್ನು ಧ್ವನಿಸುತ್ತಾನೆ.

ಇಡೀ ಕೃತಿ ಜೈನ ಧಾರ್ಮಿಕ ನೆಲೆಗಟ್ಟಿನಲ್ಲಿ ರಚಿತಗೊಂಡಿದೆ. ಇಲ್ಲಿ ಪಂಪನ ಸ್ವಂತಿಕೆ ಪ್ರದರ್ಶನಕ್ಕೆ ಅಷ್ಟಾಗಿ ಅವಕಾಶವಿಲ್ಲವಾಗಿದೆ. ಕಾರಣ, ಇದು ಧಾರ್ಮಿಕ ಕೃತಿಯಾದುದರಿಂದ ಮೂಲವನ್ನು ತಿರುಚದೆ, ಅದರ ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಕಡ್ಡಾಯವಾಗಿ ತರಬೇಕಾಗಿದೆ. ಹೀಗೆ ಸರ್ವ ವಿಧದಲ್ಲೂ ಮೂಲಕ್ಕೆ ಹತ್ತಿರವಾಗಿ ಕೃಷಿ ಮಾಡಿದ್ದರೂ ಅಲ್ಲಲ್ಲಿ ಕಾವ್ಯಾತ್ಮಕತೆ ಮಿಂಚಿದೆ. ನಾಡು–ನುಡಿಗಳ ಪ್ರಜ್ಞೆಯೂ ಹೊಮ್ಮಿದೆ. ಹೀಗೆ ಇಡೀ ಕೃತಿಯಲ್ಲಿ ಪಂಪ "ಕೈಕಟ್ಟಿಸಿಕೊಂಡು ಪಟ್ಟುಗಳನ್ನು ತೋರಿಸುವ ಗರುಡಿಯಾಳಿನ[11]ಂತೆ ಕಾಣಿಸುತ್ತಾನೆ" ಎಂದು ಹೇಳುವ ತೀನಂಶ್ರೀ ಅವರ ಮಾತು ನೆನಪಾಗುತ್ತದೆ.

'ಆದಿಪುರಾಣ'ದ ಪ್ರಕೃತಿ ವರ್ಣನೆಗಳು, ಪ್ರದೇಶಗಳ ಚಿತ್ರಣ ಇವುಗಳಲ್ಲಿ ನಾಡಿನ ಪ್ರೇಮ ಅಪರೋಕ್ಷವಾಗಿ, ಅಂತರ್ಗತವಾಗಿ ವ್ಯಕ್ತಗೊಂಡಿದೆ. ಈಗಾಗಲೇ ಸಿದ್ಧವಾಗಿರುವ ಆದಿನಾಥನ ಕಥಾನಕವನ್ನು ತನ್ನ ಕಾವ್ಯಕ್ಕೆ ದ್ರವ್ಯವನ್ನಾಗಿಸಿಕೊಂಡಿರುವ ಪಂಪ ನಾಡು–ನುಡಿಗಳನ್ನು ಕುರಿತು ಪ್ರತ್ಯೇಕವಾಗಿ ಚಿಂತಿಸಿದ್ದಾನೆ ಎನ್ನುವುದಕ್ಕಿಂತ ಆ ಪ್ರಜ್ಞೆ ಅವನ ಒಟ್ಟು ಸಂವೇದನೆಯ ಭಾಗವಾಗಿದೆ ಎನ್ನುವುದು ಇಲ್ಲಿ ಮುಖ್ಯ. ಆದರೆ 'ವಿಕ್ರಮಾರ್ಜುನ ವಿಜಯ'ದಲ್ಲಿ ಈ ಪ್ರಜ್ಞೆ ಹೆಚ್ಚು ನಿಚ್ಚಳವಾಗಿ ವಿಶಿಷ್ಟವಾಗಿ ಅಭಿವ್ಯಕ್ತಗೊಂಡಿದೆ.

ಸಂಸ್ಕೃತ ಭಾರತವನ್ನು ಕನ್ನಡಕ್ಕೆ ತಂದು ಅದರ ಕಥಾನಾಯಕನೊಂದಿಗೆ ತನ್ನ ಆಶ್ರಯದಾತನನ್ನು ಸಮೀಕರಿಸಿ ಪಂಪ 'ವಿಕ್ರಮಾರ್ಜುನ ವಿಜಯ'ವನ್ನು ಬರೆದಿದ್ದಾನೆ. ಅರ್ಜುನನ ಸಾಹಸಗಳೊಂದಿಗೆ ಅರಿಕೇಸರಿಯ ಪರಾಕ್ರಮವನ್ನು ಮೇಳಯಿಸಿ ತನ್ನ ನಾಡಿನ ಬಗೆಗಿನ ಚಾರಿತ್ರಿಕ ಪ್ರಜ್ಞೆಯನ್ನು ತೋರಿದ್ದಾನೆ. ಅವನೇ ಹೇಳುವಂತೆ-

> ವಿಪುಳ ಯಶೋವಿತಾನ ಗುಣಮಿಲ್ಲದನಂ ಪ್ರಭುಮಾಡಿ ಪೂರ್ವಭೂ
> ಮಿಪರ್ ಪದಂಗಳಂ ಪುಗಿಸಿ ಪೋಲಿಪೊಡೀತನುದಾತ್ತ ಪೂರ್ವ ಭೂ।
> ಮಿಪರುಮನೊಳ್ಪಿನೊಳ್ ತಗುಳೆವೆಂದೊಡೆಯಿೊ ಕಥೆಯೊಳ್ ತಗುಳ್ಚಿ ಪ್ಪೋ
> ಲಿಪೊಡೆನಗಟ್ಟೆಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್॥

ಹೀಗೆ ತನ್ನ ಆಶ್ರಯದಾತನಾದ ಗುಣಾರ್ಣವ ಬಿರುದಾಂಕಿತ ಅರಿಕೇಸರಿಯ ಕೀರ್ತಿ ಸದಾಕಾಲ ನಿಲ್ಲಲು-

> ವೈರಿ ನರೇಂದ್ರೋದ್ಧಾಮ ದರ್ಪೋದ್ಧಳನನೆ ಕಥಾನಾಯಕಂ ಮಾಡಿ ಸಂದ-
> ರ್ಜುನನೊಳ್ ಪೋಲ್ವೀ ಕಥಾಭಿತ್ತಿಯನನುನಯದಿಂ ಪೇಟಿಲೆಂದೆತ್ತಿಕೊಂಡೆಂ॥[೧೩]

ಎಂದು ಹೇಳುತ್ತಾನೆ. ಹೀಗೆ ಕಾವ್ಯದ ಕಥಾನಾಯಕನೊಂದಿಗೆ ತನ್ನ ಆಶ್ರಯದಾತನನ್ನು ಸಮೀಕರಿಸುವ ತಂತ್ರ ಹಿಂದಿನ ಗುಣವರ್ಮನ ಶೂದ್ರಕನ ಕಾವ್ಯದಲ್ಲಿಯೂ ಇತ್ತು ಎಂದು ವಿದ್ವಾಂಸರು ಊಹಿಸಿದ್ದಾರೆ. ಪಂಪನ ಸಮಕಾಲೀನರಾದ ರನ್ನ, ಪೊನ್ನರ ಕೃತಿಗಳಲ್ಲಿಯೂ ಈ ನೆಲೆಯನ್ನು ಕಾಣಬಹುದಾಗಿದೆ.

ಅಂದಿನ ಕಾಲಕ್ಕೆ ರಾಜಭಕ್ತಿ ರಾಜ್ಯಭಕ್ತಿಯೂ ಆಗಿತ್ತು. ತನ್ನ ರಾಜನ ಮೂಲಕವೂ ರಾಜ್ಯಭಕ್ತಿಯ ಅಭಿವ್ಯಕ್ತಿಯು ಪ್ರಚಲಿತವಿತ್ತು. ಅದರಲ್ಲಿಯೂ ೧೦ ನೆಯ ಶತಮಾನವು ಕ್ಷಾತ್ರಯುಗವಾದುದರಿಂದ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮಾತು ಆ ಯುಗಧರ್ಮದ ಮುಖ್ಯ ತಿರುಳಾಗಿತ್ತು. ಆದ್ದರಿಂದ ಪಂಪ ತನ್ನ ಆಶ್ರಯದಾತನನ್ನು ತನ್ನ ಕಾವ್ಯದ ನಾಯಕನೊಂದಿಗೆ ಸಮೀಕರಿಸುವುದು ಈ ಹಿನ್ನೆಲೆಯ ದೇಶಾಭಿಮಾನದಿಂದ.

ಹೀಗೆ ಸಂಸ್ಕೃತ ಭಾರತದ ಕಥಾಭಿತ್ತಿಗೆ ಕನ್ನಡದ ರಾಜ ಮತ್ತು ಪ್ರದೇಶದ ಪ್ರವೇಶಿಕೆಯು ಇಲ್ಲಿ ಬಹುಮುಖ್ಯವಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಸಂಸ್ಕೃತ ಭಾರತವನ್ನು ಕನ್ನಡಕ್ಕೆ ತಂದು ಅದನ್ನು ಕನ್ನಡಮಯಗೊಳಿಸುವದರ ಮೂಲಕ ತನ್ನ ನಾಡು-ನುಡಿಗಳನ್ನು ಕುರಿತ ಪ್ರಜ್ಞೆಯನ್ನು ಕವಿ ಮೆರೆದಿದ್ದಾನೆ. ಆದ್ದರಿಂದ ಇಲ್ಲಿಯ ಅರ್ಜುನ ಕನ್ನಡಿಗನಾಗುತ್ತಾನೆ. ಕಥೆಯ ಭೂಮಿಕೆ ಕನ್ನಡ ದೇಶವಾಗುತ್ತದೆ. ಹೀಗೆ ಅಖಿಲ ಭಾರತದ ವ್ಯಾಪ್ತಿಯನ್ನು ಪಡೆದಿದ್ದ ವ್ಯಾಸನ ಕಾವ್ಯವನ್ನು ಅಷ್ಟೇ ಸಮರ್ಥವಾಗಿ ಒಂದು ಪ್ರಾದೇಶಿಕ ಕಾವ್ಯವನ್ನಾಗಿ ಮಾಡಿದ್ದು, ಅಂದಿನ ಕಾಲಕ್ಕೆ ಪಂಪನ ಬಹು ದೊಡ್ಡ ಸಾಧನೆ.

ತನ್ನ ನಾಡಿನ ವೀರರ ಕೀರ್ತಿಯನ್ನು ಚಿರಸ್ಥಾಯಿ ಮಾಡುವುದಕ್ಕಾಗಿಯೇ ಪಂಪ ತನ್ನ ಕಾವ್ಯದ ಖಾಂಡವವನ ದಹನದ ಪ್ರಸಂಗದಲ್ಲಿ ಅರಿಕೇಸರಿಯ ಸತ್ಯಸಂಧತೆ,

ಶೌರ್ಯವನ್ನು ಪ್ರಕಟಪಡಿಸುತ್ತಾನೆ. ಕನ್ನಡದ ಅರಸರು ಮಾತಿಗಾಗಿ ಬದುಕುವವರು, ದಾನವೀರರು, ಏಕಾಂಗಶೂರರು ಎಂಬುದನ್ನು ಸಾಧಿಸಲು ಈ ಪದ್ಯವನ್ನು ತರುತ್ತಾನೆ.

> ಒತ್ತಿ ತಱುಂಬಿನಿಂದ ರಿಪುಭೂಜ ಸಮಾಜದ ಬೇರ್ಗಳಂ ನಭ
> ಕ್ಕೆತ್ತದೆ ಬಂದು ತನ್ನ ಮಱೆವೊಕ್ಕಡೆ ಕಾಯದೆ ಚಾಗದೊಳ್ಪಿನ ।
> ಚ್ಚೊತ್ತದೆ ಮಾಣ್ದು ಬಾಳ್ವ ಪುಱುವಾನಸನೆಂಬನಜಾಂಡಮೆಂಬುದೊಳ್ಗಂ
> ದತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೆ ಮುರಾಂತಕಾ ॥

"ಯುದ್ಧ ಮಾಡುವವನು ಸಾಕ್ಷಾತ್ ಇಂದ್ರ, ಬೇಡುವವನು ಅಗ್ನಿ, ಮಾತು ಕೊಟ್ಟಿರುವವನು ನಾನು. ಇದನ್ನು ಪಂಚಭೂತಗಳೂ ತಿಳಿದಿವೆ. ಆದುದರಿಂದ ತಪ್ಪುವುದು ಸರಿಯಲ್ಲ. ಖಾಂಡವವನವನ್ನು ನಾನು ತಡೆಯದೆ ಉಣಿಸುತ್ತೇನೆ. ಶರಣಾಗತರನ್ನು ರಕ್ಷಿಸದೆ, ತ್ಯಾಗ, ಒಳ್ಳೆಯ ಗುಣಗಳನ್ನು ಮುದ್ರಿಸದೆ ತಪ್ಪು ಬಾಳುವವನು ಪುಱು (ಹುಳು)ವಿಗೆ ಸಮಾನ. ಅಂತಹವನು ಬ್ರಹ್ಮಾಂಡವೆಂಬ ಅತ್ತಿಹಣ್ಣಿನಲ್ಲಿರುವ ಹುಳುವಲ್ಲವೆ" ಎಂದು ಅರ್ಜುನನಾದ ಅರಿಕೇಸರಿಯಿಂದ ಹೇಳಿಸಿದ್ದಾನೆ ಪಂಪ.

ಹೀಗೆ ತನ್ನ ಆಶ್ರಯದಾತನನ್ನು ಕಥಾನಾಯಕನೊಂದಿಗೆ ಸಮೀಕರಿಸಿ, ಹಲವು ಉದಾತ್ತ ಗುಣಗಳನ್ನು ಮೆರೆಯುವಂತೆ ಮಾಡುವಲ್ಲಿ ರಾಜ ಮತ್ತು ರಾಜ್ಯ ಭಕ್ತಿಯನ್ನು ಏಕತ್ರವಾಗಿ ವ್ಯಕ್ತಮಾಡುತ್ತಾನೆ.

ಪಂಪನ ದೇಶಪ್ರೇಮವು ಬನವಾಸಿ ವರ್ಣನೆಯ ಪದ್ಯಗಳಲ್ಲಿ ಮಿಗಿಲಾಗಿ ಒಡಮುರಿದೆದ್ದಿದೆ. ಇದರಿಂದ ಬನವಾಸಿಯು ಪಂಪನ ಜನ್ಮಸ್ಥಳವೋ ಅಥವಾ ತನ್ನ ಬದುಕಿನ ಮಹತ್ವದ ದಿನಗಳನ್ನು ಕಳೆದ ಸ್ಥಳವೋ ಎಂಬ ಪ್ರಶ್ನೆಗಳನ್ನು ಇಟ್ಟುಕೊಂಡು ವಿವಿಧ ಸಂಶೋಧಕರು ವಿವಿಧ ತೀರ್ಮಾನಗಳನ್ನು ಕೊಟ್ಟಿದ್ದಾರೆ. ಅಂತಹವರಲ್ಲಿ ಪ್ರಾತಿನಿಧಿಕವಾಗಿ ಎಂ. ಗೋವಿಂದ ಪೈ ಅವರು ಬನವಾಸಿಯನ್ನು ಪಂಪನ ಜನ್ಮಸ್ಥಳವೆಂದು ಸಾಧಾರವಾಗಿ ನಿರೂಪಿಸುತ್ತಾರೆ. ಅದಕ್ಕೆ ಅವರು ಕೊಡುವ ಆಧಾರಗಳು ಇಂತಿವೆ. "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂದು ಅರ್ಜುನನ ಬಾಯಿಂದ ಭಾವೋದ್ರೇಕದಿಂದ ಹೇಳಿಸಲು ಅದು ಪಂಪನ ಜನ್ಮಭೂಮಿಯೇ ಆಗಿರಬೇಕು. ಅಂತೆಯೇ ಅರ್ಜುನನ ಪಟ್ಟಾಭಿಷೇಕದ ಕಾಲದಲ್ಲಿ ಗಂಗಾ, ಗೋದಾ, ಯಮುನಾ ಮಹಾನದಿಗಳ ನೀರನ್ನು ತರುವಾಗ ಸಣ್ಣ ತೊರೆಯಾದ ವರದಾ ನದಿ ನೀರನ್ನು ಸಹ ತರಲಾಗುವುದು. ಈ ನದಿ ಬನವಾಸಿಯಲ್ಲಿ ಹರಿಯುವುದು. ಪಂಪ ಬನವಾಸಿಯವನಾಗಿರುವುದರಿಂದ ಅಲ್ಲಿ ಹರಿಯುವ ನದಿಯ ಬಗ್ಗೆಯೂ ಸಹಜವಾಗಿಯೇ ಅಭಿಮಾನ.

ತಾನು ಸಾಜದ ಪುಲಿಗೆರೆಯ ತಿರುಳ್ಗನ್ನಡದಲ್ಲಿ ಕಾವ್ಯ ಬರೆದುದಾಗಿ ಹೇಳುತ್ತಾನೆ. ಈ ಪುಲಿಗೆರೆಯ ನೆರೆಯ ಭಾಗವೇ ಬನವಾಸಿ. ಆದ್ದರಿಂದ ತನಗೆ ತಿರುಳ್ಗನ್ನಡವು ಜನ್ಮತಃ ಪ್ರಾಪ್ತವಾಗಿತ್ತು.

'ಆದಿಪುರಾಣ'ದಲ್ಲಿಯ (೧, ೨೮), 'ಕದಂಬಕ ವಿಷಯ' ಎಂಬ ಪದವು ಬನವಾಸಿ ದೇಶವನ್ನೇ ಸೂಚಿಸುತ್ತದೆ.

ಈ ಆಧಾರಗಳ ಹಿನ್ನೆಲೆಯಲ್ಲಿ ಪೈ ಅವರು ಪಂಪ ಆಂಧ್ರದ ವೆಂಗಿಪಟು ಎಂಬ ಊರಿನವನಾಗಿರದೇ ಜನ್ಮತಃ ಬನವಾಸಿ ದೇಶದವನೇ ಎಂದು ಸಮರ್ಥಿಸುತ್ತಾರೆ.

ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯಗಳು ಬರುವಂತೆ ಹಲವು ಸಂಶೋಧಕರು ಮಾತನಾಡುತ್ತಾರೆ. ಅವರಲ್ಲಿ ಪ್ರಾತಿನಿಧಿಕವಾಗಿ ಪಾಂಡುರಂಗ ದೇಸಾಯಿಯವರ ಚರ್ಚೆಯನ್ನು ಸಂಕ್ಷಿಪ್ತವಾಗಿ ಪರಿಶೀಲಿಸಬಹುದು.

ಪಂಪ ಬನವಾಸಿ ದೇಶದವನು ಎಂಬುದಕ್ಕೆ ಯಾವುದೇ ಬಲವಾದ ಪ್ರಮಾಣ ತನ್ನ ಎರಡೂ ಗ್ರಂಥಗಳಲ್ಲಿ ಇಲ್ಲ.

'ವಿಕ್ರಮಾರ್ಜುನವಿಜಯ'ದ ಕೊನೆಯಲ್ಲಿ ಕವಿ ತನ್ನ ಕುಲಶೀಲಗಳನ್ನು ನಿವೇದಿಸುವಾಗ ತನ್ನ ನಾಲ್ಕನೆಯ ಪೂರ್ವಜನು ವೆಂಗಿಮಂಡಲದ ವೆಂಗಿಪಟು ಎಂಬ ಅಗ್ರಹಾರದವನು ಎಂದು ಸ್ಪಷ್ಟವಾಗಿ ಹೇಳಿದ್ದಾನೆ (ಪಂ. ಭಾ. ೧೪-೪೦).

ತನ್ನ ಆತ್ಮಚರಿತ್ರಾತ್ಮಕ ನಿವೇದನೆಗಳಲ್ಲಿ ಎಲ್ಲಿಯೂ ಬನವಾಸಿ ನಾಡಿನ ಹೆಸರನ್ನು ಪ್ರಸ್ತಾಪಿಸುವುದಿಲ್ಲ.

ವೆಂಗಿಮಂಡಳದ ರಾಜಧಾನಿ ಲೆಂಬುಳಪಾಟಕದಲ್ಲಿ ; ಅರಿಕೇಸರಿಯ ರಾಜಧಾನಿಯಲ್ಲಿ ತಾನು ಇದ್ದದ್ದು ಸ್ಪಷ್ಟವಿರುವುದರಿಂದ ಇದೂ ಒಂದು ಪ್ರಸ್ತುತ ಚರ್ಚೆಗೆ ಆಧಾರವಾಗಿ ನಿಲ್ಲುತ್ತದೆ.೧೪

ಈ ಎರಡರಲ್ಲಿ ಯಾವ ಒಂದು ತೀರ್ಮಾನವನ್ನೂ ಬಲವಾಗಿ ನಂಬುವಂತಿಲ್ಲ. ಕಾರಣ, ಅಧಿಕೃತ ಸಾಕ್ಷ್ಯಾಧಾರಗಳ ಕೊರತೆ. ಆದರೆ ಪಂಪ ಎಲ್ಲಿಯೇ ಹುಟ್ಟಿರಲಿ ಬನವಾಸಿಯಲ್ಲಂತೂ ತನ್ನ ಬದುಕಿನ ಸಾರವತ್ತಾದ ದಿನಗಳನ್ನು ಕಳೆದಿರುವುದರಲ್ಲಿ ಎರಡು ಮಾತಿಲ್ಲ. ಇದಕ್ಕೆ ಆಧಾರಗಳು ಎರಡು ಮೂಲದಿಂದ ಲಭಿಸುತ್ತವೆ. ೧. ಆಂತರಿಕ ೨. ಬಾಹ್ಯ ಪ್ರಮಾಣಗಳು. ಆಂತರಿಕ ಪ್ರಮಾಣಗಳನ್ನು ಆಧರಿಸಿ ಹೇಳುವುದಾದರೆ, ಯಾವೊಬ್ಬ ಕವಿಯು ಒಂದು ಪ್ರದೇಶವನ್ನು ಪ್ರೀತಿಸಿ, ಅದರ ಅಭಿವ್ಯಕ್ತಿಯನ್ನು ಕಾವ್ಯದಲ್ಲಿ ತರುತ್ತಾನೆಂದರೆ, ಅದು ಅವನ ಪ್ರೀತಿಪಾತ್ರವಾದ ನೆಲೆಯೇ ಆಗಿರುತ್ತದೆ. 'ವಿಕ್ರಮಾರ್ಜುನ ವಿಜಯ'ದಲ್ಲಿ ಅರ್ಜುನ ನಾಡಾಡಿಯಾಗಿ ಹೊರಟಾಗ ಬನವಾಸಿಗೆ ಬರುವುದು ಅನಿವಾರ್ಯವೇನಿರಲಿಲ್ಲ. ಆದ್ದರಿಂದ ಅವನು ಬನವಾಸಿಗೆ ಬಂದು ನಾಲ್ಕು ವೃತ್ತಗಳಲ್ಲಿ ದೀರ್ಘವಾಗಿ ತನ್ನ ಮನದಾಳದ ಅಭಿಮಾನವನ್ನು ಹೊರಸೂಸಿದ್ದಾನೆಂದರೆ ಅದು ಅವನ ಬದುಕಿನ, ಕಾಲದ ಅವಿಭಾಜ್ಯ ಅಂಗವೇ ಸರಿ. ಹೀಗೆ ಅರ್ಜುನ ನುಡಿಯುವಲ್ಲಿ ಯಾರಿಗಾದರೂ ಸರಿ, ಅವನಲ್ಲಿ ಪಂಪ ಕಾಣುತ್ತಾನೆಯೇ ವಿನಃ ಅರ್ಜುನ ಕಾಣುವುದಿಲ್ಲ. 'ವಿಕ್ರಮಾರ್ಜುನ ವಿಜಯ'ದ ನಾಲ್ಕನೆಯ ಆಶ್ವಾಸದಲ್ಲಿ ಅರ್ಜುನ ದಿಗ್ವಿಜಯಾರ್ಥವಾಗಿ ಬನವಾಸಿಗೆ ಬರುತ್ತಾನೆ. ಅಲ್ಲಿಯ ಸಂಪತ್ತು, ಪುಷ್ಪವಾಟಿಕೆ, ಲತಾಗೃಹ, ನಂದನವನ ಮೊದಲಾದವನ್ನು ಕಾಣುತ್ತಾನೆ. ಅಲ್ಲಿಯ ಜನರ ನಲಿವನ್ನು ನೋಡಿ, ಅವರು ಪೂರ್ವಜನ್ಮದ ಪುಣ್ಯದಿಂದಲೇ ಅಲ್ಲಿ ಜನ್ಮವೆತ್ತಿರುವರು ಎಂಬ ಧ್ವನಿಯೊಂದಿಗೆ ನಾಲ್ಕು

ವೃತ್ತಗಳಲ್ಲಿ ದೀರ್ಘವಾಗಿ ಆ ನಾಡನ್ನು ಕುರಿತು ಮನದಾಳದ ಭಾವನೆಗಳನ್ನು ಹೊರಹೊಮ್ಮಿಸುತ್ತಾನೆ.

> ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
> ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ ।
> ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
> ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ॥[೧೫]

ಈ ಪದ್ಯದ ಮಾತುಗಳಲ್ಲಿ ಬನವಾಸಿ ನಾಡಿನ ಅತೀವ ಆಕರ್ಷಣೆ ಮತ್ತು ತನಗೆ ಮರುಹುಟ್ಟು ಇದ್ದಲ್ಲಿ ಅದು ಬನವಾಸಿಯಲ್ಲೇ ಆಗಬೇಕು ಎಂಬ ಮನದಾಳದ ಅಭೀಪ್ಸೆ ಇಲ್ಲಿ ಎದ್ದು ಕಾಣುತ್ತದೆ. ಅಲ್ಲದೆ ಮನುಷ್ಯ ಜನ್ಮ ಲಭಿಸದಿದ್ದರೂ ಮರಿದುಂಬಿ ಅಥವಾ ಕೋಗಿಲೆಯಾಗಿಯಾದರೂ ಇಲ್ಲೇ ಹುಟ್ಟಬೇಕು. ಇದಕ್ಕೆ ಪೂರಕವಾಗಿ ಮುಂದಿನ ಪದ್ಯವನ್ನು ನೋಡಬಹುದು.

> ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
> ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ।
> ಪಂಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
> ರಂಕುಸಮಿಟ್ಟೊಡಂ ನೆನವುದೆನ್ನೆಮನಂ ಬನವಾಸಿ ದೇಶಮಮಂ॥[೧೬]

ಇಲ್ಲಿಯ "ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂಬ ಮಾತಿನಲ್ಲಿಯೇ ನೆನಪು- ನೆನವು ಈ ಮಾತು ಪ್ರಸ್ತುತದಲ್ಲಿ ತಾನು ಅನ್ಯ ಪ್ರದೇಶದಲ್ಲಿ ಇರುವುದಾಗಿ ಸೂಚಿಸುತ್ತದೆ. ಅದು ವೆಂಗಿಮಂಡಲವೇ ಆಗಿರುವುದು ಸ್ಪಷ್ಟ. ಇಂತಹ ದೇಶ ನೆನಪಾಗುವ ಸಂದರ್ಭಗಳನ್ನು ಹಲವು ಪ್ರಾಕೃತಿಕ ವೈಚಿತ್ರ್ಯಗಳೊಂದಿಗೆ ಸಮೀಕರಿಸಿ ಹೇಳುವಲ್ಲಿ ಬನವಾಸಿಯ ಬಗೆಗಿರುವ ಕೋಮಲ ಭಾವನೆಗಳು ವ್ಯಕ್ತಗೊಳ್ಳುತ್ತವೆ. ದಕ್ಷಿಣದ ಗಾಳಿ ಸೋಕಿದಾಗ, ಒಳ್ಳೆಯ ಮಾತುಗಳನ್ನು ಕೇಳಿದಾಗ, ಒಳ್ಳೆಯ ಹಾಡನ್ನು ಕೇಳಿದಾಗ, ಅರಳಿದ ಮಲ್ಲಿಗೆಯನ್ನು ಕಂಡಾಗ, ತಾನು ಸಂತೋಷಕ್ಕೆ ಈಡಾದಾಗ ತನಗೆ ಬನವಾಸಿಯ ನೆನಪಾಗುತ್ತದೆ. ಮಧುಮಹೋತ್ಸವ ಎಂಬುದು ವಸಂತಕಾಲ ಮತ್ತು ಬನವಾಸಿಯಲ್ಲಿ ನಡೆಯುವ ಒಂದು ಉತ್ಸವ – ಈ ಎರಡು ನೆಲೆಗಳಲ್ಲಿ ಸಂಶೋಧಕರು ಅರ್ಥೈಸಿದ್ದಾರೆ. ಇಂತಹ ಸನ್ನಿವೇಶಗಳು ಎದುರಾದಾಗ ತನ್ನ ಮನಸ್ಸನ್ನು ಯಾರೇ ಅಂಕುಶದಲ್ಲಿಟ್ಟರೂ ಅದು ಬನವಾಸಿಯನ್ನು ನೆನೆಯದೇ ಇರಲು ಸಾಧ್ಯವಿಲ್ಲ.

ಹೀಗೆ ಈ ಮಾತುಗಳನ್ನು ಆಡುವಾಗ ಬನವಾಸಿಯು ಪಂಪನ ಬದುಕಿನಲ್ಲಿ ಎಷ್ಟರಮಟ್ಟಿಗೆ ಹಾಸುಹೊಕ್ಕಾಗಿತ್ತು, ಅದು ತನ್ನ ಮೇಲೆ ಎಂತಹ ಪ್ರಭಾವ ಬೀರಿತ್ತು ಎಂಬ ಸಂಗತಿಗಳು ವೇದ್ಯವಾಗುತ್ತವೆ.

ಈ ಎಲ್ಲ ಮಾತುಗಳನ್ನು ಆಡುವುದು ಅರ್ಜುನ. ಭಾರತ ಕತೆಯ ಪ್ರಕಾರ ಅರ್ಜುನ ಬನವಾಸಿಗೇ ಬರಬೇಕಿರಲಿಲ್ಲ. ದಕ್ಷಿಣದ ಬೇರಾವುದೋ ದೇಶಕ್ಕೆ ಬರಬಹುದಿತ್ತು. ಆದರೆ ಇಲ್ಲಿಗೇ ಬಂದು, ಇದನ್ನು ಕುರಿತು ಇಷ್ಟೆಲ್ಲಾ ಅಭಿಮಾನಪೂರ್ವಕ ಮಾತುಗಳನ್ನು

ಇವನು ಆಡಿದ್ದಾನೆಂದರೆ ಅಲ್ಲಿ ಅರ್ಜುನನಿಲ್ಲ; ಪಂಪನೇ ಇರುವುದು. ಆದ್ದರಿಂದ ಪಂಪ ಎಲ್ಲಿಯೇ ಇರಲಿ "ತೆಂಕನಾಡ ಮರೆಯಲ್ಕಿನ್ನೇಂ ಮನಂ ಬರ್ಕುಮೆ?"

ಪಂಪ ಮತ್ತು ಬನವಾಸಿಗಿರುವ ಸಂಬಂಧವನ್ನು ಬಾಹ್ಯ ಸಾಮಗ್ರಿಗಳನ್ನು ಆಧರಿಸಿ ಈ ಮುಂದೆ ಚರ್ಚೆ ಮಾಡಬಹುದು.

ಪ್ರಾಚೀನ ಕಾಲದಿಂದಲೂ ಬನವಾಸಿ ಒಂದು ಮುಖ್ಯ ಸಾಂಸ್ಕೃತಿಕ ಕೇಂದ್ರ. ಕ್ರಿ.ಶ. ೫–೬ನೆಯ ಶತಮಾನಗಳಲ್ಲಿ ಕನ್ನಡ ಪ್ರದೇಶವನ್ನು ಆಳಿದ ಕದಂಬರ ರಾಜಧಾನಿಯೂ ಇದೇ ಆಗಿತ್ತು. ಪಂಪನ ಕಾಲಕ್ಕೆ ಇದು ಜೈನ ವಿದ್ಯೆ– ಧರ್ಮ– ತತ್ವಜ್ಞಾನಗಳ ಕೇಂದ್ರವೂ ಆಗಿತ್ತು. ಇದಲ್ಲದೆ ಇದರ ನೆರೆಯ ಹುಂಚ ಮೊದಲಾದ ಕೇಂದ್ರಗಳು ಸಹ ಜೈನಪೀಠಗಳೇ ಆಗಿದ್ದವು. ಆದ್ದರಿಂದ ಬನವಾಸಿ ನಾಡು ಜೈನರನ್ನು ಹಲವು ಕಾರಣಗಳಿಗೆ ತನ್ನೆಡೆ ಸೆಳೆದಿರಲು ಸಾಧ್ಯವಿದೆ. ಆದ್ದರಿಂದ ಪಂಪ ವಿದ್ಯಾರ್ಜನೆಗಾಗಿ ಇಲ್ಲಿಗೆ ಬಂದು ಹೆಚ್ಚಿನ ದಿನಗಳನ್ನು ಕಳೆದಿರಲು ಸಾಧ್ಯವಿದೆ. ವರದಾ ನದಿಯಲ್ಲಿ ಮಿಂದು, ಅದರೊಂದಿಗೆ ಆತ್ಮೀಯತೆಯನ್ನು ಪಡೆದಿದ್ದರಿಂದ ಅರ್ಜುನನ ಪಟ್ಟಾಭಿಷೇಕಕ್ಕೆ ಗಂಗಾ, ಯಮುನಾ ನದಿಗಳ ನೀರನ್ನು ತರುವಾಗ ದಕ್ಷಿಣದ ಮಹಾನದಿಯಲ್ಲದ ಇದರ ನೀರನ್ನು ಸಹ ಪಂಪ ತರಿಸುತ್ತಾನೆ.

ಹೀಗೆ ಬನವಾಸಿ ಮತ್ತು ಅದರ ಭಾಗವಾದ ವರದಾ ನದಿಯನ್ನು ಕುರಿತು ಮಾತನಾಡುವಾಗ ನಾಡಿನ ಬಗೆಗೆ ಇಟ್ಟುಕೊಳ್ಳಬೇಕಾದ ಅಕ್ಕರೆಗೆ ಮಾದರಿಯಾಗುತ್ತಾನೆ.

ಕವಿಗೆ ಮಾವು, ಮಲ್ಲಿಗೆಗಳೆಂದರೆ ಪ್ರಾಣ. ಅವನ್ನು ಅವಕಾಶವಿರುವೆಡೆಗಳಲ್ಲೆಲ್ಲ ತರುತ್ತಾನೆ. ಕೋಗಿಲೆಯ ಇಂಪು, ಅದರಾಶ್ರಯವಾದ ಮಾವು, ಅದರ ಹಣ್ಣು, ರುಚಿ, ಇವುಗಳ ಬಗ್ಗೆ ಪಂಪನಿಗೆ ವಿಶೇಷ ಅನುಭವ – ಒಲವು ಇದೆ. ಕನ್ನಡ ನಾಡಿನ ಈ ವೈಶಿಷ್ಟ್ಯವು ಕವಿ ಹೃದಯವನ್ನು ಮತ್ತೆ ಮತ್ತೆ ಮಿಡಿದಿದೆ. ಕೆಲವು ಕಡೆ ನವಿಲಿನ ವರ್ಣನೆ ಇದೆ. ಇಂತಹ ಪಕ್ಷಿ ಈ ನಾಡಿನಲ್ಲಿರುವುದು, ಇದರ ಮೂಲಕ ಅದರ ನಾಟ್ಯದ ವರ್ಣನೆ ಮಾಡಿ ಕರ್ನಾಟಕದ ನಾಟ್ಯಕಲೆಯ ಬಗೆಗೆ ಧ್ವನಿ ಹೊರಡಿಸುತ್ತಾನೆ. ಹೀಗೆ ಮಾವು, ಮಲ್ಲಿಗೆ, ಕೋಗಿಲೆ, ಮಯೂರ ಮೊದಲಾದವುಗಳ ಮೂಲಕ ಕವಿ ಈ ನಾಡಿನ ಸಾಂಸ್ಕೃತಿಕ ವೈಭವವನ್ನು ಧ್ವನಿಸುತ್ತಾನೆ.

ಪಂಪನ ಕಾವ್ಯಗಳಲ್ಲಿ ಬರುವ ಪ್ರಕೃತಿ ವರ್ಣನೆ, ಕುವೆಂಪು ಅವರನ್ನು ನೆನಸುವಂತೆ ಮಾಡುತ್ತದೆ. ಇಂತಹ ವರ್ಣನೆಯಲ್ಲಿ ಪರಿಸರ ಪ್ರಜ್ಞೆ ಮತ್ತು ದೇಶದ ಬಗೆಗಿನ ಅಭಿಮಾನವನ್ನು ಏಕತ್ರವಾಗಿ ಅಭಿವ್ಯಕ್ತಪಡಿಸಿದ್ದಾನೆ ಕವಿ. 'ವಿಕ್ರಮಾರ್ಜುನ ವಿಜಯ'ದ ಕಾವ್ಯಾರಂಭದಲ್ಲಿ ಕುರುಜಾಂಗಣವನ್ನು ವರ್ಣಿಸುತ್ತಾ "ಮಳೆಯಿಂದಲೇ ಬೆಳೆಯುವ ಹೊಲಗದ್ದೆಗಳು ಸುವಾಸನಾಯುಕ್ತವಾದ ಭತ್ತವನ್ನು ಬೆಳೆಯುತ್ತವೆ, ರಮ್ಯವಾದ ತೋಟದ ಸಾಲು, ವಿರಹಿಗಳಿಗೆ ಪ್ರೀತಿಯನ್ನು ಹೆಚ್ಚಿಸುತ್ತವೆ" ಎನ್ನುತ್ತಾನೆ.

ಅವಲರುಂ ಪಣ್ಣುಂ ಬೀ
ತೋವವುಗಡ ಬೀಯವಲ್ಲಿ ಮಲ್ಲಿಗೆಗಳುಮಿ।
ಮ್ಮಾವುಗಳುಮೆಂದೊಡಿನ್ ಪೆಱ
ತಾವುದು ಸಂಸಾರ ಸಾರ ಸರ್ವಸ್ವ ಫಲಂ॥[೧೭]

ಮಿಡಿದೊಡೆ ತನಿಗರ್ವು ರಸಂ
ಬಿಡುವುವು ಬಿರಿದೊಂದು ಮುಗುಳ್ ಕಂಪಿನೊಳ್ ಮೊಗಂ।
ಗಿಡುವುವು ತುಂಬಿಗಳಟ್ಟಿಮೆ
ವಡುವುವು ಕುಡಿದೊಂದು ಪಣ್ಣರಸದೊಳ್ ಗಿಳಿಗಳ್॥[೧೮]

ಈ ಪದ್ಯಗಳಲ್ಲಿ ಕವಿಯು ನಾಡಿನ ಹೂವು, ಹಣ್ಣು, ಮಲ್ಲಿಗೆ ಮಾವುಗಳು ಎಂದೂ ಮುಗಿದುಹೋಗವು. ಇದೇ ಸಂಸಾರ ಸಾರಸರ್ವಸ್ವ ಫಲ ಎನ್ನುವಲ್ಲಿ ಆ ದೇಶದ ಸಸ್ಯ ಸಂಪತ್ತನ್ನು ಕುರಿತು ಹೇಳುತ್ತಲೇ ಮನುಷ್ಯನ ರಸಿಕತೆಯನ್ನು, ಶೃಂಗಾರಪ್ರಿಯತೆಯನ್ನು ಬಯಲು ಮಾಡುತ್ತಾನೆ. ಆದರೆ ಅಲ್ಲಿ ಕವಿಯ ಮುಖ್ಯ ಆಶಯವು ತನ್ನ ನೆಲದ ಅಭಿಮಾನವೇ ಆಗಿದೆ.

ಹೀಗೆ ಈ ದೇಶದ ವಿವಿಧ ಪ್ರಾಕೃತಿಕ ವೈಚಿತ್ರ್ಯಗಳನ್ನು ವೃತ್ತ, ಕಂದ, ರಗಳೆ ಮತ್ತು ವಚನ ಈ ಪ್ರಕಾರಗಳಲ್ಲಿ ಕಟ್ಟಿಕೊಟ್ಟು, ಅಂತಿಮವಾಗಿ "ಅಂತು ಮೂಱು ಲೋಕದ ಸಮಸ್ತ ಚೆಲ್ವೆಲ್ಲಮಂ ವಿಧಾತ್ರನೊಂದೆಡೆಗೆ ತೆರಳ್ಚಿದಂತೆ" ಎಂದು ಹೇಳುವಲ್ಲಿ ತನಗೆ ಅನುಭವವೇದ್ಯ ಬನವಾಸಿ ಮೊದಲಾದ ಮಲೆನಾಡು ಮತ್ತು ಪುಲಿಗೆರೆ, ವೇಮುಲವಾಡದಂತಹ ಬಯಲುನಾಡನ್ನು ಕುರಿತ ಅಭಿವ್ಯಕ್ತಿಯೇ ಆಗಿ ತೋರುತ್ತದೆ. ಪುರವರ್ಣನೆ ಕಾವ್ಯದ ಅಷ್ಟಾದಶ ವರ್ಣನೆಗಳಲ್ಲಿ ಒಂದಾಗಿ ಬರುವುದು ಅನಿವಾರ್ಯವಾದರೂ ಪಂಪನ ಈ ಅಭಿವ್ಯಕ್ತಿಯಲ್ಲಿ ಆ ದೇಶಾಭಿಮಾನದ ನೆಲೆ ಇರುವುದು ಇಲ್ಲಿ ಕಾಣುತ್ತದೆ. ಆದ್ದರಿಂದಲೇ ಈ ಸಾಲುಗಳಲ್ಲಿ ಲವಲವಿಕೆ, ಉತ್ಸಾಹ ಎದ್ದು ಕಾಣುತ್ತದೆ.

ಪಂಪನ ದೇಶಾಭಿಮಾನಕ್ಕೆ 'ವಿಕ್ರಮಾರ್ಜುನ ವಿಜಯ'ದ ಯುದ್ಧದ ಸನ್ನಿವೇಶಗಳು ಮತ್ತಷ್ಟು ಬೆಳಕನ್ನು ಬೀರುತ್ತವೆ. ಅದರಲ್ಲೊಂದು ಉತ್ತರ ಗೋಗ್ರಹಣದ ತುರುಗಾಳಗದ ಒಂದು ಸನ್ನಿವೇಶ. ಸುಯೋಧನನು ಸಮಸ್ತ ಸೈನ್ಯದೊಂದಿಗೆ ಉತ್ತರ ದಿಕ್ಕಿಗೆ ಹೊರಟು ವಿರಾಟನ ಗೋವುಗಳನ್ನು ಹಿಡಿಯುತ್ತಾನೆ. ಆಗ ಎದುರಾದ ಸೈನ್ಯವನ್ನು ನಾಶಗೊಳಿಸಿ ಅನೇಕ ಗೋವಳಿಗರನ್ನು ಕೊಲ್ಲುತ್ತಾನೆ. ಇಂತಹ ಸನ್ನಿವೇಶದಲ್ಲಿ ಒಬ್ಬ ಗೋವಳಿಗ ಆಡುವ ಮಾತು ಹೀಗಿದೆ–

ತುಱು ಪರಿವಾಗಳೆಮ್ಮ ಪೆಣನಂ ತುಟಿದು ಪರಿಗುಂದಲೆಂದು ಚಿಃ
ತುಱುಗೊಳೆ ಬಾೞೆಮೆಂದು ತುಱುಗೋಳೊಳೆ ಸಾವುದು ಸೈಪು॥[೧೯]

ಪ್ರಾಣಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ ಎಂಬ ಒಂದು ಮಾತಿದೆ. ಆದರೆ ಇಲ್ಲಿ ಕಾಣಿಸುವ ಗೋವಳನಿಗೆ ಪ್ರಾಣಕ್ಕಿಂತ ಮಿಗಿಲಾದುದು ದೇಶಾಭಿಮಾನವೇ ಆಗಿದೆ ಎಂಬುದು ಅವನ ಮಾತಿನಿಂದಲೇ ವ್ಯಕ್ತವಾಗುತ್ತದೆ. ಗೋವುಗಳು ತನ್ನ ಹೆಣವನ್ನು

ತುಳಿದು ಓಡಿದರೂ ಸಂತಸವೇ. ಗೋವುಗಳೇ ತನ್ನ ಬಾಳು. ಆದ್ದರಿಂದ ಈ ತುರುಗಾಳಗದಲ್ಲಿ ಸಾಯುವುದೇ ಪುಣ್ಯ ಎನ್ನುತ್ತಾನೆ. ಹೀಗೆ ಸ್ವಾಭಿಮಾನದ ಸಂಕೇತವಾದ ತನ್ನ ರಾಜನ ಗೋವುಗಳನ್ನು ಪ್ರತಿಪಕ್ಷದವರು ಕಾದಿ ಕೊಂಡೊಯ್ಯುವಾಗ ಹೋರಾಡಿ ಗೆಲ್ಲಬೇಕು, ಇಲ್ಲವೇ ಸಾಯಬೇಕು ಎಂದು ತನ್ನ ವೀರಾಭಿಮಾನವನ್ನು ಪ್ರಕಟಿಸುತ್ತಾನೆ. ಇಂತಹ ಇನ್ನೂ ಕೆಲವು ನಿದರ್ಶನಗಳನ್ನು ಭಾರತ ಯುದ್ಧದ ಹದಿನೆಂಟು ದಿನಗಳ ಸನ್ನಿವೇಶಗಳಲ್ಲಿ ಹೆಕ್ಕಿ ತೆಗೆಯಬಹುದು.

ನಾಡಿನ ರಕ್ಷಣೆಗೆ ಕಾದಿ ಸತ್ತವರು ಕೇವಲ ರಾಜರುಗಳು ಮಾತ್ರವಾಗಿರದೆ ನಾಡಿನ ಜನತೆಯೂ ಆಗಿತ್ತು ಎಂಬುದನ್ನು ವೀರಯೋಧರು ತಮ್ಮ ಖಾಸಗಿ ಕ್ಷಣಗಳಲ್ಲಿ ಆಡುವ ಮಾತುಗಳಿಂದ ಅರಿಯಬಹುದು. ಅವರ ಮಾತುಗಳು ಅಂದು ಜನಸಾಮಾನ್ಯರು ಹೊಂದಿದ್ದ ನಾಡಪ್ರೇಮದ ದ್ಯೋತಕವಾಗಿದೆ. ಅವುಗಳನ್ನಿಲ್ಲಿ ಸೋದಾಹರಣವಾಗಿ ಪರಿಶೀಲಿಸಲಾಗುವುದು.

ಕುರುಕ್ಷೇತ್ರ ಯುದ್ಧಾರಂಭದ ಮುನ್ನಾ ದಿನದ ರಾತ್ರಿ ಒಬ್ಬ ವೀರಯೋಧ ತನ್ನ ಹೆಂಡತಿಯೊಂದಿಗೆ ಹೀಗೆ ಹೇಳುತ್ತಾನೆ. "ಈ ಪೊಟ್ತೆಪೊಟ್ತು ನಾಳೆ ದೇವಲೋಕದ ಕನ್ನಿಕೆಯರೋಲಗದೊಳಿರ್ಪೆನೆ". ಅಂದರೆ ಈ ಹೊತ್ತೇ ಹೊತ್ತು ನಾಳೆ ದೇವಲೋಕದ ಕನ್ಯೆಯರ ಓಲಗದೊಳಿರುತ್ತೇನೆ ಎಂದು ಹೇಳುವಲ್ಲಿ ತನ್ನ ಸಾವನ್ನು ನಿಶ್ಚಿತಗೊಳಿಸಿಕೊಂಡಿದ್ದಾನೆ. ಹೀಗಿದ್ದೂ ಯುದ್ಧಕ್ಕೆ ಹೊರಡುತ್ತಿದ್ದಾನೆ. ಕಾರಣ, ತನ್ನ ದೇಶದ ಪರವಾದ ಹೋರಾಟ ಅದಾಗಿದೆ. ದೇಶಕ್ಕಾಗಿ ಹೋರಾಡಿ ಸಾಯುವುದು ಒಂದು ಪರಮೋಚ್ಛ ಮೌಲ್ಯ! ಇದರಿಂದ ಸ್ವರ್ಗಲೋಕದಲ್ಲಿ ತನಗೆ ಮಿಗಿಲಾದ ಸ್ಥಾನ ಲಭ್ಯ ಎಂಬ ಭಾವನೆ. ಈ ಹಿನ್ನೆಲೆಯಲ್ಲಿ ಯೋಧನು ತನ್ನ ದೇಶದ ಬಗೆಗಿನ ವೀರಾಭಿಮಾನವನ್ನು ತನ್ನ ಹೆಂಡತಿಯೊಂದಿಗೆ ಪ್ರಕಟಪಡಿಸುತ್ತಾನೆ. ಇದಕ್ಕೆ ಪೋಷಕವಾಗಿ ಅಂದಿನ ಅನೇಕ ನಾರಿಯರ ಮನಸ್ಥಿತಿಯೂ ಇತ್ತು ಎಂಬುದಕ್ಕೆ ಮತ್ತೊಂದು ನಿದರ್ಶನ–

> ತಾಂಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪೆನಿಲ್ಲಿಮಾ
> ಣ್ದಾಂಗಡಮಿರ್ಪೆನಂತನಿತು ಬೆಳ್ಳನೆ ಮುನ್ನಮೆ ಪೋಗಿ ನಲ್ಮೆಗೆ ।
> ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವ್ವೊ ಸ
> ಗ್ಗಂಗಳೊಳೆ ದೇವಡಿತಿ ತೊಟ್ಟಿರೊಳಟ್ಟಿಯನಾಗಲೀವೆನೇ ॥

ಈತನೂ ಸಹ ಯುದ್ಧಕ್ಕೆ ಹೊರಟು ನಿಂತಿದ್ದು, ಅದರಲ್ಲಿ ತನ್ನ ಸಾವು ನಿಶ್ಚಿತ ಎಂದು ಭಾವಿಸಿ ಅದರ ಹಿಂದಿನ ರಾತ್ರಿ ಶಯ್ಯಾಗೃಹದಲ್ಲಿ ತನ್ನ ಹೆಂಡತಿಯೊಂದಿಗೆ, ನಾಳೆ ದೇವತಾಸ್ತ್ರೀಯರ ಜೊತೆ ಇರುತ್ತೇನೆ ಎಂದು ಹೇಳುತ್ತಾನೆ. ಅದಕ್ಕೆ ಆಕೆ ಅದು ಹೇಗೆ ಸಾಧ್ಯ? ತಾನು ಅವನಿಗಿಂತಲೂ ಮೊದಲೇ ದೇವ ಲೋಕಕ್ಕೆ ಹೋಗಿ ಅಲ್ಲಿ ಎದುರುಗೊಳ್ಳುವುದಾಗಿ ಹೇಳುತ್ತಾಳೆ. ಅದರಿಂದ ಆತ ದೇವತಾಸ್ತ್ರೀಯರಿಗೆ ಸಿಗದೆ ತನಗೇ ಸಿಗುವನೆಂಬ ಖಚಿತ ನಿಲುವನ್ನು ಈ ಮಾತಿನಲ್ಲಿ ವ್ಯಕ್ತಪಡಿಸುತ್ತಾಳೆ. ಇದರಿಂದ ಸ್ಪಷ್ಟಪಡುವುದೇನೆಂದರೆ, ದೇಶಾಭಿಮಾನ ಎನ್ನುವುದು ರಾಜ, ಯೋಧ ಇವರಿಗೆ ಮಾತ್ರ ಮೀಸಲಾಗಿರದೆ ಅಂದಿನ ಸ್ತ್ರೀಯರಿಗೂ ಇತ್ತು ಎಂಬುದು. ಹೀಗೆ ಕನ್ನಡತಿಯರ

ಶೀಲ, ಪಾತಿವ್ರತ್ಯ, ಧೈರ್ಯ, ಸಾಹಸಗಳು ಪುರುಷರನ್ನು ನಾಡಿನ ಪರವಾದ ಯುದ್ಧಕ್ಕಾಗಿ ಹುರಿದುಂಬಿಸುವ ಧೀಮಂತಿಕೆ ಇಲ್ಲಿದೆ. ನಿರ್ಭಯದಿಂದ ಯುದ್ಧಕ್ಕೆ ಪ್ರವೇಶ ಮಾಡಿ ಜಯಶೀಲರಾಗಿ ಬರುವುದು, ಯುದ್ಧದಲ್ಲಿ ಮಡಿಯುವುದು ಶ್ರೇಯಸ್ಕರವೆಂದು ಭಾವಿಸಿದ್ದಾರೆ. ಯುದ್ಧದಲ್ಲಿ ಪತಿ ಸತ್ತಾಗ ಅವರು ಸಹಗಮನ ಮಾಡಿಕೊಂಡ ಸಾವಿರಾರು ನಿದರ್ಶನಗಳು ಕರ್ನಾಟಕದ ಚರಿತ್ರೆಯಲ್ಲಿ ಇವೆ.

ಹೀಗೆ ಪಂಪ ತನ್ನ ನಾಡಿನ ಕೌಟುಂಬಿಕ ವಲಯದಲ್ಲಿ ಇದ್ದ ದೇಶಾಭಿಮಾನದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾನೆ. ಇನ್ನು ಯುದ್ಧ ಭೂಮಿಯಲ್ಲಿ ವೀರಯೋಧರು ಮೆರೆಯುವ ಶೌರ್ಯವನ್ನು, ಅದರ ಮೂಲಕ ದೇಶಾಭಿಮಾನದ ಸ್ವರೂಪವನ್ನು ಮುಂದಿನ ಚಿತ್ರಣಗಳೂ ಕಟ್ಟಿಕೊಡುತ್ತವೆ. "ವಿರೋಧಿ ಸೈನ್ಯಭೂಪಾಳರನೊಂದೆ ಪೊಯ್ಯಾಡುಮೀತಲ್ ಪೋದಳಮಟ್ಟಿಯಟ್ಟಿ ಕಟ್ಟಾಳನೆ ಮುಟ್ಟಿ ತಳ್ತಿರಿಯದಿರ್ದೊ- ಮಂಜಿದೆ ನಾಂ ಮಹೀಪತಿ" (ಪಂ. ಭಾ. ೧೦-೩೯).

ಯುದ್ಧ ಮಾಡುವಾಗ ರುಂಡ ಕಳಚಿ ಬಿದ್ದರೂ ಮುಂಡವೇ ಬೆನ್ನಟ್ಟಿಹೋಗಿ ಶತ್ರುರಾಜರನ್ನು ಕತ್ತರಿಸುತ್ತದೆಂಬ ಮಾತಿನಲ್ಲಿ ಉತ್ಪ್ರೇಕ್ಷೆಯಿದ್ದರೂ ಶೌರ್ಯದ ಅಧಿಕ್ಯ, ನಾಡಿನ ಬಗೆಗಿನ ವೀರನಿಷ್ಠೆ ಪ್ರದರ್ಶನಗೊಳ್ಳುತ್ತದೆ. ಈ ಮುಂದಿನ ಯೋಧನ ದೇಶಪ್ರೇಮ ಎಷ್ಟು ಎತ್ತರವಾದುದು ಎಂಬುದು ಸ್ಪಷ್ಟವಾಗುತ್ತದೆ.

> ತೋಳ್ ತಾನ್ಕಿಡೆ ನಲಿದೊಂದೆರಟ್ಟುದುರೆಯಟ್ಟೆಯುಮೊಂದೆರಡಾನೆಯಟ್ಟೆಯುಂ
> ತೊಳಲ್ದೊಡನಾಡೆ ತಳ್ತಿಜೆಯದಿರ್ದೊಡೆ ಜೋಳಮನೆಂತು ನೀಗುವೆಂ॥
> ರಣದೊಳ್ ಗೆಲ್ದಾಜಿಯಂ ತಳ್ತು ಸಂಗರದೊಳ್ ಜೋಳದ ಪಾಳಿಯಂ ನೆರಪಿದಂ ಗಡ
> ಪೆಱಂ ಗಂಡನೇ॥

ಈ ಸೈನಿಕರು ಖಾಸಗಿ ಬದುಕಿನ ವಿವಿಧ ಸನ್ನಿವೇಶಗಳಲ್ಲಿ ಆಡುವ ಮಾತುಗಳು ಅಂದಿನ ಜನಸಾಮಾನ್ಯರ ನಾಡ ಪ್ರೇಮಕ್ಕೆ ಹಿಡಿದ ಕನ್ನಡಿಯಾಗಿದೆ. ಈ ಮೂಲಕ ಕನ್ನಡಿಗರ ಶೌರ್ಯ, ದೇಶಪ್ರೇಮ, ಸ್ವಾಮಿನಿಷ್ಠೆ, ಜೋಳವಾಳಿ ಮೊದಲಾದ ಮೌಲ್ಯಗಳು ವ್ಯಕ್ತವಾಗುತ್ತವೆ. ಇದನ್ನು ಜನ ಪ್ರತಿನಿಧಿಯಾದ ಕವಿ ಕಲಾತ್ಮಕತೆಯಿಂದ ಚಿತ್ರಿಸಿರುವುದು ಸಹಜವೇ ಆಗಿದೆ.

ಹೀಗೆ ಪಂಪ ತನ್ನ ಕಾವ್ಯದಲ್ಲಿ ಹಲವು ಯುದ್ಧ ಸನ್ನಿವೇಶಗಳನ್ನು ತಂದು, ಅದರ ಮೂಲಕ ಅಂದು ಜನರಲ್ಲಿ ಇದ್ದ ದೇಶಾಭಿಮಾನದ ಸ್ವರೂಪವನ್ನು ಕಟ್ಟಿಕೊಡುತ್ತಾನೆ. ಇಂತಹ ಚಿತ್ರಣಗಳನ್ನು ಯಶಸ್ವಿಯಾಗಿ ಕಟ್ಟಿಕೊಡುವುದಕ್ಕೆ ಪಂಪನು ಕವಿಯೇ ಅಲ್ಲದೆ ಸ್ವತಃ ಕಲಿಯೂ ಆಗಿದ್ದನೆಂಬುದು ಸ್ಪಷ್ಟ. ಭಾರತದ ಯುದ್ಧ ಯಾವ ರೀತಿ ನಡೆಯಿತು ಎಂಬುದು ಯಾರಿಗೂ ಗೊತ್ತಿಲ್ಲದಿದ್ದರೂ ಇಲ್ಲಿಯ ಯುದ್ಧಸನ್ನಿವೇಶಗಳು ಮಾತ್ರ ಕರ್ನಾಟಕದಲ್ಲಿಯೇ ನಡೆದಂತೆ ಕವಿ ಚಿತ್ರಿಸಿದ್ದಾನೆ. ಅಂದಿನ ಸ್ತ್ರೀ - ಪುರುಷರಲ್ಲಿ ಇದ್ದ ದೇಶಾಭಿಮಾನವನ್ನು ಸಹ ಪರಿಚಯಿಸಿದ್ದಾನೆ.

ಹೀಗೆ ಪಂಪ ತನ್ನ ಎರಡೂ ಕಾವ್ಯಗಳಲ್ಲಿ ನಾಡು-ನುಡಿಗಳನ್ನು ಕುರಿತು ವಿಭಿನ್ನ ನೆಲೆಗಳಲ್ಲಿ ಅಭಿವ್ಯಕ್ತಿ ನೀಡುತ್ತಾನೆ. ಸಂಸ್ಕೃತದ ಹಿನ್ನೆಲೆಯಿದ್ದೂ ಕನ್ನಡದಲ್ಲಿ ಕಾವ್ಯ ಬರೆದದ್ದು, ಸಂಸ್ಕೃತ ಭಾರತಕ್ಕೆ ಅರಿಕೇಸರಿ ಮತ್ತು ಕನ್ನಡ ದೇಶವನ್ನು ಪ್ರವೇಶಗೊಳಿಸಿ ಅದನ್ನು ಕನ್ನಡಮಯವನ್ನಾಗಿ ಮಾಡಿದ್ದು, ಕನ್ನಡವನ್ನು ಬೆಳೆಸುವ ನಿಟ್ಟಿನಲ್ಲಿ ಮಾರ್ಗ-ದೇಸಿ ಸಮನ್ವಯ ಸಾಧಿಸಿದ್ದು, ಬನವಾಸಿ ವರ್ಣನೆಯ ಮೂಲಕ ಸುಪ್ತ ದೇಶಾಭಿಮಾನವನ್ನು ಪ್ರಕಟಮಾಡಿ ಮಾದರಿಯಾದದ್ದು, ಕನ್ನಡ ದೇಶದ ಅವಿಭಾಜ್ಯ ಅಂಗವಾದ ಪ್ರಾಕೃತಿಕ ಸಂಪತ್ತಿಗೆ ಅಭಿವ್ಯಕ್ತಿ ನೀಡಿ ಪರಿಸರ ಪ್ರಜ್ಞೆಯನ್ನು ಮೆರೆದದ್ದು ಮತ್ತು ಅಂತಿಮವಾಗಿ ಹತ್ತನೆಯ ಶತಮಾನದ ಕ್ಷಾತ್ರಯುಗದ ದೇಶಾಭಿಮಾನವನ್ನು ಇಲ್ಲಿ ಪುನರ್ರೂಪಿಸಿದ್ದು - ಹೀಗೆ ಹಲವು ನೆಲೆಗಳಲ್ಲಿ ಕವಿ ಕನ್ನಡಪರವಾದ ಅಭಿವ್ಯಕ್ತಿ ನೀಡಿದ್ದಾನೆ. ಈ ಮೂಲಕ ತನ್ನ ನಾಡು-ನುಡಿಗಳ ಬಗೆಗಿನ ಅಭಿಮಾನ ಮತ್ತು ಅದನ್ನೊಂದು ಸಾಮಾಜಿಕ ಮೌಲ್ಯವನ್ನಾಗಿ ಸ್ವೀಕರಿಸಿ ಅದರಂತೆ ಬಾಳಬೇಕೆಂಬ ಸೂಚನೆಯನ್ನು ಕವಿ ಧ್ವನಿಸುತ್ತಾನೆ.

ಹೀಗೆ ಪಂಪನು ಕವಿ ಮತ್ತು ಕಲಿ ಎರಡೂ ಆಗಿ ಸ್ವತಃ ದೇಶಾಭಿಮಾನಿ ಆದದ್ದರಿಂದ ಇಂತಹ ಎರಡು ಉತ್ಕೃಷ್ಟ ಕಾವ್ಯಗಳನ್ನು ನೀಡಿ, ಮುಂದಿನ ಕವಿಗಳಿಗೆ ಮಾದರಿ ಮತ್ತು ಮಾರ್ಗದರ್ಶಕನಾದನು. ಅವನು ಪ್ರಚುರಪಡಿಸುವ ಮೌಲ್ಯಗಳಿಂದ ಇಂದಿಗೂ ಅತ್ಯಂತ ಪ್ರಸ್ತುತ ಎನಿಸಿದನು. ಆದ್ದರಿಂದಲೇ ಕವಿ ನಾಗರಾಜನು ಹೀಗೆ ನುಡಿದದ್ದು- "ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ".

ಹೀಗೆ ಪಂಪನ ಕಾವ್ಯಗಳ ಮೂಲಕ ಕನ್ನಡ ಭಾಷೆಯ ನೆಲೆಯನ್ನು ಕುರಿತು ಆಲೋಚಿಸುವಾಗ ಮುಖ್ಯವಾದ ಅಂಶವೆಂದರೆ ಕನ್ನಡ ಭಾಷೆಯನ್ನು ಅದರ ಎಲ್ಲ ಸೂಕ್ಷ್ಮತೆಗಳೊಂದಿಗೆ ಕಾವ್ಯಾಭಿವ್ಯಕ್ತಿಗೆ ಹೂಡಲು ಅವನು ಸಜ್ಜುಗೊಳಿಸಿದ ನೆಲೆ. ಕನ್ನಡ ಭಾಷೆಯ ಮೂಲಕ ತತ್ವಚಿಂತನೆ, ರಾಜಕೀಯ ಚಿಂತನೆ, ಧಾರ್ಮಿಕ ಸಂದರ್ಭ, ಪರಿಸರ ಚಿಂತನೆ- ಹೀಗೆ ಅನೇಕ ಮಟ್ಟದ ಪರಿಕಲ್ಪನೆಗಳು ಪಂಪನ ಕೃತಿಗಳ ಮೂಲಕ ಮೊದಲ ಬಾರಿಗೆ ಮೈಪಡೆದುಕೊಂಡದ್ದು ತುಂಬ ಮಹತ್ವದ್ದು. ಇದು ಭಾಷೆಯನ್ನು ಬಹು ಉಪಯೋಗಿ ನೆಲೆಗಳಲ್ಲಿ ನಿಯೋಜಿಸಿದ ಮುಖ್ಯ ಕ್ರಿಯೆ. ಇದು ಪಂಪನ ಸೃಜನಶೀಲತೆಯ ಮೂಲಕ ಸಾಧ್ಯವಾಯಿತು. ಇದು ಕನ್ನಡ ಭಾಷೆಯ ಸಂದರ್ಭದಲ್ಲಿ ಆದ ದೊಡ್ಡ ಆವಿಷ್ಕಾರ. ಇದರ ಪ್ರಭಾವ- ಪರಿಣಾಮಗಳು ಈ ಕಾಲದಲ್ಲಿಯೂ ಗೋಚರವಾಗುತ್ತಲಿವೆ.

ಅಡಿಟಿಪ್ಪಣಿಗಳು

೧. ಜಿ.ಎಸ್. ಶಿವರುದ್ರಪ್ಪ (ಸಂ.), ಪಂಪ-ಒಂದು ಅಧ್ಯಯನ, ಪು. ೬, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ೧೯೭೪.

೨. ಎಲ್. ಬಸವರಾಜು (ಸಂ.), ಆದಿಪುರಾಣ, ಪು. ೫೧೩, ಗೀತಾ ಬುಕ್ ಹೌಸ್, ಮೈಸೂರು, ೧೯೭೬.

೩. ಬೆ. ವೆಂಕಟನಾರಣಪ್ಪ (ಸಂ.), ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪು. ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦.
೪. ಅದೇ, ಪು. ೩೬೭.
೫. ಎಲ್. ಬಸವರಾಜು (ಸಂ.), ಆದಿಪುರಾಣ, ಪು. ೫೨೬, ಗೀತಾ ಬುಕ್ ಹೌಸ್, ಮೈಸೂರು, ೧೯೭೬.
೬. ಬೆ. ವೆಂಕಟನಾರಣಪ್ಪ (ಸಂ.), ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪು. ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦.
೭. ಎಲ್. ಬಸವರಾಜು (ಸಂ.), ಆದಿಪುರಾಣ, ಪು. ೧೨೦, ಗೀತಾ ಬುಕ್ ಹೌಸ್, ಮೈಸೂರು ೧೯೭೬.
೮. ಅದೇ, ಪು. ೨೬೨.
೯. ಅದೇ, ಪು. ೪೩೧.
೧೦. ಅದೇ, ಪು. ೩೭೪.
೧೧. ತೀನಂಶ್ರೀ (ಸಂ.), ಪಂಪ, ಪು. ೧೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪.
೧೨. ಬೆ. ವೆಂಕಟನಾರಣಪ್ಪ (ಸಂ.), ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪು. ೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦.
೧೩. ಬಿ. ವೆಂಕಟನಾರಣಪ್ಪ (ಸಂ.), ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪು. ೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦.
೧೪. ಅದೇ, ಪು. ೧೪೦.
೧೫. ಅದೇ, ಪು. ೯೮.
೧೬. ಅದೇ.
೧೭. ಅದೇ, ಪು. ೧೧
೧೮. ಅದೇ.
೧೯. ಅದೇ, ಪು. ೨೧೮.
೨೦. ಅದೇ, ಪು. ೨೫೮.
೨೧. ಅದೇ, ಪು. ೨೫೭.
೨೨. ಅದೇ, ಪು. ೨೫೮.

*

ನಯಸೇನ : ದೇಸಿ ನೆಲೆಗಳ ಹುಡುಕಾಟ

ಕ್ರಿ.ಶ. ೧೧೧೨ರ ಸುಮಾರಿನಲ್ಲಿ ಕಾವ್ಯ ರಚನೆ ಮಾಡಿದ ನಯಸೇನನ ಏಕೈಕ ಕೃತಿ 'ಧರ್ಮಾಮೃತ'. ಜೈನ ಧರ್ಮದ ತತ್ವಗಳನ್ನು ಕಾವ್ಯದ ಮೂಲಕ ಪರಿಣಾಮಕಾರಿಯಾಗಿ ಜನಮನಕ್ಕೆ ಮುಟ್ಟಿಸಲು ವಿರಚಿಸಿದ ಕೃತಿ ಇದು. ಇದರಲ್ಲಿ ೧೪ ಆಶ್ವಾಸಗಳಿದ್ದು, ಪ್ರತಿ ಆಶ್ವಾಸದಲ್ಲೂ ಹಲವಾರು ಕತೆ, ಉಪ ಕತೆಗಳಿವೆ. ಈ ಕತೆಗಳನ್ನು ಗೌತಮ ಗಣಧರ ಎಂಬ ಜೈನರ್ಷಿಗಳು ಮಗಧ ದೇಶದ ರಾಜನಾದ ಶ್ರೇಣಿಕನಿಗೆ ಹೇಳುತ್ತಿರುವುದು ಇಲ್ಲಿಯ ಕಥನ ತಂತ್ರ.

ಕ್ರಿ.ಶ. ೧೧-೧೨ ನೆಯ ಶತಮಾನಗಳಲ್ಲಿ ವೀರಶೈವ ಧರ್ಮ ಹೆಚ್ಚು ಪ್ರಚುರಕ್ಕೆ ಬರುತ್ತಿದ್ದಿತು. ಅದುವರೆಗೂ ರಾಜಾಶ್ರಯ ಪಡೆದಿದ್ದ ಜೈನ ಧರ್ಮಕ್ಕೆ ಇದರಿಂದ ಆತಂಕ ಉಂಟಾಯಿತು. ಇದರೊಂದಿಗೆ ವೀರಶೈವ ಮತ್ತು ವೈದಿಕ ಧರ್ಮಗಳೊಂದಿಗೆ ಸೆಣಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡಲೇಬೇಕಾದ ಪರಿಸ್ಥಿತಿ ಜೈನ ಧರ್ಮಕ್ಕಾಗಲೇ ಉಂಟಾಗಿತ್ತು. ಆದ್ದರಿಂದ ಈ ಕಾಲದ ಜೈನ ಕವಿಗಳು ಪಂಪ, ಪೊನ್ನ, ರನ್ನ ಮೊದಲಾದವರಂತೆ ಕೇವಲ ತಮ್ಮ ಧರ್ಮದ ಹಿರಿಮೆಯನ್ನು ಪಂಡಿತ ಮಂಡಲಿ ಮತ್ತು ರಾಜಾಶ್ರಯದ ನೆಲೆಯಲ್ಲಿ ಮಾತ್ರ ಮೆರಸಲಿಕ್ಕೆ ಕಾವ್ಯ ಬರೆಯುವುದು ರೂಢಿಯಾಗಲಿಲ್ಲ. ಇದಕ್ಕೆ ಭಿನ್ನವಾಗಿ ತಮ್ಮ ಧರ್ಮದ ಉಳಿವಿಗಾಗಿ ಅನ್ಯಧರ್ಮದ ವಿಡಂಬನೆ ಮತ್ತು ಸ್ವಧರ್ಮದ ಶ್ರೇಷ್ಠ ವಿಚಾರಗಳ ತಾರ್ಕಿಕ ಮಂಡನೆ ಅನಿವಾರ್ಯವೆನಿಸಿತು. ಈ ಹಿನ್ನೆಲೆಯಲ್ಲಿ ಜನಮುಖಿ ಕಾವ್ಯ ರಚನೆ ಅಗತ್ಯವೆನಿಸಿತು. ಆದ್ದರಿಂದ ನಯಸೇನ ಮೊದಲಾಗಿ ಹಿರಿಯ ಮತ್ತು ಕಿರಿಯ ಸಮಕಾಲೀನ ಜೈನ ಕವಿಗಳು ಕನ್ನಡ ಸಾಹಿತ್ಯದ ಮೇಲಿದ್ದ ಸಂಸ್ಕೃತದ ಹಿಡಿತವನ್ನು ಸಡಿಲಗೊಳಿಸಿದರು. ಜನಪದರಿಗೆ ಕಾವ್ಯ ಮುಟ್ಟಿಸುವ ಸಲುವಾಗಿ ಅದರಲ್ಲಿ ಜಾನಪದೀಯತೆಯನ್ನು ತಂದರು. ಇವರಲ್ಲಿ ಅಗ್ರಗಣ್ಯ ನಯಸೇನ.

ಲೋಕಾರೂಢಿಯಲ್ಲಿದ್ದ ಉಪಮೆ, ನಾಣ್ಣುಡಿ, ಜಾಣ್ಣುಡಿಗಳನ್ನು ವ್ಯಾಪಕವಾಗಿ ನಯಸೇನನು ತನ್ನ 'ಧರ್ಮಾಮೃತ'ದಲ್ಲಿ ಬಯಲು ಮಾಡಿದನು. ಆಡು ಮಾತಿನ ಶೈಲಿಯನ್ನು ಕಾವ್ಯಕ್ಕೆ ಬಳಸಿದನು. ಹೀಗೆ ನಯಸೇನನ 'ಧರ್ಮಾಮೃತ'ವು "ಸಾಮಾಜಿಕ ಸಂದರ್ಭದ ಒತ್ತಡದಿಂದ ಧಾರ್ಮಿಕ ಅಗತ್ಯವಾಗಿ ಮೂಡಿ ಬಂದ ಕಾವ್ಯ"[೧]ವಾಯಿತು.

ಹೀಗೆ ನಯಸೇನನ ಕೃತಿ ಒಂದು ಜನಪ್ರಿಯ ರಚನೆ ಎನಿಸಿತಲ್ಲದೆ ನಾಡಿನ ಸಾಂಸ್ಕೃತಿಕ ಚಿತ್ರಣವನ್ನು ಹಿಡಿದಿಟ್ಟ ಕೃತಿಯೂ ಎನಿಸಿತು. ಜನರ ನಾಡಿ ಮಿಡಿತವನ್ನು ಅರಿತಿದ್ದ ನಯಸೇನ ಎಂ. ಚಿದಾನಂದಮೂರ್ತಿಯವರು ಹೇಳುವಂತೆ ಜಾನಪದ

ಕವಿಯೂ ಆದನು. ಈ ಹಿನ್ನೆಲೆಯಲ್ಲಿ ಅವನ ಕಾವ್ಯ ಮೂಡಿದೆ; ಪ್ರಧಾನವಾಗಿ ಧಾರ್ಮಿಕ ನೆಲೆಗಟ್ಟಿನಲ್ಲಿ ನಾಡು –ನುಡಿ ಚಿಂತನೆಯನ್ನು ಮಾಡಿದ್ದಾನೆ.

ಜಿನಮತದೊಳೆನಿತು ಸಾರಮು
ದನಿತುಂ ಲೇಸಾಗಿ ತೋರ್ಪುದೀ ಕೃತಿಯೊಳ್ ಅದೆಂ–
ತೆನೆ ಕನ್ನಡಿಯೊಳಗೆ ಜಲ
ಕ್ಕನೆ ತೋರ್ಪವೊಲ್ ಇಭದ ರೂಪು ವಿಸ್ತರದಿಂ॥

ಅತಿಶಯ ಜಿನೇಂದ್ರ ವಚನಾ
ಮೃತಮಂ ಸಕಲೈಕ ಜೀವಹಿತಮಂ ಪುಣ್ಯೋ–
ದಿತಮಂ ಭವ್ಯ ನಿಕಾಯ
ಸ್ತುತಮಂ ನೆಱೆಪೇೞ್ವೆನಱೆಯೆ ಧರ್ಮಾಮೃತಮಂ ॥[2]

ಮೇಲಿನ ಎರಡು ಪದ್ಯಗಳು ಕ್ರಮವಾಗಿ ನಯಸೇನನ ಕಾವ್ಯದ ಆಶಯ ಮತ್ತು ಉದ್ದೇಶಗಳನ್ನು ವ್ಯಕ್ತಪಡಿಸುತ್ತವೆ. ಜೈನ ಧರ್ಮದಲ್ಲಿರುವ ಒಟ್ಟು ಸಾರವನ್ನು ಕನ್ನಡಿಯಲ್ಲಿ ಆನೆಯನ್ನು ಹಿಡಿದಿಡುವಂತೆ ಸಂಕ್ಷಿಪ್ತಗೊಳಿಸಿ ಹೇಳುವುದು ಇವನ ಆಶಯ. ಈ ಆಶಯದ ಜೈನ ತತ್ವಗಳು ಹಲವು ಕತೆ, ಉಪಕತೆಗಳ ಮೂಲಕ ಅಭಿವ್ಯಕ್ತಿ ಸಾಧಿಸಿವೆ. ಅವುಗಳೆಂದರೆ ಸಮ್ಯಗ್ ದರ್ಶನ– ಇದರಲ್ಲಿ ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢ ದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಧರ್ಮ ಪ್ರಭಾವನೆ ಎಂಬ ಎಂಟು ಅಂಗಗಳು. ಇದಕ್ಕೆ ಹೊಂದಿಕೊಂಡಂತೆ ಐದು ಅಣು ವ್ರತಗಳು. ಅವು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅತಿ ಸಂಗ್ರಹ (ನಿಯಮಿತ ಪರಿಗ್ರಹ ವ್ರತ).

ಅತಿಶಯವೆಂದು ಹೇಳಲಾದ ಜೈನ ಧರ್ಮಾಮೃತವನ್ನು ಭವ್ಯ ಜನ ಸಮೂಹದ ಹಿತಕ್ಕಾಗಿ ಅರಹಲು ಯತ್ನಿಸಿದ್ದಾನೆ. ಇದು ಅವನ ಉದ್ದೇಶ. ಈ ಉದ್ದೇಶಕ್ಕೆ ಅನುಗುಣವಾದ ಶೈಲಿಯನ್ನು ಸಹ ರೂಪಿಸಿಕೊಂಡಿದ್ದಾನೆ. ಇಂತಹ ಉದ್ದೇಶ ಮತ್ತು ಶೈಲಿಯನ್ನು ಕುರಿತು ತಾನೇ ಎರಡು ಪದ್ಯಗಳಲ್ಲಿ ಹೀಗೆ ಮಾತನಾಡಿದ್ದಾನೆ.

ಪಲರುಂ ಧರ್ಮಮನೊಲ್ಲದುಗ್ರ ನರಕಾಂಭೋರಾಶಿಯೊಳೆ ಬಿರ್ದು ಕೋ
ಟಲೆಗೊಳ್ವರ್ಗಜೆವಂತು ಕನ್ನಡದಿನೊಪ್ಪಂಬೆತ್ತು ಜಾಣ್ಮಾತಿನಿಂ ।
ಪಲವುಂ ದೇಸಿಯಿಂ ಸಂದುದಾಹರಣೆಯಿಂ ಪೇೞ್ದಿ ಬುಧರ್ಕೂರ್ಮೆಯಿಂ
ತಲೆಯಂ ತೂಗುವಿನಂ ಜಿನೇಂದ್ರ ಮತಮಂ ವಾತ್ಸಲ್ಯ ರತ್ನಾಕರಂ ॥

ರಸಭಾವಂ ಗಮಕಂ ಕಾ
ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ ।
ಕುಸುಜೆಯ ಬಗೆಯಿಂದಿನಿತ
ಳೆಸೆಯದ ಕೃತಿ ಕೃತಿಯ ಬಗೆಯ ನೋೞ್ಪೊಡೆ ಜಗದೊಳ್ ॥[3]

ಈ ಎರಡು ಪದ್ಯಗಳನ್ನು ಗಮನಿಸಿದಾಗ ತಾನು ಕಾವ್ಯ ಬರೆಯುತ್ತಿರುವುದು ತನ್ನ ಧರ್ಮವನ್ನು ಉದ್ಧರಿಸಲಿಕ್ಕಾಗಿ ಎಂಬುದು ಸ್ಪಷ್ಟ. ಆದ್ದರಿಂದ ಈತ ಸ್ವತಃ ಕನ್ನಡಿಗನಾದ್ದರಿಂದ, ದೇಶವು ಕನ್ನಡ ದೇಶವಾದ್ದರಿಂದ, ಕನ್ನಡ ಭಾಷೆಯ ಮೂಲಕ

ಮಾತ್ರ ತನ್ನ ಉದ್ದೇಶ ಸಫಲಗೊಳ್ಳುವುದು ಎಂದು ಔಚಿತ್ಯಪೂರ್ಣವಾಗಿ ಭಾವಿಸಿದ್ದಾನೆ. ಅದಕ್ಕಾಗಿ ಕನ್ನಡವನ್ನು ಕೈ ಹಿಡಿಯುತ್ತಾನೆ. ತನ್ನ ಕಾವ್ಯಕ್ಕೆ ಕನ್ನಡ ಸಂಸ್ಕೃತಿಯಲ್ಲಿ ಬಳಕೆಯಲ್ಲಿದ್ದ ಸಾವಿರಾರು ಉಪಮೆಗಳನ್ನು ತಂದು ಅನೇಕ ಎಡೆಗಳಲ್ಲಿ ಸುದೀರ್ಘವಾದ ಮಾಲೋಪಮೆಗಳನ್ನು ನೀಡುತ್ತಾನೆ. ನೂರಾರು ಸಂಖ್ಯೆಯಲ್ಲಿ ಗಾದೆ, ನಾಣ್ಣುಡಿ, ಜಾಣ್ಣುಡಿಗಳನ್ನು ಸಹ ತರುತ್ತಾನೆ. ಅವುಗಳಿಗೆ ಆಡು ಮಾತಿನ ಶೈಲಿಯನ್ನು ಬಳಸುತ್ತಾನೆ. ಸಾಹಿತ್ಯ ಪ್ರಿಯೆಯಂತೆ ಉಪದೇಶಿಸುತ್ತದೆ (ಕಾಂತಾ ಸಂಮಿತ ತಯೋಪದೇಶಯಜೇ) ಎಂಬ ಮಾತಿನಂತೆ ಕಾವ್ಯವನ್ನು ಇನ್ನಷ್ಟು ಆಕರ್ಷಕಗೊಳಿಸಲು ನೂರಾರು ಕತೆಗಳನ್ನು ತಂದು, ಅದನ್ನು ವಿಶಿಷ್ಟ ಕಥಾ ತಂತ್ರವನ್ನಾಗಿಸಿ ಕೊಳ್ಳುತ್ತಾನೆ. ಅಬಾಲ ವೃದ್ಧ ಪಂಡಿತರಾದಿಯಾಗಿ ಪಾಮರರಿಗೂ ಪ್ರಿಯವೆನಿಸುವ ಕಥಾ ತಂತ್ರವನ್ನು ಬಳಸಿದ್ದರಿಂದ ಇಡೀ ಕಾವ್ಯ ಸುಭಗತೆಯನ್ನು ಹೊಂದಿತು. ತತ್ಪರಿಣಾಮವಾಗಿ ಕನ್ನಡ ಸಂಸ್ಕೃತಿಯ ಅನಾವರಣವೂ ಆಯಿತು. ಈ ಮೂಲಕ ಕ್ರಿ.ಶ. ೧೨ನೆಯ ಶತಮಾನದ ಕನ್ನಡ ಸಂಸ್ಕೃತಿಯ ಚಿತ್ರಣವು ನಯಸೇನನಿಂದ ನಮಗೆ ಇಂದಿಗೂ ಲಭ್ಯವಾಗುವಂತಾಯಿತು.

ಹೀಗೆ ಧರ್ಮಜಾಗೃತಿ ಉಂಟುಮಾಡುವ ನಿಟ್ಟಿನಲ್ಲಿ ನಯಸೇನ ಪ್ರಧಾನವಾಗಿ ಧರ್ಮದ ಬಗೆಗಿನ ಚಿಂತನೆ ನಡೆಸಿದ್ದಾನೆಯೇ ವಿನಃ ಪಂಪನಂತೆ ನಾಡು–ನುಡಿಗಳ ಬಗೆಗೆ ವಿಶಿಷ್ಟ ಚಿಂತನೆ ವ್ಯಕ್ತಪಡಿಸಿಲ್ಲ. ಇದಕ್ಕೆ ಕಾರಣ ಈತ ಪಂಪನಂತೆ ಲೌಕಿಕ ವ್ಯಕ್ತಿಯಾಗಿರದೆ ಯತಿಯಾಗಿದ್ದನೆಂಬುದೇ ಆಗಿದೆ. ಆದರೆ ಕನ್ನಡ ಭಾಷೆಯನ್ನು ಕುರಿತು ಇವನಾಡುವ ಕೆಲವು ಭಾಗಗಳು ನಾಡು–ನುಡಿಗಳ ಚಿಂತನೆಯ ದೃಷ್ಟಿಯಿಂದ ಮುಖ್ಯ ಎನಿಸಿವೆ. ಅಂತಹ ಕೆಲವು ಪದ್ಯಗಳನ್ನು ಒಟ್ಟು ಕಾವ್ಯ ಸಂದರ್ಭದಿಂದ ಬೇರ್ಪಡಿಸಿ ನೋಡಿದಾಗ, ಇವನೊಬ್ಬ ಕಟ್ಟಾ ಕನ್ನಡಾಭಿಮಾನಿ ಎಂದೆನಿಸುತ್ತದೆ. ಆದರೆ ಇವನ್ನು ಅದೇ ಕಾವ್ಯ ಸಂದರ್ಭದಲ್ಲಿ ಇಟ್ಟು ನೋಡಿದಾಗ ಅದು ಶೈಲಿಗೆ ಸಂಬಂಧಿಸಿದ ಚರ್ಚೆಯಾಗಿ ಪರಿಣಮಿಸಿಬಿಡುತ್ತದೆ. ತನ್ನ ಧರ್ಮ ಪ್ರಸಾರಕ್ಕಾಗಿ ಕನ್ನಡವನ್ನು ಬಂಡವಾಳ ಮಾಡಿಕೊಂಡ ಒಬ್ಬ ವ್ಯಕ್ತಿಯಾಗಿ ಈತ ಕಾಣಿಸಿಕೊಳ್ಳುವುದು ಈ ನೆಲೆಯಲ್ಲಿ ವೇದ್ಯವಾಗುತ್ತದೆ. ಈ ಮಾತುಗಳು ನಯಸೇನನ ವಿಶಿಷ್ಟತೆಯನ್ನು ಹೇಳುತ್ತದೆ ಎಂಬ ಕಾರಣಕ್ಕಾಗಿ ಮುಖ್ಯ.

ಸಂಸ್ಕೃತದಲ್ಲಿ ಕಾವ್ಯ ಬರೆಯುವುದಿದ್ದರೆ ಸಂಸ್ಕೃತದಲ್ಲಿಯೇ ಬರೆಯಲಿ ಎಂಬುದು ಅವನ ಆಶಯ. ಕನ್ನಡದಲ್ಲಿ ಬರೆಯುವುದಿದ್ದರೆ ಶುದ್ಧ ಕನ್ನಡದಲ್ಲಿಯೇ ಬರೆಯಲಿ. ಆದರೆ ಕನ್ನಡದ ಬಗೆಗೆ ಪ್ರೀತಿ, ಸಂಸ್ಕೃತದ ಬಗ್ಗೆ ವ್ಯಾಮೋಹ– ಈ ಬಗೆಯ ಇಬ್ಬಂದಿ ನೀತಿಯಿಂದ ಕನ್ನಡದಲ್ಲಿ ಸಂಸ್ಕೃತವನ್ನು ಬೆರೆಸಿ ಕಾವ್ಯ ರಚನೆ ಮಾಡಿದರೆ ಅದು ಸಮಂಜಸ ಎನಿಸುವುದಿಲ್ಲ ಎಂಬುದು ಇಲ್ಲಿನ ಧೋರಣೆ.

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ಧಗನ್ನಡದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ॥[೪]

ಶುದ್ಧ ಸಂಸ್ಕೃತ ಅಥವಾ ಶುದ್ಧ ಕನ್ನಡದಿಂದ ರಚನೆ ಸಾಧ್ಯ- ಸುಂದರ. ಆದ್ದರಿಂದ ತಾನು ಹೇಳಬೇಕೆಂದಿರುವುದನ್ನು ಸ್ಪಷ್ಟವಾಗಿ, ಸ್ಫುಟವಾಗಿ ಹೇಳಿದರೆ ಸಾಕು. ಅದು ಇತರರಿಗೆ ಸುಲಭವಾಗಿ ಮುಟ್ಟುತ್ತದೆ. ಇಂತಹ ಅಭಿವ್ಯಕ್ತಿ ಕ್ರಮವೇ ಸ್ವಾಗತಾರ್ಹವಾದುದು. ಜೊತೆಗೆ ಈತನಿಗೆ ಬೇಕಾದ ಕ್ರಮವೂ ಇದೇ ಆಗಿದೆ. ಕಾರಣ, ಈತನಿಗೆ ಭಾಷೆಗಿಂತ ಧರ್ಮ ಪ್ರಚಾರ ಮುಖ್ಯ ಎನಿಸಿದ್ದರಿಂದ ಆ ಶೈಲಿಯನ್ನೇ ತನ್ನ ಕಾವ್ಯಕ್ಕೂ ಬಳಸಿದನು. ಈ ಹಿನ್ನೆಲೆಯಲ್ಲಿ ಜನ ಸಾಮಾನ್ಯರು ಯಾವ ಭಾಷೆಯನ್ನು ಬಳಸುತ್ತಾರೋ ಆ ಭಾಷೆಯಲ್ಲಿ ಕಾವ್ಯ ರಚನೆ ಮಾಡಿದಾಗ, ಅದರ ಮೂಲಕ ತನ್ನ ಧರ್ಮಪ್ರಸಾರ ಸುಲಭ ಸಾಧ್ಯವಾಗುತ್ತದೆ. ಇವನ ಸಂದರ್ಭದಲ್ಲಿ ಜನ ಸಾಮಾನ್ಯರ ಭಾಷೆ ಕನ್ನಡವಾದ್ದರಿಂದ ಆ ಭಾಷೆಯಲ್ಲಿಯೇ ಕಾವ್ಯಾಭಿವ್ಯಕ್ತಿ ಸೂಕ್ತ ಎಂಬುದು ಈತನ ದಿಟ್ಟ ನಿಲುವು. ಈ ಹಿನ್ನೆಲೆಯಲ್ಲಿ ಕನ್ನಡ ತುಪ್ಪವೂ ಅಲ್ಲ, ಸಂಸ್ಕೃತ ಎಣ್ಣೆಯೂ ಅಲ್ಲ. ಆದರೆ ಎಣ್ಣೆ ಮತ್ತು ತುಪ್ಪಗಳ ಮಿಶ್ರಣದಿಂದ ಹೇಗೆ ಎರಡರ ಸ್ವಾರಸ್ಯವು ಕೆಡುತ್ತದೆಯೋ ಹಾಗೆಯೇ ಕನ್ನಡ ಮತ್ತು ಸಂಸ್ಕೃತಗಳ ಭಾಷಾ ಮಿಶ್ರಣದಿಂದ ಇವುಗಳ ಅಂದವೂ ಕೆಡುತ್ತದೆ. ಆದ್ದರಿಂದ ಇತರ ಕವಿಗಳಿಗೆ ಈತ ನೀಡುವ ಈ ಮಾರ್ಗದರ್ಶನ ಸೂಕ್ತ ಅಭಿವ್ಯಕ್ತಿ ವಿಧಾನಕ್ಕೆ ಸಂಬಂಧಪಟ್ಟಿರುವುದೇ ಹೊರತು ಭಾಷಾಭಿಮಾನಕ್ಕೆ ಸಂಬಂಧಿಸಿದ ನೇರ ಸಂಗತಿಯಲ್ಲ. ಇದಕ್ಕೆ ನಿದರ್ಶನವಾಗಿ ಈ ಕಾವ್ಯ ಖಂಡದಲ್ಲಿ ಬಳಸಿರುವ ಘೃತ, ತೈಲ ಎಂಬ ಸಂಸ್ಕೃತ ಶಬ್ದಗಳೇ ಸಾಕ್ಷಿ. ಈ ನೆಲೆಯಲ್ಲಿ ಚರ್ಚೆ ಮತ್ತೊಂದು ತಿರುವನ್ನು ಪಡೆಯುತ್ತದೆ.

ಒಬ್ಬ ಕವಿ ಕಾವ್ಯಾಭಿವ್ಯಕ್ತಿ ನೀಡುವಾಗ ಎರಡು ಭಾಷೆಗಳ ಪದಗಳನ್ನು ಒಟ್ಟಿಗೆ ತರಬಾರದೆಂದಲ್ಲ; ತರಬಹುದು. ಆದರೆ ಒಂದು ಭಾಷೆಯನ್ನಾಡುವ ಜನರು ಮತ್ತೊಂದು ಭಾಷೆಯ ಶಬ್ದವನ್ನು ತಮ್ಮ ಭಾಷೆಯಲ್ಲಿ ಸಹಜವಾಗಿ ಬಳಸುತ್ತಿದ್ದರೆ, ಅಂತಹ ಶಬ್ದಗಳನ್ನೂ ತಮ್ಮ ಕಾವ್ಯಗಳಲ್ಲಿ ತರಬಹುದು ಎಂಬುದು ಈತನ ಧೋರಣೆ. ಇದನ್ನು ಕನ್ನಡ-ಸಂಸ್ಕೃತಗಳ ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ.

ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ।
ತಿಸಿ ಕೊಡಲಾಗದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ॥[೫]

ಈ ಕಾವ್ಯ ಖಂಡದ ನಾಲ್ಕನೆಯ ಸಾಲಿನಲ್ಲಿ ಬರುವ 'ಮಿಸುಕದ' ಎಂಬ ಶಬ್ದ ಗಮನಾರ್ಹವಾದುದು. ಕನ್ನಡದಲ್ಲಿ ಸಂಸ್ಕೃತ ಶಬ್ದಗಳನ್ನು ಬಳಸುವಾಗ ಅದಕ್ಕೆ ಒಗ್ಗುವ ಶಬ್ದಗಳನ್ನು ಮಾತ್ರ ಬಳಸಬೇಕೇ ಹೊರತು 'ಮಿಸುಕದ' ಸಕ್ಕದವನ್ನಿಕ್ಕಬಾರದು. ಇದರಿಂದ ಕಾವ್ಯಾರ್ಥದ ಗತಿಗೆ ಭಂಗ ಬರುತ್ತದೆ. ಕಾವ್ಯದ ಉದ್ದೇಶವೂ ಸಫಲವಾಗುವುದಿಲ್ಲ. ಆದ್ದರಿಂದ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತದ ಪದ ಬಳಕೆ ಅಗತ್ಯವೆನಿಸಿದರೆ ಈ ಬಗೆಯ ಔಚಿತ್ಯ ಪ್ರಜ್ಞೆ ಅವಶ್ಯವಾಗಿ ಇರಬೇಕು. ಇದು ಇವನ ನಿರ್ದೇಶನ. ಈ ನಿರ್ದೇಶನವನ್ನು ಮಾಡುವ ಸಂದರ್ಭದಲ್ಲಿಯೇ ಅಲ್ಲಿಯವರೆಗೂ

ಕನ್ನಡ ಕಾವ್ಯಗಳಲ್ಲಿ ಬಳಕೆಯಾಗುತ್ತಿದ್ದ ಅತಿಯಾದ ಸಂಸ್ಕೃತ ಬಳಕೆ, ಅದರ ಮೂಲಕ ವ್ಯಕ್ತಗೊಳ್ಳುವ ನಮ್ಮ ಕವಿಗಳ ಸಂಸ್ಕೃತದ ಬಗೆಗಿನ ಅತಿಯಾದ ವ್ಯಾಮೋಹವನ್ನು ಛೇಡಿಸುತ್ತಾನೆ. ಇದರಿಂದ ಏಕಕಾಲದಲ್ಲಿ ಎರಡು ದೋಣಿ ನಡೆಸುವ ಅಂಬಿಗನು ಊಹೆಗೆ ನಿಲುಕುತ್ತಾನೆ. ಆದ್ದರಿಂದ ಕಾವ್ಯಕ್ಕೆ ಭಾಷೆಯನ್ನು ಬಳಸುವಾಗ ಅದರಲ್ಲಿ ಸಹಜವಾಗಿ ಬಳಕೆಯಲ್ಲಿರುವ ಇತರೆ ಭಾಷೆಗಳ ಪದಗಳನ್ನು ಮಾತ್ರ ಬಳಸಬೇಕು. ಜೊತೆಗೆ, ಪ್ರತಿಭಾ ಬಲದಿಂದ ದೇಸಿಗೆ ಮೊರೆ ಹೋದರೆ ಉತ್ಕೃಷ್ಟ ಕಾವ್ಯ ಸಿದ್ಧಿಯೂ ಲಭ್ಯ.

ಮಱೆಯಿಲ್ಲದೆ ಪೊಯ್ನೀರಿಂ
ಬೆಳಗುಮೆ ಧರೆ ಮರುಗಿ ಕುದಿದು ಶಾಸ್ತ್ರದ ಬಲದಿಂ।
ದಳಿಪಿಂ ಪೇೞ್ವೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ॥[೬]

ಹೀಗೆ ಕನ್ನಡಕ್ಕೊಗ್ಗುವ ಸಂಸ್ಕೃತ ಬಳಕೆ, ಸಹಜ ಶೈಲಿಯ ಕವಿತಾ ರಚನೆ, ದೇಸೀ ಅಭಿವ್ಯಕ್ತಿ – ಈ ಆಶಯಗಳಿಗೆ ಹೆಚ್ಚು ಒತ್ತು ಕೊಟ್ಟಿರುವ ಈತ ಕನ್ನಡವನ್ನು ಬೆಳೆಸಿದ್ದಾನೆ. ಅದನ್ನು ಬೆಳೆಸುವ ನಿಟ್ಟಿನಲ್ಲಿ ಇಂದಿಗೂ ಕಾರ್ಯಪ್ರವೃತ್ತರಾಗಿರುವ ಅನೇಕರಿಗೆ ಮಾದರಿಯೂ ಆಗಿದ್ದಾನೆ.

ನಾಡು–ನುಡಿ ಚಿಂತನೆಯ ದೃಷ್ಟಿಯಿಂದ ಇವನಲ್ಲಿ ಕೆಲವು ಮಿತಿಗಳಿವೆ. ಕನ್ನಡಕ್ಕೊಗ್ಗುವ ಸಂಸ್ಕೃತವನ್ನು ಮಾತ್ರ ಬಳಸಬೇಕು ಎಂದು ಹೇಳುವ ಈತನ ಕಾವ್ಯ ಆರಂಭವಾಗುವುದೇ ಸಂಸ್ಕೃತಭೂಯಿಷ್ಟ ವೃತ್ತಗಳಿಂದ. ಆದರೆ ಇಂತಹ ವೃತ್ತಗಳು ಇಡೀ ಕಾವ್ಯದಲ್ಲಿ ಬೆರಳೆಣಿಕೆಯಷ್ಟು ಮಾತ್ರ. ಆದ್ದರಿಂದ ಇವು ಇಡೀ ಕಾವ್ಯ ಸಂದರ್ಭದಲ್ಲಿ ಗೌಣವಾಗಿ ಬಿಟ್ಟಿವೆ.

ಇದೇ ಕಾವ್ಯದ ಅನೇಕ ಎಡೆಗಳಲ್ಲಿ ಪುರ–ದೇಶ ವರ್ಣನೆ ಬರುತ್ತದೆ. ಆದರೆ ಇದು ಮಿತವಾಗಿದೆ. ಉದಾಹರಣೆಗೆ ಕಾವ್ಯದ ಮೊದಲ ಆಶ್ವಾಸದಲ್ಲಿ ಕೇವಲ ಮೂರು ಕಂದ ಪದ್ಯಗಳಲ್ಲಿ ಮಾತ್ರ ಜಂಬೂದ್ವೀಪ ಮತ್ತು ಸೌರಾಷ್ಟ್ರ ನಾಡಿನ ವರ್ಣನೆ ಬರುತ್ತದೆ. ಅದೂ ಪ್ರಾಸಂಗಿಕವಾಗಿ ಮಾತ್ರ. ಆದರೆ ಇದೇ ನೆಪದಲ್ಲಿ ಪಂಪ ತನ್ನ ತಾಯ್ನಾಡಿನ ಪ್ರೀತಿಯನ್ನು ದೀರ್ಘವಾಗಿ ಹೊಮ್ಮಿಸಿರುವುದು ಆತನ ಕಾವ್ಯಗಳಿಂದ ವೇದ್ಯವಾಗುತ್ತದೆ. ಇಂತಹ ಪುರ– ದೇಶ ವರ್ಣನೆಯು ನಾಲ್ಕಾರು ಎಡೆಗಳಲ್ಲಿ ಬಂದಿದ್ದರೂ ಗಮನ ಸೆಳೆಯುವಂತೆ, ನಾಡನ್ನು ಕುರಿತ ಅಭಿಮಾನದ ಉಕ್ತಿಯಂತೆ ಕಾಣುವುದಿಲ್ಲ. ಅದು ನಯಸೇನನಿಗೆ ಸಹಜವೂ ಆಗಿತ್ತು. ಕಾರಣ, ಅವನು ಯತಿ ಆದದ್ದರಿಂದ. ಆದರೆ ಇದೇ ಕಾವ್ಯದಲ್ಲಿ ಒಂದೆಡೆಯಲ್ಲಿ ಮಾತ್ರ ಪಂಪನಂತೆ ತೆಂಕನಾಡಿನ ಬಗೆಗೆ ಒಂದು ಸಣ್ಣ ಪ್ರೀತಿಯ ಎಳೆಯನ್ನು ಬಿಂಬಿಸುತ್ತಾನೆ. ಸಂದರ್ಭ : ವ್ಯಾಪಾರದ ನಿಮಿತ್ತ ಧನಮಿತ್ರ ಸೆಟ್ಟಿ ಹಲವು ವರ್ತಕರೊಂದಿಗೆ ಉತ್ತರ ದೇಶಕ್ಕೆ ಹೋಗುತ್ತಿದ್ದಾಗ, ಒಬ್ಬಂಟಿಯಾದ ವಸುಭೂತಿ ಎಂಬ ಬ್ರಾಹ್ಮಣನು ಕಾಶಿಗೆ ಹೋಗುವ ಸಲುವಾಗಿ

ಆತನನ್ನು ಭೇಟಿ ಮಾಡಿ, ಆತನ ಜತೆಗೆ ತಾನೂ ಬರುವೆನೆಂದು ಹೇಳುತ್ತಾನೆ. ಹೀಗೆ ಹೇಳುವಾಗ ತಾನು ಕೇವಲ ತೆಂಕನಾಡಿನಿಂದ ಬಂದೆನೆಂದು ಹೇಳದೆ 'ಉನ್ನತಿವೆತ್ತ' ತೆಂಕನಾಡಿನಿಂದ ಬಂದೆನೆಂದು ಹೇಳುತ್ತಾನೆ. ಹೀಗೆ 'ಉನ್ನತಿವೆತ್ತ' ಎಂಬ ಶಬ್ದ ಬಳಸುವ ಮೂಲಕ ತನ್ನ ದಕ್ಷಿಣ ದೇಶದ ಬಗೆಗಿನ ಅಭಿಮಾನದ ಅತ್ಯಂತ ಸಣ್ಣ ಎಳೆ ವ್ಯಕ್ತವಾಗುತ್ತದೆ.

> ವಸುಭೂತಿಯೆಂಬುದೆನ್ನಯ
> ಪೆಸರುನ್ನತಿವೆತ್ತ ತೆಂಕನಾಡಿಂ ಬಂದೆಂ।
> ವಸುಧೆಗೆಸೆದಿರ್ದ ಗಂಗೆಯ
> ನಸಹಾಯನೆಯರ್ತಿವೆರಸು ಮೀಯಲ್ಕೆಂದಾಂ॥[೭]

ಹೀಗೆ ಕನ್ನಡ ಸಾಹಿತ್ಯ ಪರಂಪರೆಯ ೧೨ನೆಯ ಶತಮಾನದ ಸಂದರ್ಭದಲ್ಲಿ ನಾಡು-ನುಡಿಗಳ ಬಗೆಗೆ ವ್ಯಕ್ತವಾದ ಚಿಂತನೆಯ ದೃಷ್ಟಿಯಿಂದ ನಯಸೇನ ಮುಖ್ಯವಾಗಿದ್ದಾನೆ.

ಇಲ್ಲಿಯವರೆಗಿನ ಚರ್ಚೆಯಲ್ಲಿ ಕರ್ನಾಟಕವನ್ನು ಕುರಿತ ಅಭಿಮಾನದ ಉಕ್ತಿ ನೇರವಾಗಿ ಎಲ್ಲಿಯೂ ಕಾಣದಿರುವುದು ವ್ಯಕ್ತವಾಗುತ್ತವೆ. ಆದರೆ ಯಾವುದೇ ಕವಿಯಲ್ಲಿ ಕಾಣಸಿಗದಷ್ಟು ಕರ್ನಾಟಕದ ನೂರಾರು ಮುಖಗಳು ಇಲ್ಲಿ ಕಾಣಬರುತ್ತವೆ. ಹತ್ತಾರು ಉಪ ಸಂಸ್ಕೃತಿಗಳು, ಜನರ ರೀತಿ ನೀತಿಗಳು, ಹಾವ ಭಾವಗಳು, ಸಾಮಾಜಿಕ ಪರಿಸರ, ಆರ್ಥಿಕ ವಿಚಾರ ಮೊದಲಾದ ನಾಡಿನ ವಿವಿಧ ವಲಯಗಳು ಇಲ್ಲಿ ಅಭಿವ್ಯಕ್ತಗೊಂಡಿವೆ. ಈ ಮೂಲಕ ೧೨ನೆಯ ಶತಮಾನದ ಸಂಕೀರ್ಣ ಕರ್ನಾಟಕವನ್ನು ಕವಿ ಇಲ್ಲಿ ಹಿಡಿದಿಟ್ಟಿದ್ದಾನೆ. ಆ ಶತಮಾನದ ಕರ್ನಾಟಕವನ್ನು ಕುರಿತು ಯಾವುದೇ ಶಾಸ್ತ್ರೀಯ ನೆಲೆಯಿಂದ ಅಧ್ಯಯನ ನಡೆಸುವವರಿಗೂ ಇಲ್ಲಿ ಹೇರಳ ಸಾಮಗ್ರಿ ದೊರೆಯುವಂತೆ ಮಾಡಿದ್ದಾನೆ.

ಹೀಗೆ ಸಂಕೀರ್ಣ ಕನ್ನಡ ಸಂಸ್ಕೃತಿ ಮತ್ತು ಪ್ರದೇಶವನ್ನು ಕವಿ ಇಲ್ಲಿ ಕಟ್ಟಿಕೊಡುವುದಕ್ಕೆ ಮುಖ್ಯ ಕಾರಣ, ಹಿಂದೆ ತಿಳಿಸಿದಂತೆ ತನ್ನ ಧರ್ಮವನ್ನು ಇಲ್ಲಿಯ ಜನರಲ್ಲಿ ಬಿತ್ತುವುದು. ಇದು ಪರಿಣಾಮಕಾರಿಯಾಗಲು ಇಲ್ಲಿಯ ಭಾಷೆ, ಚಿತ್ರಗಳನ್ನೇ ಬಳಸುವುದು. ಇಂತಹ ಅಭಿವ್ಯಕ್ತಿಯನ್ನು ಸುಲಭವಾಗಿ ಸಾಧಿಸಲು, ಇದಕ್ಕಿರುವ ಉತ್ತಮ ತಂತ್ರವೆಂದರೆ ಕಥೆಗಾರಿಕೆ. ಆದ್ದರಿಂದ ಆ ತಂತ್ರದ ಮೂಲಕ ಜನರನ್ನು ತನ್ನ ಧರ್ಮದತ್ತ ಸೆಳೆಯುವ ಧರ್ಮಾವಕಾಶವಾದಿಯಾಗಿ ಕವಿ ಕಾಣುತ್ತಾನೆಯೇ ಹೊರತು ನೈಜ ಕನ್ನಡಾಭಿಮಾನಿಯಾಗಿ ಅಲ್ಲ. ಹೀಗೆ ಧರ್ಮ ಮತ್ತು ಭಾಷೆಗಳ ಸಂಬಂಧದ ನಿಟ್ಟಿನಿಂದ ಕವಿಯ ಸಾಧನೆಯನ್ನು ಗಮನಿಸಬೇಕು.

ಆದರೆ ೯೦೦ ವರ್ಷಗಳ ಇತಿಹಾಸದಲ್ಲಿ ಕನ್ನಡದಲ್ಲಿ ಯಾವ ಕವಿಯೂ ಹೀಗೆ ಕರ್ನಾಟಕದ ನೂರಾರು ಸಾಂಸ್ಕೃತಿಕ ವಿವರಗಳನ್ನು ಕಟ್ಟಿಕೊಡುವುದಿಲ್ಲ. ಆ ದೃಷ್ಟಿಯಿಂದ ಈತ ಮುಖ್ಯವೆನಿಸುತ್ತಾನೆ. ಉದಾಹರಣೆಗೆ, ಸಂತೆಯಲ್ಲಿ ಶೆಟ್ಟಿ ಅಳತೆ ತೂಗುವ ಚಿತ್ರವೂ ಇಲ್ಲಿ ಪರಿಣಾಮಕಾರಿಯಾಗಿ ಬಂದಿದೆ. ಆದರೆ ಸ್ವತಃ ಬಳೆಗಾರನಾದ ರನ್ನನು ಕುಲದ

ಅಥವಾ ತನ್ನ ಉಪಸಂಸ್ಕೃತಿಯ ಬಗೆಗೆ ಎಲ್ಲಿಯೂ ಒಂದು ಚಿತ್ರವನ್ನು ತರುವುದಿಲ್ಲ; ಅದರ ಸಂವೇದನೆಯನ್ನು ಸಹ ಪ್ರಕಟಪಡಿಸುವುದಿಲ್ಲ. ಇಂತಹ ಮನೋಧರ್ಮವನ್ನು ಹೊಂದಿದ್ದ ಕಾವ್ಯ ಸಂಪ್ರದಾಯದಲ್ಲಿ ಈತನ ಅಸಂಖ್ಯ ಸಂವೇದನೆಗಳು ಕನ್ನಡ ಕಾವ್ಯಕ್ಕೆ ಬೀರಿದ ಒಂದು ಮಿಂಚಿನ ಕೋಲು ಎಂದೇ ನಾನು ಭಾವಿಸುತ್ತೇನೆ.

ಧರ್ಮಗಳ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ತುಂಬ ಮಹತ್ವದ್ದು. ಇದು ಇಡೀ ಜಗತ್ತಿನ ಧರ್ಮದ ಚಿಂತನೆ ಹಾಗೂ ಆ ಚಿಂತನೆಯ ಪ್ರಸಾರದಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವುದರ ಹಿನ್ನೆಲೆಯಲ್ಲಿ ಗಮನಿಸಬೇಕಾದ ಸಂಗತಿ.

ನಯಸೇನನು ಧರ್ಮವನ್ನು ಜನಸಮ್ಮುಖವನ್ನಾಗಿಸುವ, ಜನಪ್ರಿಯವಾಗಿಸ-ಬೇಕೆನ್ನಿಸುವ ದೃಷ್ಟಿಯನ್ನು ತಳೆದವನು. ಈ ದೃಷ್ಟಿಯಿಂದ ಸಂಸ್ಕೃತ-ಪ್ರಾಕೃತಗಳಲ್ಲಿ ನೆಲೆಗೊಂಡಿದ್ದ ಜೈನ ಧಾರ್ಮಿಕ ಸಂದರ್ಭವನ್ನು ಜನಮುಖಿಯನ್ನಾಗಿಸುವ ದೃಷ್ಟಿಯಿಂದ ಕನ್ನಡವನ್ನು, ದೇಶ ಭಾಷೆಯನ್ನು ಪುರಸ್ಕರಿಸುತ್ತಾನೆ. ಉದ್ದೇಶ ಯಾವುದೇ ಇರಲಿ-ಭಾಷೆಯ ಬಗೆಗೆ ಗಂಭೀರ ನಿಲುವು ತಳೆದ ಕನ್ನಡ ಕವಿಗಳಲ್ಲಿ ನಯಸೇನ ಮುಖ್ಯ.

ಅಡಿಟಿಪ್ಪಣಿಗಳು

೧. ಎಂ. ಪುಟ್ಟಪ್ಪ (ಸಂ.), ಧರ್ಮಾಮೃತ, ಸಮಯ ಪರೀಕ್ಷೆ ಮತ್ತು ಧರ್ಮಪರೀಕ್ಷೆ -ಒಂದು ಜಾನಪದೀಯ ಅಧ್ಯಯನ (ಅಪ್ರಕಟಿತ) ಪು. ೭೪.

೨. ಎಸ್.ಪಿ. ಪಾಟೀಲ, ಬಿ.ಬಿ. ಮಹೀಶವಾಡಿ (ಸಂ.), ಧರ್ಮಾಮೃತಂ, ಪು. ೧೨, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೮೪.

೩. ಅದೇ, ಪು. ೯.

೪. ಅದೇ, ಪು. ೧೦.

೫. ಅದೇ, ಪು. ೯.

೬. ಅದೇ, ಪು. ೧೧.

೭. ಅದೇ, ಪು. ೧೯.

*

ಆಂಡಯ್ಯ : ನಾಡಿನ ಅಭಿಮಾನ, ಕನ್ನಡಾಭಿವ್ಯಕ್ತಿಯ ಸಮಸ್ಯೆ ಮತ್ತು ಮಾರ್ಗೋಪಾಯಗಳು

ಆಧುನಿಕಪೂರ್ವ ಕನ್ನಡ ಕಾವ್ಯ ಸಂದರ್ಭದಲ್ಲಿ ನಾಡು-ನುಡಿಯ ಬಗೆಗೆ ಅತಿಶಯವಾದ ಮತ್ತು ಮುಖ್ಯವಾಗಿ ವಿಶಿಷ್ಟವಾದ ಅಭಿಮಾನವನ್ನು ತಳೆದಿದ್ದವನು ಆಂಡಯ್ಯ ಮಾತ್ರ. ಅಭಿಮಾನದ ಅಭಿವ್ಯಕ್ತಿ ಆಂಡಯ್ಯನಲ್ಲಿ ಮಾತ್ರ ವ್ಯಕ್ತವಾಗಿದೆ. ಈ ಮಾತು ಅಂದಿನ ದಕ್ಷಿಣ ಭಾರತದ ಇತರೆ ಭಾಷಾ ಸಾಹಿತ್ಯಗಳ ಮಟ್ಟಿಗೂ ಸತ್ಯ.

ಆಂಡಯ್ಯನ ಹೆಸರು, ಕೃತಿ ಸಂಖ್ಯೆ, ಕೃತಿ ಹೆಸರು, ಕಾಲ, ದೇಶ, ಮತ ಮತ್ತು ರಾಜಾಶ್ರಯಗಳ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಆದರೆ ಕೃತಿಯ ಅಂತರಂಗದ ವಿವರಗಳು ಸೂಕ್ಷ್ಮವಾಗಿ ಹೊರಚೆಲ್ಲುವ ಬೆಳಕಿನಲ್ಲಿ ಈ ಮುಂದಿನ ಸತ್ಯಗಳು ಗೋಚರಿಸುತ್ತವೆ.

ಕವಿಯ ಹೆಸರು ಅಂಡಯ್ಯ, ಆದಯ್ಯನೊ ಆಗಿರದೆ ಆಂಡಯ್ಯ ಎಂಬುದಾಗಿದೆ. ಇವನ ಏಕೈಕ ಕೃತಿ ಚಂಪೂ ವಿನ್ಯಾಸದ ಖಂಡ ಕಾವ್ಯ- 'ಕಬ್ಬಿಗರ ಕಾವ'. 'ಕಾವನಗೆಲ್ಲ' ಎಂಬುದು ತನ್ನ ಕೃತಿಗೆ ಕವಿ ಕೊಟ್ಟ ಹೆಸರು. ಸಂಸ್ಕೃತ ಪಂಡಿತರು ಇದನ್ನು 'ಮದನ ವಿಜಯ' ಎಂಬುದಾಗಿ ಕರೆದರೆ, ಇದರ ಅರ್ಥ, ಲಕ್ಷಣ, ತಿರುಳನ್ನು ಅನುಲಕ್ಷಿಸಿ ಇತರೆ ಸಹೃದಯ ಪಂಡಿತರು 'ಸೊಬಗಿನ ಸುಗ್ಗಿ' ಎಂದು ಕರೆದಿದ್ದಾರೆ ಎಂದು ಕವಿ ತನ್ನ ಕಾವ್ಯದ ಅಂತ್ಯದಲ್ಲಿ ಸಾದರಪಡಿಸಿದ್ದಾನೆ. ಈತನ ಕಾಲ ಕ್ರಿ.ಶ. ೧೩ನೆಯ ಶತಮಾನದ ಪೂರ್ವಾರ್ಧ. ಬನವಾಸಿ ಪ್ರದೇಶ ಈತನ ನೆಲೆವೀಡು. ಜೈನಧರ್ಮೀಯನಾದ ಈತ ರಾಜಾಶ್ರಯ ಪಡೆದಿರಲಿಲ್ಲ. ಆದರೆ ಈ ಕಾವ್ಯದಲ್ಲಿ ಅಂದಿನ ಕದಂಬ, ಹೊಯ್ಸಳ ಅರಸರ ರಾಜಕೀಯ ಧ್ವನಿ ವ್ಯಕ್ತಗೊಂಡಿರುವುದು ತನ್ನ ನಾಡಿನ ಬಗೆಗಿದ್ದ ಪ್ರಜ್ಞೆಯ ದ್ಯೋತಕ.

ಕ್ರಿ.ಶ. ೧೦ನೆಯ ಶತಮಾನದ ಪೂರ್ವ ಸಂದರ್ಭವು ಸಂಸ್ಕೃತ ಸಾಹಿತ್ಯದ ಸುಗ್ಗಿಯ ಕಾಲ. ಈ ಘಟ್ಟದಲ್ಲಿ ಅನೇಕ ವಿಧಗಳಲ್ಲಿ ಕನ್ನಡ ಸಾಹಿತ್ಯವು ಸಂಸ್ಕೃತದ ಆರೈಕೆಯಲ್ಲಿ ಬೆಳೆದು ಬಂದಿರುವುದಕ್ಕೆ ಪಂಪ ಪೂರ್ವ ಕಾಲದ ಅವಶೇಷ ಕೃತಿಗಳೇ ಸಾಕ್ಷಿ. ಇಲ್ಲಿಂದ ಮೊದಲ್ಗೊಂಡು ಕ್ರಿ.ಶ. ೧೦ರಿಂದ ೧೨ನೆಯ ಶತಮಾನದವರೆಗಿನ ಕವಿಗಳು ಸಹ ಸಂಸ್ಕೃತದಿಂದ ತೀವ್ರ ಪ್ರಭಾವಕ್ಕೊಳಗಾಗಿರುವುದನ್ನು ಈಗಾಗಲೇ ಗಮನಿಸಲಾಗಿದೆ. ಇದರ ನಡುವೆ ಪಂಪನಂತಹ ಕವಿಗಳು ಮಾರ್ಗ- ದೇಸಿ ಸಮನ್ವಯ ಸೂತ್ರವನ್ನು ಪಾಲಿಸಿದರೆ, ನಯಸೇನ ದೇಸಿಯತ್ತ ಬಹುಪಾಲು ವಾಲಿರುವುದನ್ನು

ಈಗಾಗಲೇ ವಿಶದಪಡಿಸಲಾಗಿದೆ. ಹೀಗೆ ಸಂಸ್ಕೃತದ ಸಹಚರ್ಯೆಯಿಂದ ಕೃತಿ ರಚನೆಗೆ ತೊಡಗಿದ್ದ ಕವಿಗಳ ಸಂಖ್ಯೆ ಅಂದು ವಿಪುಲವಾಗಿದ್ದಕ್ಕೆ ರಾಜಾಶ್ರಯ, ಪಂಡಿತ ಮಂಡಲಿಯ ಶಹಭಾಷ್‌ಗಿರಿ, ಕನ್ನಡದ ಬಗೆಗಿನ ಕೀಳರಿಮೆ, ಸಂಸ್ಕೃತದ ಬಗೆಗಿದ್ದ ವ್ಯಾಮೋಹ ಮೊದಲಾದವು ಮುಖ್ಯ ಕಾರಣಗಳಾಗಿದ್ದವು.ಈ ಹಿನ್ನೆಲೆಯಲ್ಲಿ ನಾಡು-ನುಡಿ ಪರವಾದ ಸಹಜ ಅಭಿಮಾನ ಮತ್ತು ತಮ್ಮ ಧರ್ಮವನ್ನು ಜನಮುಖಿಗೊಳಿಸಿ ಹೆಚ್ಚು ಪ್ರಚುರಕ್ಕೆ ತರುವ ಒತ್ತಡದಿಂದ ಪಂಪ, ನಯಸೇನ, ಆಂಡಯ್ಯನಂತಹ ಕವಿಗಳು ಕ್ರಮವಾಗಿ ಕನ್ನಡಕ್ಕೆ ಬೆನ್ನು ಕೊಟ್ಟರು. ಕನ್ನಡದ ಸಂದರ್ಭದಲ್ಲಿ ಈ ಅವಧಿಯು ಚಂಪೂ ಸಾಹಿತ್ಯದ ಸುವರ್ಣ ಕಾಲ. ಈ ಘಟ್ಟದಲ್ಲಿ ವಿಶೇಷವಾಗಿ ಕಾವ್ಯ ರಚನೆ ಮಾಡಿದವರು ಜೈನರಾದ್ದರಿಂದ ಇದನ್ನು 'ಜೈನಯುಗ' ಎಂದೇ ಕರೆಯಲಾಗಿದೆ.

ಈ ಅವಧಿಯ ಕನ್ನಡ- ಸಂಸ್ಕೃತಗಳ ಸಂಬಂಧವು ಚಂಪೂ ಕವಿಗಳ ಕೃತಿಗಳಿಂದ ವೇದ್ಯವಾಗುತ್ತದೆ. ಸಂಸ್ಕೃತದ ನೆರವಿಲ್ಲದೆ ಕನ್ನಡದಲ್ಲಿ ಕಾವ್ಯ ರಚನೆ ಅಸಾಧ್ಯ ಎಂಬ ಧೋರಣೆಯನ್ನು ಹೊಂದಿದ್ದ ಕವಿಗಳ ಮಧ್ಯೆ ಆಂಡಯ್ಯ ಕಾಣಿಸಿಕೊಳ್ಳುತ್ತಾನೆ. ಇಂತಹ ಧೋರಣೆಯನ್ನು ಬಲವಾಗಿ ನಿರಾಕರಿಸಿ ಅಚ್ಚಗನ್ನಡದಲ್ಲಿ ಕಾವ್ಯ ಕೃಷಿ ಸಾಧ್ಯ ಎಂಬುದನ್ನು ಸಾಬೀತುಗೊಳಿಸಲು 'ಕಬ್ಬಿಗರ ಕಾವ' ವನ್ನು ಬರೆಯುತ್ತಾನೆ. ಹೀಗೆ ಕಾವ್ಯವನ್ನು ಮಾಡುವಾಗ ಅನೇಕ ಎಡೆಗಳಲ್ಲಿ ಎಡವುತ್ತಾನೆಂಬುದು ನಿಜವಾದರೂ ಕನ್ನಡವನ್ನು ಕೇವಲ ಉಳಿಸದೆ, ಬೆಳೆಸುತ್ತಾನೆ. ಕನ್ನಡದಲ್ಲಿಯೂ ಮಹತ್ತರ ವಿಚಾರಗಳ ಉತ್ಕೃಷ್ಟ ಅಭಿವ್ಯಕ್ತಿ ಸಾಧ್ಯ ಎಂದು ಕೆಚ್ಚಿನಿಂದ ತೋರುತ್ತಾನೆ. ಇಂತಹ ಕಾವ್ಯ ನಿರ್ವಹಣೆಯಲ್ಲಿ ಸಂಸ್ಕೃತ ಶಬ್ದಗಳನ್ನು ತದ್ಭವಗಳನ್ನಾಗಿ ಮಾಡಿಕೊಂಡು ಅವನ್ನು ತನ್ನ ಕಾವ್ಯಕ್ಕೆ ತರುತ್ತಾನೆ. ಅಂತೆಯೇ ಪ್ರಾಕೃತವನ್ನೂ ಬಳಸುತ್ತಾನೆ. ಹೀಗೆ ಸಂಸ್ಕೃತವನ್ನು ಕನ್ನಡಕ್ಕೆ ದುಡಿಸಿಕೊಳ್ಳುವಾಗ ಕನ್ನಡದ ಬಗೆಗಿನ ಅದಮ್ಯವಾದ ಪ್ರೀತಿ ಎದ್ದು ಕಾಣುತ್ತದೆಯೇ ವಿನಃ ಸಂಸ್ಕೃತದ ಬಗೆಗಿನ ದ್ವೇಷವಲ್ಲ. "ಸೊಗಯಿಪ ಸಕ್ಕದಂ ಬೆರೆಸಿದಲ್ಲದೆ......."[೧] ಎಂಬ ಮಾತಿನಲ್ಲಿ ಬರುವ ಸೊಗಯಿಪ (ಸೊಗಯಿಸುವ) ಎಂಬ ಶಬ್ದವೇ ಇದಕ್ಕೆ ಅತ್ಯುತ್ತಮ ನಿದರ್ಶನ. ಈ ಮಾತನ್ನು ಎಸ್.ಎಸ್. ಕೋತಿನ ಅವರು ಸಹ ಗುರುತಿಸಿದ್ದಾರೆ. (ಕೃತಿ : ಆಂಡಯ್ಯ, ಪ್ರ: ಕ.ಸಾ.ಪ, ಬೆಂಗಳೂರು, ೧೯೮೫.)

ಇಲ್ಲಿ ಪಂಪನಂತೆಯೇ ಆಂಡಯ್ಯ ಸಹ ಚಂಪೂ ಕೃತಿಯನ್ನು ಬರೆಯುತ್ತಾನೆ. ಸಂಸ್ಕೃತದಲ್ಲಿನ ಅಭಿವ್ಯಕ್ತಿ ಸಾಧ್ಯತೆ ಕನ್ನಡಕ್ಕೂ ಸಾಧ್ಯ ಎಂಬುದನ್ನು ಮುಖ್ಯವಾಗಿ ಸಾಬೀತುಗೊಳಿಸಲು ಚಂಪೂ ರಚನೆಗೆ ತೊಡಗುತ್ತಾನೆ. ಈ ಧೋರಣೆ ಇಲ್ಲದಿದ್ದಲ್ಲಿ ಈತ ಚತ್ತಾಣ, ಬೆದಂಡೆ, ವಚನ, ರಗಳೆ ಮೊದಲಾದ ದೇಸೀ ಛಂದಸ್ಸುಗಳಲ್ಲೊಂದನ್ನು ಆಯ್ದುಕೊಳ್ಳಬಹುದಿತ್ತು. ಆದ್ದರಿಂದ ಕಾವ್ಯಕ್ಕೆ ವಸ್ತುವನ್ನು ಸಹ ಸಂಸ್ಕೃತದಿಂದಲೇ ತರುತ್ತಾನೆ. ಆದರೆ ಅದನ್ನು ಕನ್ನಡದಲ್ಲಿ ನಿರ್ವಹಿಸುವಾಗ ಪ್ರಾದೇಶಿಕತೆಯ ಸೊಗಡನ್ನು ತರುತ್ತಾನೆ. ಹೀಗೆ ಸಂಸ್ಕೃತ ಕಥೆಯನ್ನು ಕನ್ನಡ ಕಾವ್ಯವಾಗಿಸುತ್ತಾನೆ, 'ಸಂಸ್ಕೃತ' ವನ್ನು ಕನ್ನಡವಾಗಿಸುತ್ತಾನೆ. ಕಾವ್ಯ ನಾಯಕನಾದ ಮನ್ಮಥನನ್ನು ಕನ್ನಡಿಗನನ್ನಾಗಿಸುತ್ತಾನೆ. ಅದರ ಕಥಾಸಾರ ಸ್ಥೂಲವಾಗಿ ಇಂತಿದೆ.

ಹಲವು ನಾಲಿಗೆಯುಳ್ಳ ಆದಿಶೇಷನಿಂದಲೂ ಬಣ್ಣಿಸಲಾಗದ ಕನ್ನಡ ನಾಡಿನಲ್ಲಿ 'ಪೂವಿನ ಪೊಟಿಲು' ಎಂಬುದು ಪಟ್ಟಣ. ಇದನ್ನು ಶೌರ್ಯ, ಕೀರ್ತಿ, ಸತ್ಯ, ತ್ಯಾಗ, ಸ್ವೈರಣೆಯಿಂದ ನನೆಯಂಬನೆಂಬ ಅರಸು ಆಳುತ್ತಿದ್ದನು. ಒಮ್ಮೆ ತೆಂಕಣ ಗಾಳಿ ಬೀಸಲಾರಂಭಿಸಿ ವಸಂತ ಕಾಲದ ಆಗಮನವಾಯಿತು. ಅಂತಹ ಒಂದು ಮುಂಜಾನೆಯಲ್ಲಿ ರಾಜನಿಗೆ ಕನಸೊಂದು ಬಿದ್ದು, ಅದರಲ್ಲಿ ಬಿದುಗಲ್ಲಿನ ಗೊಂಬೆಯಂತೆ ಹೆಣ್ಣು ಬರುವುದನ್ನು ಕಂಡನು. ಮರುದಿನ ಈ ವೃತ್ತಾಂತವನ್ನು ರಾಜ ತನ್ನ ನಗೆಗಾರನಿಗೆ ಹೇಳಿದಾಗ, ಆತನು ಅದು ನಿಜವಾಗುವುದೆಂದು ಹೇಳಿ, ಹೂದೋಟಕ್ಕೆ ಹೋಗಿ ನೋಡಬೇಕೆಂದು ವಿನಂತಿಸಿಕೊಂಡನು. ಅಂತೆಯೇ ಮಾಮರದ ಅಡಿಯಲ್ಲಿ ಬೆಲೆವೆಣ್ಣಿನಂತೆ ಕುಳಿತಿದ್ದ ಅಪ್ಸರೆಯನ್ನು ಕುರಿತು ನೀವಾರೆಂದು ಕೇಳಿದಾಗ ತನ್ನ ಪೂರ್ವ ವೃತ್ತಾಂತವನ್ನು ಹೇಳುವಳು. ಇದು ಕತೆಯ ಒಂದು ಹಂತ. ಇಲ್ಲಿಂದ ಸಿಂಹಾವಲೋಕನ ಕ್ರಮದ ಮೂಲಕ ಮುಂದಿನ ಕತೆ ಬೆಳೆಯುತ್ತದೆ.

ಕಂಪಿನ ಪೊಳಲು ಎಂಬುದೊಂದು ಪಟ್ಟಣ. ಅದರ ಅರಸ ಮನ್ಮಥ; ಕರ್ವುವಿಲ್ಲ. ಇಚ್ಛೆಗಾರ್ತಿ ಎಂಬುವವಳು ಈತನ ಮಡದಿ. ಹೀಗಿರುವಾಗ ಬೆಳ್ಳಿ ಬೆಟ್ಟದೊಡೆಯ ಶಿವನು ಚಂದಿರನನ್ನು ಸೆರೆಹಿಡಿದ ದೂರನ್ನು ಜೊನ್ನವಕ್ಕಿಯೊಂದು ಮನ್ಮಥನ ಮುಂದಿಡುತ್ತದೆ. ಅದನ್ನು ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಈತನ ಸಂಧಾನ ವಿಫಲವಾಗುತ್ತದೆ. ಪರಿಣಾಮವಾಗಿ ಯುದ್ಧ ಆರಂಭವಾಗುತ್ತದೆ. ಮನ್ಮಥನ ಸೈನ್ಯದ ಎದುರು ಶಿವನ ವೀರಭದ್ರನಾದಿಯಾಗಿ ಸಮಸ್ತ ಸೈನ್ಯವೂ ಸೋಲಪ್ಪುತ್ತದೆ. ಅಂತಿಮವಾಗಿ, ಶಿವನೇ ಎದುರಿಗೆ ಬರುತ್ತಾನೆ. ಆಗ ಶಿವನ ಕೈ, ಮುಖ, ತೊಡೆಗಳಲ್ಲಿ ಕಾಮನ ಪಂಚ ಬಾಣಗಳು ತಾಗಲಾಗಿ, ಉರಿಯಾದ ಶಿವ ಮುಂದೆ ನಿಂತು, ಹಿರಿಯರೆಂಬುದನ್ನು ಲೆಕ್ಕಿಸದೆ ನನ್ನೊಡನೆ ಸೊಕ್ಕಿನಿಂದ ಕಾದಾಡಿದೆ, ಅದಕ್ಕಾಗಿ ನಿನ್ನ ಹೆಂಡತಿಯನ್ನಗಲಿ ಯಾರೂ ತಿಳಿಯದಂತೆ ನೀನು ಕಾಮನೆಂಬುದನ್ನೂ ಮರೆತು ಎಲ್ಲಿಯಾದರೂ ಇರು ಎಂದು ಶಪಿಸುತ್ತಾನೆ. ಇದು ಕತೆಯ ಎರಡನೆಯ ಹಂತ. ಸಿಂಹಾವಲೋಕನದ ನೆಲೆ. ಇಲ್ಲಿಂದ ಕತೆಯ ಪೂರ್ವ ಭೂಮಿಕೆಗೆ ಪುನರ್ ಆಗಮನ.

ಇದಿಷ್ಟೂ ಕತೆಯನ್ನು ಅಪ್ಸರೆಯು ಹೇಳಿದಾಗ ನನೆಯಂಬನ ಶಾಪ ವಿಮೋಚನೆಯಾಗಿ 'ಮನ್ಮಥ' ನಾದನು. ಅಪ್ಸರೆಯು ಹಿಂದಿನ ಇಚ್ಛೆಗಾರ್ತಿ ಆದಳು. ಅನಂತರ ನನೆಯಂಬನಾಗಿದ್ದ ನನೆವಿಲ್ಲ ಅಥವಾ ಕಾಮನು ಇಚ್ಛೆಗಾರ್ತಿಯೊಡನೆ ಮಾವೆಂಬ ಆನೆಯನ್ನೇರಿ ಕಂಪಿನ ಪೊಳಲನ್ನು ಸೇರಿ ಏಕ ಚಕ್ರಾಧಿಪತಿಯಾಗಿ ರಾಜ್ಯವಾಳಿಕೊಂಡಿದ್ದನು. ಇದಿಷ್ಟು ಕತೆಯ ಸಾರ.

ಈ ಕತೆಯಲ್ಲಿ ಕವಿ ಹಲವು ಮಾರ್ಪಾಡುಗಳನ್ನು ಮಾಡಿದ್ದಾನೆ. ಮೂಲ ಜನಪ್ರಿಯ ಕತೆಯನ್ನು ಇಲ್ಲಿ ಸಾಕಷ್ಟು ಮಾರ್ಪಡಿಸಿ ಗಿರಿಜೆ, ದಕ್ಷರಾಜ–ಶಿವ ಮತ್ತು ರತಿ–ಮನ್ಮಥರ ಕತೆಯನ್ನು ದೂರ ಮಾಡಿದ್ದಾನೆ. ಹಾಗಾಗಿ ಪರಿಣಾಮದಿಂದ ಇದೊಂದು ಹೊಸ ಕತೆಯೆಂದೆ ಭಾಸವಾಗುತ್ತದೆ. ಇಲ್ಲಿಯ ಮತ್ತೊಂದು ವೈಶಿಷ್ಟ್ಯವೆಂದರೆ, ಪ್ರಕೃತಿ

ಕ್ರಿಯಾಶೀಲವಾಗಿರುವುದು. ಪ್ರಕೃತಿಯ ಅಂಗಗಳಾದ ಪ್ರಾಣಿ, ಪಕ್ಷಿ ಸಂಕುಲಗಳೇ ಅಲ್ಲದೆ ದೃಗ್ಗೋಚರವಲ್ಲದ ಗಾಳಿ, ಕಂಪುಗಳು ಸಹ ಮನ್ಮಥನ ಸೈನ್ಯದಲ್ಲಿ ಪಾತ್ರ ನಿರ್ವಹಿಸಿವೆ. ಈ ಹಿನ್ನೆಲೆಯಲ್ಲಿ 'ತಂಗಾಳಿ' ಯು ಕಾಮ ಮತ್ತು ಶಿವನ ನಡುವೆ ದೂತನಾಗಿ ಕಾರ್ಯನಿರ್ವಹಿಸಿದರೆ, ನವಿಲು, ಕೋಗಿಲೆ ಮುಂತಾದವುಗಳು ಸೈನ್ಯಾಧಿಕಾರಿಗಳಾಗಿ ಕಾಣಿಸಿಕೊಳ್ಳುತ್ತವೆ. ಹೂವು, ಹಣ್ಣುಗಳು ಆಭರಣಗಳಾಗಿ, ಕಬ್ಬು ಬಿಲ್ಲಾಗಿ, ಹೂವು ಬಾಣವಾಗಿ ಕಾಮನಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಶಿವನ ಸೈನ್ಯ ಸಹಜ ಸೈನಿಕ ದಳವೇ ಆಗಿರುವ ಚಿತ್ರಣ ಕಾಣುತ್ತದೆ.

ಪ್ರಾಚೀನ ಕಾವ್ಯ ಸಂಪ್ರದಾಯದಂತೆ 'ಕಬ್ಬಿಗರ ಕಾವ'ವೂ ಆರಂಭವಾಗಿ, ಪುರವರ್ಣನೆಯ ಮೂಲಕ ಕತೆಗೆ ಮುಖ್ಯ ತಿರುವನ್ನು ನೀಡುತ್ತದೆ. ಇದರಲ್ಲಿಯ ಪುರವರ್ಣನೆ ಕೇವಲ ಪ್ರಾಸಂಗಿಕವಾಗಿ ಬರದೆ, ಕರ್ನಾಟಕದ ಬಗೆಗಿನ ಅಭಿಮಾನದ ನೋಟವಾಗಿ ಪರಿಣಮಿಸಿದೆ. ಇಲ್ಲಿ ಆಂಡಯ್ಯನ ದೇಶಾಭಿಮಾನ ಒಡಮುರಿದೇಳುತ್ತದೆ. ಕಾವ್ಯ ಚಿಕ್ಕದಾದರೂ ಇಪ್ಪತ್ತು ಪದ್ಯ ಮತ್ತು ಎಂಟು ವಚನಗಳಲ್ಲಿ ನಾಡಿನ ವರ್ಣನೆಯನ್ನು ದೀರ್ಘವಾಗಿ ತರುತ್ತಾನೆ. ಹಿತಮಿತವನ್ನು ಸಾಧಿಸುವ ಕವಿ ಪಂಪನಾದ್ದರಿಂದ ನಾಲ್ಕೈದು ಪದ್ಯಗಳಲ್ಲಿ ಮಾತ್ರ ಪುರವರ್ಣನೆಯ ನೆಪದಲ್ಲಿ ತನ್ನ ತಾಯ್ನಾಡಿನ ಅಭಿಮಾನವನ್ನು ಅತ್ಯುತ್ಕೃಷ್ಟವಾಗಿ ತರುತ್ತಾನೆ ಎಂಬುದು ಇಲ್ಲಿ ಸ್ಮರಣೀಯ. ಆದರೆ ಅನಂತರದ ಕವಿ ನಯಸೇನ ಪುರವರ್ಣನೆಗಾಗಿ ಮಾತ್ರ ಒಂದೆರಡು ಪದ್ಯಗಳನ್ನು ಮಾತ್ರ ತಂದು ನಾಡಿನ ಅಭಿಮಾನವನ್ನು ಗೌಣವಾಗಿಸಿದ್ದಾನೆ. ಈತ ಪಂಪ ಮತ್ತು ಆಂಡಯ್ಯನಂತೆ ಲೌಕಿಕಕ್ಕೆ ಹೆಚ್ಚು ಒತ್ತು ನೀಡಿದ ಕವಿಯಲ್ಲ ಎಂಬುದು ಇದಕ್ಕೆ ಕಾರಣ ಎಂಬುದು ಸಹ ಇಲ್ಲಿ ಉಲ್ಲೇಖನೀಯ. ಆದರೆ ಆಂಡಯ್ಯನಂತಹ ಕವಿ ಕನ್ನಡ ನಾಡು ನುಡಿಗಳ ವಿಚಾರದಲ್ಲಿ ವೀರ ವ್ರತ ಕೈಗೊಂಡಿದ್ದರ ಪರಿಣಾಮವಾಗಿ, ತನ್ನ ಕಾವ್ಯ ಚಿಕ್ಕದಾಗಿದ್ದಾಗಲೂ ಕರ್ನಾಟಕದ ವರ್ಣನೆಯನ್ನು ತಣಿಯುವಷ್ಟು ದೀರ್ಘವಾಗಿಯೇ ಮಾಡುತ್ತಾನೆ. ಹೀಗೆ ಸಂಸ್ಕೃತದ ಮನ್ಮಥ ವಿಜಯ ಕತೆಗೆ ಭೂಮಿಕೆಯನ್ನಾಗಿ ಕರ್ನಾಟಕವನ್ನು ಸಜ್ಜುಗೊಳಿಸುತ್ತಾನೆ. ಈ ಮೂಲಕ ಕತೆಯನ್ನು ಕನ್ನಡವನ್ನಾಗಿ ಬೆಳೆಸುತ್ತಾನೆ.

ಕಥೆಯ ಆರಂಭದ ಸುಂದರ ಆವರಣಕ್ಕೆ ಕವಿ ಮೊದಲಿಗೆ 'ಸುಂದರ –ಸಂಪದ್ಭರಿತ ಕರ್ನಾಟಕ' ವನ್ನು ಸಜ್ಜುಗೊಳಿಸುತ್ತಾನೆ. ಅಲ್ಲಿ ಸರೋವರಗಳು, ಅರಳಿದ ಹೂಗಳನ್ನು ಮುತ್ತುವ ಹೆಣ್ಣು ದುಂಬಿಗಳು, ದುಂಬಿಗಳನ್ನು ಅನುಸರಿಸಿ ಸಂಚರಿಸುವ ಶಬರ ಸ್ತ್ರೀಯರು, ಅವರ ನಡೆ–ನುಡಿ ಹೀಯಾಳಿಸುವಂತೆ ಮೆತ್ತಮೆತ್ತಗೆ ಹೆಜ್ಜೆಯಿಡುವ ಹೆಣ್ಣು ಹಂಸೆಗಳ ಹಿಂಡು, ಹಬ್ಬಿದ ಬಯಲಿನ ಕಬ್ಬಿನ ಜಲ್ಲೆಗಳು, ಕೊರಳುದ್ದ ಹರಿಯುವ ಎಳೆ ನೀರಿನ ಹೊಳೆ, ತುಂಬಿದ ಹೊಲಗಳಿಗೆ ಎರಗುವ ಹಕ್ಕಿಗಳ ಹಿಂಡು, ಅವುಗಳನ್ನು ಅಟ್ಟುವ ಪಾಮರ ಸುಂದರಿಯರ ದಂಡು, ಅವರ ಚೆಲ್ವಿಕೆಗೆ ಮನಸೋತು ನಿಲ್ಲುವ ಪ್ರವಾಸಿಗಳು..... ಮುಗಿಲ ಚುಂಬಿತ ಉಪ್ಪರಿಗೆಗಳು, ಗಿಳಿ– ಕೋಗಿಲೆಗಳ ನೆಲೆವೀಡಾದ ಮಾವಿನ ಮರಗಳು ತುಂಬಿದ್ದು; ಇಲ್ಲಿ ಹಳ್ಳಿಗಳಾವುವು, ಪಟ್ಟಣಗಳಾವುವು, ಕೆಳಗೆ ಬಾಗಿ ನಿಂತ ಮೋಡದ ಹಿಂಡುಗಳಾವುವು, ಕಾಡು ಯಾವುದು, ಪ್ರಖ್ಯಾತ ಬನ ಯಾವುದು

ಎಂಬುದನ್ನು ತಿಳಿದು ಹೇಳುವುದು ಕಷ್ಟ ಎಂದು ಕವಿ ಕತೆಗೆ ಆವರಣವನ್ನು ಒದಗಿಸುವಲ್ಲಿ ಕೇವಲ ಪ್ರಾಸಂಗಿಕತೆ ಇರದೇ ನಾಡಿನ ಅಭಿಮಾನದ ತುಡಿತ ಮತ್ತೆ ಮತ್ತೆ ಮಿಡಿದಿರುವುದು ಎದ್ದು ಕಾಣುತ್ತದೆ.

ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆಂ।
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡಮರಗಳೆಂಬುವಿಲ್ಲಾ ನಾಡೊಳ್॥[೩]

ಮಲ್ಲಿಗೆ, ಸಂಪಿಗೆ, ದಾಳಿಂಬೆ ಮೊದಲಾದ ಕೋಮಲ ಸುಂದರ ರುಚಿಭರಿತ ಪ್ರಕೃತಿಯ ಅವಯವಗಳಿಗಲ್ಲದೆ ಅನ್ಯ ಗಿಡ-ಮರ, ಬೇಲಿ- ಪೊದರು, ಮುಳ್ಳು- ಕಂಟಿ, ಹೂ-ಹಣ್ಣುಗಳಿಗೆ ನೆಲೆಯಿಲ್ಲ ಎಂಬುದು ಅತ್ಯುಕ್ತಿ ಎನಿಸಿದರೂ, ತನ್ನ ನಾಡನ್ನು ಕಂಡುಕೊಳ್ಳಬೇಕಿರುವ ಚಿತ್ರ ಇಲ್ಲಿ ಧ್ವನಿತವಾಗಿದೆ.

ಇಲ್ಲಿ ಅರಳದಿಹ ಹೂವುಗಳಿಲ್ಲ
ಹಾಡಲು ಬಾರದ ಹಕ್ಕಿಗಳಿಲ್ಲ
....
ಹುಲಿ ಕಾಡಾನೆಗಳಲೆಯುವ ಕಾಡಿದು
ಸಿರಿಗನ್ನಡ ನಾಡು।[೪]

ಎಂಬ ಆಧುನಿಕ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಪದ್ಯವೂ ಇಲ್ಲಿ ಸ್ಮರಣೀಯ.

ಉಱಕಾಯ್ವ ಬಿಸಿಲೊಳೆಮ್ಮಂ
ಮರೆದುಂ ಕೊರಗಿಸದೆ ಪೊರೆದುದೆಂದೊಲವಿಂ ಬಂ।
ದೆಱಗುವವೋಲ್ ತೆನೆಯಂ ಕಾ
ಲ್ಗೆಱಗುವ ಕಟವೆಗಳವೆಲ್ಲಿಯುಂ ಸೊಗಯಿಸಿಗುಂ॥[೫]

ಉರಿಯುತ್ತಿರುವ ಬಿಸಿಲಿನಲ್ಲಿ ಮರೆತಾದರೂ ಕೊರಗಿಸದೆ ತಮ್ಮನ್ನು ರಕ್ಷಿಸಿದ್ದಕ್ಕಾಗಿ ಕಾಲುವೆಗೆ ತೆನೆಗಳನ್ನು ಬಾಗಿಸಿ, ನಮಸ್ಕರಿಸುವ ಭತ್ತದ ಚಿತ್ರಣವನ್ನು ಕಟ್ಟಿಕೊಡುವ ಈ ಕಾವ್ಯಚಿತ್ರ ಕವಿಯ ನಾಡಿನ ಪ್ರಕೃತಿ ವ್ಯಾಪಾರದ ಬಗೆಗಿನ ಸೂಕ್ಷ್ಮ ಸಂವೇದನೆಗೆ ಹಿಡಿದ ಕನ್ನಡಿಯಾಗಿದೆ. ಕೇಣ್, ಕವರ್, ಬಂದಿ, ವಾಱೆ, ಮಡಿ, ಪೊಱೆ, ಪೊಡೆ, ಕಱೆ, ಪಿಡಿ ಎಂಬುವು ಕೆಟ್ಟ, ಹಗ್ಗ, ಗಾಯ, ಪೊರೆ, ಕಳಂಕ, ಬಲಾತ್ಕಾರ ಎಂಬ ಹೀನಾರ್ಥದಲ್ಲಿ ಬಳಕೆಯಲ್ಲಿರದೆ ಕಡಿವಾಣ, ಸೂರೆ, ನಾರು, ಸಂಬಂಧ, ತೆನೆ, ಹಿಂಡು, ಹೆಣ್ಣಾನೆ ಎಂಬ ಉತ್ಕೃಷ್ಟಾರ್ಥದಲ್ಲಿಯೇ ಬಳಕೆಯಾಗುವುದನ್ನು ಹೇಳಿದ್ದಾನೆ. ಇಲ್ಲಿ ಶಾಂತಿ, ಸುಖ, ಸಂತೋಷಗಳ ಆವರಣದಲ್ಲಿ ನಾಡಿನ ನೈತಿಕತೆಯು ಸುಪ್ತವಾಗಿರುವುದೆಂದು ನಮ್ಮ ಚಿತ್ತದಲ್ಲಿ ಅಚ್ಚೊತ್ತುತ್ತಾನೆ. ಹೀಗೆ ಕನ್ನಡದ ಹೀನಾರ್ಥಗಳಿಗೂ ಇಲ್ಲಿ ಉನ್ನತ ಅರ್ಥವಂತಿಕೆ ಇತ್ತು ಎಂದು ಹೇಳುವಲ್ಲಿ ಕಲ್ಪಕತೆಯಿದ್ದರೂ ಕವಿ ತನ್ನ ನಾಡನ್ನು ನೋಡುತ್ತಿರುವ ದೃಷ್ಟಿಕೋನ ಇಲ್ಲಿ ವೇದ್ಯಗೊಳ್ಳುತ್ತದೆ. ಇಂತಹ ನಾಡಿನಲ್ಲಿ-

ಪುದಿದೆಳವಳ್ಳಿಯಿಲ್ಲದ ಮರಂ, ಕೊಳನಿಲ್ಲದ ತೋಂಟಮಾವಲಿ
ಲ್ಲದ ಕೆಱೆ, ಗಂಡು ಕೋಗಿಲೆಗಳಿಲ್ಲದ ಬಂದೆಳಮಾವು, ಕಾಲ್ಗಳಿ।
ಲ್ಲದ ತೊಱೆ, ತುಂಬಿಯಲ್ಲದಲರಂಚೆಗಳಿಲ್ಲದ ಬೆಂಚೆ ಬೇಟಮಿ
ಲ್ಲದ ಬೆಲೆವೆಣ್ಗಳಿಲ್ಲ ಪೆಸರಿಲ್ಲದ ಮಾನಿಸರಿಲ್ಲದೆಲ್ಲಿಯುಂ॥

ಹೀಗೆ ಎಲ್ಲಾ ವಿಧದಲ್ಲೂ ಸುಂದರ ಸಂಪದ್ಭರಿತವಾದ 'ಕರ್ನಾಟಕ'ವನ್ನು ಕಬ್ಬಿಗರ ಕಾವದ ನಾಯಕ ನನೆವಿಲ್ಲನ ಕಂಪಿನ ಪೊಳಲಿನಲ್ಲಿ ಅನಾವರಣ ಮಾಡುತ್ತಾನೆ. ಹೀಗೆ ಪ.ಸಂ. ೧೮–೩೮ರ ನಡುವಿನ ವಚನ, ವೃತ್ತ, ಕಂದ ಪದ್ಯಗಳಲ್ಲಿ ಸಮಗ್ರ ಕರ್ನಾಟಕವು ವ್ಯಕ್ತವಾದರೂ ಬನವಾಸಿಯ ಹೆಚ್ಚು ಒಳವಿವರಗಳು ಪ್ರಕಟಗೊಂಡಿವೆ. ಹೀಗೆ ಕವಿ ಸುಂದರ ಬನವಾಸಿಯಲ್ಲಿ ಬೆಳೆದು ಬಂದಿದ್ದರಿಂದ ಪಂಪನಂತೆ ನಾಡನ್ನು ಕುರಿತು ಹಾಡುವಲ್ಲಿ ಕರಗುತ್ತಾನೆ, ಗಾಳಿಯಲ್ಲಿ ದನಿಯಾಗಿ ಮೈಮರೆಯುತ್ತಾನೆ. ಈ ಪದ್ಯಗಳು ಭಾವಗೀತ ಸತ್ವದಿಂದ ಕೂಡಿರುವುದಲ್ಲದೇ, ಭಾವದ ಕಟ್ಟೆಯನ್ನು ಒಡೆದಿರುವುದು ಮುಂದಿನ ಪದ್ಯವೇ ಸಾಬೀತುಗೊಳಿಸುತ್ತದೆ.

ಪಲವುಂ ನಾಲಗೆಯುಳ್ಳವಂ ಬಲಗೊಂಡೆಂದುಂ ಬಣ್ಣಿಸಲ್ಕಾಱನಾ
ನೆಲನಂ ಮತ್ತಿನ ಮಾನಿಸರ್ ಪೊಗೞಲೇನಂ ಬಲ್ಲರೆಂಬೊಂದು ಬ।
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆಱೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ॥

ಇಂತಹ ವರ್ಣನೆಗಳಲ್ಲಿ ಕವಿ ತನ್ನ ಕಥಾ ಭೂಮಿಕೆಯ ನೈಜ ನೆಲೆ ಕಂಪುಪೊಳಲು ಎಂಬುದನ್ನೇ ಮರೆತಂತಿದೆ. ಹೊರ ಮತ್ತು ಒಳಗಣ್ಣುಗಳೆರಡಕ್ಕೂ ಕಂಪಿನಪೊಳಲು ಕಾಣಿಸದೆ ನೇರವಾಗಿ 'ಕನ್ನಡಮೆನಿಪ್ಪಾ ನಾಡು' ಇಲ್ಲಿ ಕಾಣಿಸಿಕೊಂಡಿದೆ. ಇದು ಆತ್ಮನಿಷ್ಠ ವರ್ಣನೆ. ಅಂತರಂಗದಲ್ಲಿ ಉಂಟಾದ ಭಾವ ಪ್ರಚೋದನೆ ಇಲ್ಲಿ ಅಕ್ಷರಾಭಿವ್ಯಕ್ತಿ ಸಾಧಿಸಿದೆ. ನಾಡಿನ ಬಗೆಗೆ ಆಳವಾದ ಅಭಿಮಾನ ಉಳ್ಳಂತಹ ಕವಿಗಳಿಂದ ಮಾತ್ರ ಇಂತಹ ಪದ್ಯಗಳ ಸಿದ್ಧಿ. ಆದಿಶೇಷನ ವಿಷಯ ಕವಿಸಮಯವಾಗಿದ್ದರೂ ಇಲ್ಲಿ ಒಪ್ಪವಾಗಿ ಸಾಧಿಸಿರುವ ಭಾವದ ಶಬ್ದಚಿತ್ರ ಮನನೀಯ. ಹಲವು ನಾಲಗೆಯುಳ್ಳ ಆದಿಶೇಷನಿಂದಲೇ ಬಣ್ಣಿಸಲಸದಳವಾದ ಕನ್ನಡ ನಾಡನ್ನು ಯಾರಿಂದ ತಾನೇ ಬಣ್ಣಿಸಲು ಸಾಧ್ಯ? ಆದ್ದರಿಂದಲೇ ಪಂಪ ಸೋತು, ಒಂದೇ ಮಾತಿನಲ್ಲಿ "ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್" ಎಂದು ಹೇಳಿ ವಿರಮಿಸಿರುವುದು.

ಇಂತಹ ನಾಡಿನಲ್ಲಿ ನನೆಯಂಬನ ರಾಜಧಾನಿಯಾದ ಪೂವಿನಪೊೞಲಿನ ವರ್ಣನೆಯು ೨೫ರಿಂದ ೩೩ನೆಯ ಪದ್ಯದವರೆಗೂ ಚಾಚಿಕೊಂಡಿದೆ. ಬನ, ಕೋಟೆ, ರಾಜಬೀದಿ, ಅನಂತರ ರನ್ನದ, ಕಂಚುಗಾರರ, ಸೀರೆವರದರ, ಪಸರ, ಮಾಲೆಗಾರ್ತಿಯರ, ಅಂತಿಮವಾಗಿ ಸೂಳೆಗೇರಿಯ ವರ್ಣನೆಯನ್ನು ಕವಿ ಇಲ್ಲಿ ತಂದಿದ್ದಾನೆ. ಈ ವರ್ಣನೆಗಳು ಕವಿ ಪರಂಪರೆಗೆ ಅಂಟಿಕೊಂಡದ್ದರ ಫಲವಾಗಿ ಬಂದದ್ದು ಎಂದು ಮೇಲ್ನೋಟಕ್ಕೆ ಕಾಣಿಸುವುದು ಸಹಜವಾದುದಾಗಿದೆ. ಆದರೆ ಅದರ ಒಳಹೊಕ್ಕು ನೋಡಿದಾಗ ಅಂದಿನ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯ ಮಹತ್ತರ ಭಾಗವೆಂದು ಅವುಗಳನ್ನು ಪರಿಗಣಿಸಿದ್ದ

ಜನ ಮತ್ತು ಅವರ ವಕ್ತಾರನಾಗಿ ಇಲ್ಲಿ ಕವಿ ಕಾಣಿಸಿಕೊಳ್ಳುತ್ತಾನೆ. ಪೂವಿನ ಪೊಟಿಲು (ಕರ್ನಾಟಕ)ಗೆ ವೈಭವದ ಪರಿಪೂರ್ಣತೆಯನ್ನು ತಂದು ಕೊಡುವುದಕ್ಕಾಗಿ ಈ ವರ್ಣನೆಯನ್ನು ಬಿಡದೆ ತರುತ್ತಾನೆ ಎಂಬುದು ಇದರ ಮುಖ್ಯ ಚರ್ಚೆ. ಇದು ಅಂದಿನ ಚಾರಿತ್ರಿಕ ಸಂದರ್ಭದ ವಸ್ತುಸ್ಥಿತಿಯೂ ಆಗಿದೆ.

ಹೀಗೆ ಆಂಡಯ್ಯ ತನ್ನ ಕಾವ್ಯಕ್ಕೆ ಸಂಸ್ಕೃತದಿಂದ ವಸ್ತುವನ್ನು ತಂದು, ಕನ್ನಡ ನಾಡಿನ ಭೂಮಿಕೆಯಲ್ಲಿ ಪ್ರತಿಷ್ಠಾಪಿಸಿ, ಆ ಕತೆಯನ್ನು ಕನ್ನಡಮಯ ಗೊಳಿಸುವುದರ ಜೊತೆಗೆ ಕಾಮನನ್ನು ಕನ್ನಡಿಗನನ್ನಾಗಿ ಮಾರ್ಪಡಿಸುತ್ತಾನೆ. ಹೀಗೆ ಕನ್ನಡಕ್ಕೆ ಸಂಸ್ಕೃತದ ಪ್ರವೇಶಿಕೆಯನ್ನು ನೀಡುತ್ತಾನೆ. ಹೀಗೆ ಕನ್ನಡದ ರಾಜನಾದ ಕಾಮನನ್ನು ಪ.ಸಂ. ೩೮ರಿಂದ ಮುಂದಕ್ಕೆ ಹತ್ತಾರು ಪದ್ಯಗಳಲ್ಲಿ ರೂಪ, ಅತಿಶಯತೆ, ಶೌರ್ಯ, ತ್ಯಾಗ ಮೊದಲಾದ ನೆಲೆಗಳಲ್ಲಿ ಕಂಡರಿಸುತ್ತಾನೆ.

ಹೀಗೆ ಕವಿ ಕಾವ್ಯಾರಂಭದಲ್ಲಿಯೇ ಕನ್ನಡ ನಾಡನ್ನು ಕಥಾ ಭೂಮಿಕೆಯನ್ನಾಗಿ ಮಾಡಿ, ಕಾಮನನ್ನು ಕನ್ನಡಿಗನನ್ನಾಗಿ ಮಾಡಿ, ಸುದೀರ್ಘ ಪದ್ಯಗಳಲ್ಲಿ ತಾನು ಹೊಮ್ಮಿಸಿರುವ ಭಾವಲಹರಿಯಲ್ಲಿ ಅಂದಿನ ಕನ್ನಡ ನಾಡಿನ ಜೀವಂತ ಮೌಲ್ಯಗಳು ಮತ್ತು ತನ್ನಲ್ಲಿದ್ದ ಅಭಿಮಾನದ ನೆಲೆಯನ್ನು ಚಿರಸ್ಥಾಯಿಗೊಳಿಸಿದ್ದಾನೆ. ಹೀಗೆ ಪ್ರಾಚೀನ ಕನ್ನಡ ಕಾವ್ಯದ ಸಂದರ್ಭದಲ್ಲಿ ನಾಡನ್ನು ಕುರಿತಂತೆ ಬಾಹ್ಯ ಮತ್ತು ಆಂತರ್ಯದ ತುಡಿತ ಮತ್ತು ತುರ್ತಾಗಿ ಹೊರ ಬಂದ ಅಭಿಮಾನ ಮತ್ತು ಚಿಂತನೆಯ ನೆಲೆಯಲ್ಲಿ ಪಂಪನನ್ನು ಬಿಟ್ಟರೆ ಆಂಡಯ್ಯನೇ ಕಣ್ಣಿಗೆ ಕಟ್ಟಿ, ಮನಸ್ಸಿಗೆ ಮುಟ್ಟುವವನು.

ಆಂಡಯ್ಯ ಕಾವ್ಯ ರಚನೆ ಮಾಡಿದ್ದು ಶೈವ –ಬ್ರಾಹ್ಮಣ ಮತ್ತು ಜೈನ ಮತಗಳ ಸಂಘರ್ಷದ ಕಾಲದಲ್ಲಿ. ಇದೇ ಸುಮಾರಿನಲ್ಲಿ ಕಾಣಿಸಿಕೊಂಡ ಬ್ರಹ್ಮಶಿವನಂತಹ ಕವಿಗಳು ಧರ್ಮದ ವಿಷಯದಲ್ಲಿ ಸಂಯಮವನ್ನು ಮೀರಿ ಅನ್ಯ ಧರ್ಮದ ವಿಡಂಬನೆಯನ್ನು ಮಾಡಿದ್ದಾರೆ. ಇದಕ್ಕೆ ಅವನ 'ಸಮಯ ಪರೀಕ್ಷೆ' ಉತ್ತಮ ನಿದರ್ಶನ. ಇದರಲ್ಲಿ ಜೈಧರ್ಮದ ತೀಕ್ಷ್ಣ ವಿಡಂಬನೆ ಇದೆ. ಅಂತೆಯೇ ನಯಸೇನನು ತನ್ನ ಜೈನಧರ್ಮದ ಪಾರಮ್ಯವನ್ನು ಎತ್ತಿ ಹಿಡಿಯುವ ಮತ್ತು ಅನ್ಯರನ್ನು ತನ್ನ ಧರ್ಮದೆಡೆಗೆ ಆಕರ್ಷಿಸುವ ನಿಟ್ಟಿನಲ್ಲಿ ಯುಕ್ತಿಪೂರ್ಣವಾಗಿಯೇ ವೈದಿಕ ಧರ್ಮದ ವಿಡಂಬನೆಯನ್ನು ಮಾಡಿರುವುದು ಈಗಾಗಲೇ ಅವನ 'ಧರ್ಮಾಮೃತ' ಕಾವ್ಯದಿಂದ ತಿಳಿದಿರುವುದಾಗಿದೆ. ಹೀಗೆ ಮುಖ್ಯವಾಗಿ ಈ ಕವಿಗಳು ಧರ್ಮಕ್ಕೆ ಹೆಚ್ಚು ಒತ್ತುಕೊಟ್ಟು ಕನ್ನಡದಲ್ಲಿ ಕೇವಲ ಮಾತನಾಡಿದವರು. ಆದರೆ ಇವರ ಸಾಲಿನಲ್ಲಿ ಬರುವ ಆಂಡಯ್ಯನಂತಹ ಕವಿ ಇವರಿಗೆ ಹೊರತಾಗಿ ನಿಲ್ಲುತ್ತಾನೆ. ತಾನು ಜೈನನಾಗಿದ್ದರೂ ತನ್ನ ಧರ್ಮ ಪ್ರಭಾವನೆಗಿಂತ ನೂರು ಪಟ್ಟು ಮಿಗಿಲಾಗಿ ಕನ್ನಡವನ್ನು ಕೈ ಹಿಡಿಯುತ್ತಾನೆ. ಅದಕ್ಕೊಂದು ಉತ್ತಮ ನಿದರ್ಶನ ಈ ಕೆಳಗಿನ ಕಾವ್ಯ ಪ್ರಸಂಗ.

ಚಂದ್ರನನ್ನು ಸೆರೆ ಹಿಡಿದ ಶಿವನೊಂದಿಗೆ ಯುದ್ಧಾರಂಭಗೊಳ್ಳುವ ಮುನ್ನ ಕಾಮನು ತನ್ನ ರಾಯಭಾರಿಯನ್ನು ಶಿವನಲ್ಲಿಗೆ ಕಳುಹಿಸುತ್ತಾನೆ. ಆಗ ಶಿವನು ಉದ್ದವಾದ ಕೆಂಪು

ಜಡೆಗಳಿಂದಲೂ ಸೌಂದರ್ಯದ ಹಣೆಗಣ್ಣಿನಿಂದಲೂ ಹಾವುಗಳ ಆಭರಣಗಳಿಂದಲೂ ಯಶಸ್ಸೇ ಮೈಕಾಂತಿಯೆಂಬಂತಿದ್ದ ವಿಭೂತಿಯಿಂದಲೂ ಬಿಗಿದುಟ್ಟ ಹುಲಿ ಚರ್ಮ ದಿಂದಲೂ ಗಜಾಸುರನ ಚರ್ಮದಿಂದಾದ ಮೇಲು ಹೊದಿಕೆಯಿಂದಲೂ ಸ್ವರ್ಗಲೋಕದ ಯತಿಗಳ ಸಾಲಿನ ನಡುವೆ ನೋಡುವವರ ಕಣ್ಣಿಗೆ ಹಬ್ಬವಾಗುವಂತೆ ಕುಳಿತಿದ್ದನು. ಇದಿಷ್ಟು ಆಂಡಯ್ಯನೇ ನೇರವಾಗಿ ಆಡುತ್ತಾನೆ. ಅನಂತರದಲ್ಲಿ ರಾಯಭಾರಿಯ ಮನ ಹೊಕ್ಕು ಶಿವನನ್ನು ಪರಿಭಾವಿಸುವ ಚಿತ್ರಣವೂ ಅತ್ಯಂತ ಗೌರವದಿಂದ ಕೂಡಿರುವುದಲ್ಲದೆ, ಧರ್ಮ ಸಹಿಷ್ಣುತೆ ಮತ್ತು ಕನ್ನಡವನ್ನಾಡುವ ಎಲ್ಲಾ ಧರ್ಮೀಯರ ಬಗೆಗಿನ ನೈಜ ಕಳಕಳಿ ಕಂಡುಬರುತ್ತದೆ. ಹೀಗೆ ಶೋಭಿಸುವ ಶಿವನ ಸೌಂದರ್ಯವನ್ನು ಕಂಡ ರಾಯಭಾರಿ ಆಶ್ಚರ್ಯಪಟ್ಟು, ನಮಸ್ಕರಿಸುತ್ತಾ ಅನಂತರ ಬಿನ್ನಹವೆಂದು ಹೇಳಿ ತನ್ನ ದೊರೆಯ ಪರಾಕ್ರಮವನ್ನು ವರ್ಣಿಸುತ್ತಾ ಸಾಗಿ ಅಂತಿಮವಾಗಿ ಈ ಮಾತುಗಳನ್ನು ಆಡುತ್ತಾನೆ.

> ನಿನ್ನಯ ಚಾಗಮುಂ ಸಿರಿಯುಮಾಳ್ತನಮುಂ ದೊರೆವೆತ್ತ ಮೈಮೆಯುಂ
> ಮನ್ನಣೆಯುಂ ಪೊದಟ್ದ ಜಸಮುಂ ಬಗೆಯುಂ ಚಲಮುಂ ನೆಗೆಟ್ತೆಯುಂ।
> ನನ್ನಿಯುಮಾರ್ಗಮಚ್ಚರಿಯನಿತ್ತಪುವೆಮ್ಮೊಡೆಯಂಗೆಮೀ ತೆಱಂ
> ಪೊನ್ನದು ಕಮ್ಮಿತಾದ ತೆಱನಲ್ಲವೆ ನಲ್ವಗೆಗೊಂಡೊಡಿರ್ವರಂ॥

ನಿನ್ನಲ್ಲಿ ಅತಿಶಯವಾಗಿರುವ ತ್ಯಾಗ, ಗುಣ, ಸಂಪತ್ತು, ಪರಾಕ್ರಮ, ಮಹಿಮೆ, ಮಾನ್ಯತೆ, ಯಶಸ್ಸು, ಮನಸ್ಸು, ಛಲ, ಖ್ಯಾತಿ, ಸತ್ಯವಂತಿಕೆಗಳು ನಮ್ಮ ಒಡೆಯನಿಗೂ ಇವೆ. ಹೀಗಿರುವಾಗ ನೀವಿಬ್ಬರೂ ಪರಸ್ಪರ ಪ್ರೇಮದಿಂದಿರುವುದು ಬಂಗಾರಕ್ಕೆ ಪರಿಮಳ ದೊರೆತಂತಾಗುವುದಿಲ್ಲವೇ? ಎಂದು ಶಿವನನ್ನು ಕುರಿತು ರಾಯಭಾರಿ ಆಡುವ ಮಾತಿನಲ್ಲಿ ಯುದ್ಧ ಸಂಧಾನ ವ್ಯಕ್ತವಾದರೂ, ನನ್ನ ಅಧ್ಯಯನದ ವಿವಕ್ಷೆಯಂತೆ ಆಂಡಯ್ಯನ ಧರ್ಮ ಸಹಿಷ್ಣುತೆಯೇ ಎದ್ದು ಕಾಣುತ್ತದೆ. ಹೀಗೆ ಜೈನ ಮತ್ತು ಶೈವ ಧರ್ಮಗಳ ಸಂಘರ್ಷದ ಪರಮಾವಧಿ ಕಾಲ ಘಟ್ಟದಲ್ಲಿ ಕವಿ ಜೀವಿಸಿದ್ದರೂ ಅನ್ಯ ಧರ್ಮದ ವಿಡಂಬನೆ ಮಾಡುವುದಿಲ್ಲ. ಅದು ಅವನ ಉದ್ದೇಶವೂ ಆಗಿರಲಿಲ್ಲ; ನಯಸೇನ, ಬ್ರಹ್ಮಶಿವರಂತೆ. ಆದರೆ ಯುದ್ಧ ಪ್ರಸಂಗದಲ್ಲಿ ಕಾಮನು ಶಿವನನ್ನು ಸಂಬೋಧಿಸಿ ಆಡುವ ಕೆಲವು ಮಾತುಗಳಿವೆ. ಆದರೆ ಆ ಮಾತುಗಳು ಸನ್ನಿವೇಶ ಸಂದರ್ಭದ ಹಿನ್ನೆಲೆಯಲ್ಲಿ ಪಾತ್ರಕ್ಕೆ ಔಚಿತ್ಯವನ್ನು ತಂದ ಉಕ್ತಿಗಳೆಂದೇ ಭಾವಿಸಬೇಕು.

ಹೀಗೆ ಆಂಡಯ್ಯ ಸ್ವತಃ ಜೈನನಾಗಿದ್ದರೂ, ಪೂರ್ವದ ಸಂಸ್ಕೃತ ಕತೆಯನ್ನು ಕನ್ನಡಕ್ಕೆ ತಂದಾಗಲೂ ವೀರ ನಿಷ್ಠೆಯ ಕನ್ನಡ ಕವಿಯಾಗಿ ಮುಖ್ಯವಾಗಿ ಕಾಣಿಸಿಕೊಳ್ಳುತ್ತಾನೆಯೇ ಹೊರತು ಧರ್ಮದ ವಕ್ತಾರನಾಗಿ ಅಲ್ಲ. ಈ ಹಿನ್ನೆಲೆಯಲ್ಲಿ ಈತನಿಗೆ ಧರ್ಮನಿಷ್ಠೆ ಮುಖ್ಯ ಎನ್ನಿಸಲಿಲ್ಲ. ಕನ್ನಡ ಭಾಷೆ ಮುಖ್ಯ ಎನ್ನಿಸಿದ್ದರಿಂದ ಧರ್ಮವನ್ನು ಲಿಬರಲ್ ಆಗಿ ತೆಗೆದುಕೊಂಡು ಭಾಷೆಯನ್ನು ಬೆಳೆಸಿದನು. ಎಲ್ಲಾ ಧಾರ್ಮಿಕ ಪರಿಧಿಗಳಿಗೂ ಕನ್ನಡವನ್ನು ಚಾಚಿಸಿದನು. ಈ ನೆಲೆಯಲ್ಲಿ ಶೈವ ಮತ್ತು

ಜೈನ ಧರ್ಮಗಳ ಸಂಘರ್ಷ ಕಾಣಲಿಲ್ಲ. ಬದಲಿಗೆ ಕನ್ನಡ ಭಾಷೆ ಮತ್ತು ಕಾವ್ಯವು ಎರಡೂ ಧರ್ಮಗಳ ಬೇಲಿಗಳ ಒಳಕ್ಕೂ ಪಸರಿಸಿ ಬೆಳೆಯುವಂತಾಯಿತು.

ಹೀಗೆ ಶೈವ ಸಂಸ್ಕೃತಿಯ ಪ್ರತೀಕವಾದ ಶಿವನ ಬಗೆಗಿನ ಧೋರಣೆಯಲ್ಲಿ ಕವಿಯ ಧರ್ಮ ಸಹಿಷ್ಣುತೆಗಿಂತ ಮಿಗಿಲಾಗಿ ಕನ್ನಡವನ್ನು ಹತ್ತು ಧರ್ಮಗಳ ಒಳಕ್ಕೂ ಪ್ರವೇಶಿಸಿ ಬೆಳೆಸಬೇಕೆಂಬುದೇ ಮುಖ್ಯ ಆಶಯವಾಗಿದೆ.

ಆಶ್ರಯದಾತನನ್ನು ಕಾವ್ಯ ನಾಯಕನೊಂದಿಗೆ ಸಮೀಕರಿಸಿ ಕೃತಿ ರಚನೆ ಮಾಡುವ ಪರಿಪಾಠವನ್ನು ನಮ್ಮ ಚಂಪೂ ಕವಿಗಳು ಹೊಂದಿದ್ದರು. ಇದರಲ್ಲಿ 'ರಾಜಾಶ್ರಯ' ಎಂಬ ಅವಕಾಶವಾದಿ ಧೋರಣೆಯೇ ಕವಿಗಳಿಂದ ಈ ಕೆಲಸ ಮಾಡಿಸುತ್ತಿದ್ದಿತು ಎಂಬುದು ಪೂರ್ಣ ಸತ್ಯವಲ್ಲ. ಒಟ್ಟಾರೆ ರಾಜಾಶ್ರಯ ಪಡೆದ ಕವಿ ತನ್ನ ಕೃತಿಯಲ್ಲಿ ಕಥಾ ನಾಯಕನೊಂದಿಗೆ ಆಶ್ರಯದಾತನನ್ನು ಸಮೀಕರಿಸಿ ಮಾತನಾಡುವಲ್ಲಿ ರಾಜನ ಪರವಾದ ಭಕ್ತಿ, ಅಭಿಮಾನವೂ ವ್ಯಕ್ತಗೊಂಡಿರುವುದಕ್ಕೆ ಅನೇಕ ಕಾವ್ಯ ನಿದರ್ಶನಗಳಿವೆ. ಇದಕ್ಕೆ ಪಂಪ, ರನ್ನರ ಕೃತಿಗಳು ಅತ್ಯುತ್ತಮ ನಿದರ್ಶನಗಳು. ಆದರೆ ರಾಜಾಶ್ರಯ ಪಡೆಯದೆ, ತನ್ನ ನಾಡು ಮತ್ತು ಅದರ ರಾಜನ ಬಗೆಗೆ ಅಭಿಮಾನದ ಉಕ್ತಿಗಳು ಮೂಡುವುದು ಸಹ ಅಷ್ಟೇ ಸಹಜವಾಗಿದೆ. ಇದಕ್ಕೆ ಉತ್ತಮ ನಿದರ್ಶನ ಆಂಡಯ್ಯನ ಕಾವ್ಯ.

ಈತ ರಾಜಾಶ್ರಯ ಪಡೆದಿರಲಿಲ್ಲವೆಂಬುದು ಚಾರಿತ್ರಿಕ ಸತ್ಯ. ಬನವಾಸಿಯಲ್ಲಿ ಜೀವಿಸಿದ್ದ ಈತ ಅಂದಿನ ಕದಂಬರ ರಾಜಕೀಯ ಧ್ವನಿಯನ್ನು ತನ್ನ ಕಾವ್ಯದಲ್ಲಿ ತರುತ್ತಾನೆ. ತನ್ನ ಕಾವ್ಯ ನಾಯಕನೊಂದಿಗೆ ತನ್ನ ನಾಡಾದ ಬನವಾಸಿಯ ದೊರೆ ಕದಂಬ ಕಾಮದೇವನನ್ನು ಸಮೀಕರಿಸದಿದ್ದರೂ ಆತನನ್ನು ಕುರಿತ ವಿವರಗಳು ಅಭಿಮಾನದ ಮೂಸೆಯಲ್ಲಿ ಮೂಡಿಸಿದ್ದಾನೆ. ಇದಕ್ಕೆ ಹಿನ್ನೆಲೆಯಾಗಿ ಅಂದಿನ ಚರಿತ್ರೆಯನ್ನು ಸ್ಥೂಲವಾಗಿ ಇಲ್ಲಿ ಅರಿಯುವುದು ಸೂಕ್ತ.

ಕ್ರಿ.ಶ. ೫ನೆಯ ಶತಮಾನದ ಹೊತ್ತಿಗೆ ರಾಜ್ಯ ಕಟ್ಟಿದ ಕದಂಬರು ಮೊದಲ ಕನ್ನಡ ಅರಸರಾಗಿದ್ದರು. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮಯೂರವರ್ಮನಾದಿಯಾಗಿ ಹಲವು ರಾಜರು ಸುಮಾರು ನೂರೈವತ್ತು ವರ್ಷಗಳ ಕಾಲ ಸ್ವತಂತ್ರವಾಗಿ ರಾಜ್ಯವನ್ನಾಳಿದರು. ಅನಂತರದಲ್ಲಿ ಕ್ರಮವಾಗಿ ಗಂಗರು, ಚಾಲುಕ್ಯರು ಮತ್ತು ರಾಷ್ಟ್ರಕೂಟರು ಪ್ರಬಲರಾದಾಗ ಇವರ ಇತಿಹಾಸ ಮಂಕಾಯಿತು. ಅನಂತರ ಇವರು ಆಂಡಯ್ಯನ ಕಾಲಕ್ಕೆ ಬನವಾಸಿಯಲ್ಲಿ ಮಾಂಡಳಿಕರಾಗಿ ಕಾಣಿಸಿಕೊಳ್ಳುವುದು ಶಾಸನಗಳಿಂದ ವೇದ್ಯಗೊಳ್ಳುತ್ತದೆ.

ಆಂಡಯ್ಯ ಅಥವಾ ಕದಂಬ ಕಾಮದೇವನ ಕಾಲವು ಕಲ್ಯಾಣ ಚಾಲುಕ್ಯರಿಗೆ ಅವನತಿ ಕಾಲ ಹಾಗೂ ಹೊಯ್ಸಳರಿಗೆ ಪ್ರಾದುರ್ಭಾವದ ಕಾಲ. ಈ ಸಂದರ್ಭದಲ್ಲಿ ಅಂದರೆ ೧೧೮೦-೧೨೧೭ರವರೆಗೆ ಮಲೆ, ತುಳು, ಪಶ್ಚಿಮ ಕರಾವಳಿಗಳನ್ನೊಳಗೊಂಡ

ಪ್ರಾಂತ್ಯವನ್ನು ಕದಂಬ ಕಾಮದೇವನು ಆಳುತ್ತಿದ್ದನು. ಮುಂದೆ ಹಾನಗಲ್ಲನ್ನು ಹೊಯ್ಸಳರು ವಶಪಡಿಸಿಕೊಂಡಾಗಲೂ ಕ್ರಿ.ಶ. ೧೨೧೧ರ ಹೊತ್ತಿಗೆ ಮರಳಿ ಅದನ್ನು ಜಯಿಸಿದನೆಂದು ಶಾಸನಗಳು ತಿಳಿಸುತ್ತವೆ. ಹೀಗೆ ಸಮುದ್ರ ತೀರ ಪ್ರಾಂತ್ಯವನ್ನು ಇಡಿಯಾಗಿ ಕದಂಬ ಕಾಮದೇವನು ಆಳಿಕೊಂಡಿದ್ದನು. ಆ ಸಂದರ್ಭದಲ್ಲಿ 'ಯುದ್ಧರಂಗದ ತ್ರಿನೇತ್ರ' ನೆಂಬ ಬಿರುದು ಹೊತ್ತ ಹೊಯ್ಸಳ ದೊರೆ ವೀರಬಲ್ಲಾಳನನ್ನು ಕದಂಬ ಕಾಮದೇವನು ಜಯಿಸಿದ, ರಾಜ್ಯ ವಿಸ್ತರಿಸಿದ, ರಾಜಕೀಯ ಧ್ವನಿಯನ್ನು ಕವಿ ಈ ಪದ್ಯದಲ್ಲಿ ಕಟ್ಟಿಕೊಡುತ್ತಾನೆಂಬುದು ಸ್ಪಷ್ಟ.

> ಪಡೆಯೆಲ್ಲಂ ನಡೆನುಡಿ ಮೆಚ್ಚಿ ಬಿದಿಯಂ ನಾಣ್ಗೊಡೆ ಬೆಂಕೊಂಡವಂ
> ಕಡುಲೊಳೆ ಪಟ್ಟನನಿಕ್ಕಿ ಮೆಚ್ಚಿದದಟಂ ಮುಕ್ಕಣ್ಣನಂ ಗೆಲ್ದನೆಪೊಡೆಯಂ॥

ಇಲ್ಲಿ ಬರುವ 'ಮುಕ್ಕಣ್ಣ' ಕೇವಲ ಶಿವನಾಗಿರದೆ 'ಯುದ್ಧರಂಗದ ತ್ರಿನೇತ್ರ' ನೆಂಬ ಬಿರುದು ಹೊತ್ತ ಹೊಯ್ಸಳ ವೀರಬಲ್ಲಾಳನೇ ಆಗಿದ್ದಾನೆ. ಆತನನ್ನು ಗೆದ್ದ ತನ್ನ ದೊರೆಯ ಬಗೆಗಿನ ಅಭಿಮಾನದ ಸೆಲೆ ಈ ಪದ್ಯದಲ್ಲಿ ಉಸಿರಾಡಿದೆ. ಇದರ ಮೂಲಕ ಅಂದು ರಾಜನ ಮೂಲಕವೂ ವ್ಯಕ್ತಗೊಳ್ಳುತ್ತಿದ್ದ ಜನರ ನಾಡಿನ ಅಭಿಮಾನವು ಇಲ್ಲಿ ಕವಿಯಿಂದ ನುಡಿಯಾಗಿದೆ. ಅಲ್ಲದೆ ಶಿವ ಮತ್ತು ಕಾಮನ ನಡುವಿನ ಯುದ್ಧ ಪ್ರಸಂಗದಲ್ಲಿ ಕಾಣಿಸಿಕೊಳ್ಳುವ ಬಿದಿವೆಡಂಗ, ಜಿಂಜಮಾಣಿಕ, ಹರಿರಾಯ, ತೋರಹತ್ತ, ಚಾವಟಮಲ್ಲ, ಮುಱಿವ ರಕ್ಕಸ, ರಾಯದಳಸೂಱೆಕಾರ ಎಂಬುವು ಹೊಯ್ಸಳ ಸೇನೆಯ ಆನೆಗಳ ಹೆಸರಾಗಿರಬಹುದೆಂಬ ಊಹೆಗೂ ಅವಕಾಶವಿದೆ.

ಹೀಗೆ ಈ ಯುದ್ಧ ಪ್ರಸಂಗದಲ್ಲಿ , ಅದರ ನೆಪದಲ್ಲಿ ಕವಿ ತನ್ನ ಬನವಾಸಿ ನಾಡಿನ ದೊರೆಯಾದ ಕದಂಬ ಕಾಮದೇವನ ವೀರ ವೈಭವವನ್ನು ಅಭಿಮಾನದಿಂದ ಧ್ವನಿಸುತ್ತಾನೆ.

ಇಲ್ಲಿಯವರೆಗೂ ಆಂಡಯ್ಯನ ನಾಡಿನ ಅಭಿಮಾನದ ವಿವಿಧ ನೆಲೆಗಳನ್ನು ಪರ್ಯಾಲೋಚಿಸಿದ್ದಾಯಿತು. ಇದರಲ್ಲಿ ಕನ್ನಡಮೆನಿಪ್ಪ ನಾಡು, ಶಿವನ ಬಗೆಗಿನ ಧೋರಣೆ, ಕದಂಬ ಕಾಮದೇವನನ್ನು ಕುರಿತ ರಾಜಕೀಯ ಧ್ವನಿ –ಇವು ಮುಖ್ಯ ನೆಲೆಗಳಾಗಿವೆ. ಇನ್ನು ಮುಂದೆ ಆಂಡಯ್ಯನ ನುಡಿಯ ಪರವಾದ ಅಭಿವ್ಯಕ್ತಿ ಸಮಸ್ಯೆ ಮತ್ತು ಮಾರ್ಗೋಪಾಯಗಳನ್ನು ಕುರಿತ ಚರ್ಚೆಗೆ ತೊಡಗಲಾಗಿದೆ.

ಕನ್ನಡವು ಸಂಸ್ಕೃತ ಜನ್ಯವೆಂದು ಕೇಶಿರಾಜ, ಭಟ್ಟಾಕಳಂಕ ಮೊದಲಾದ ಪ್ರಾಚೀನ ವೈಯಾಕರಣಿಗಳು ಭಾವಿಸಿದ್ದರು. ಸಂಸ್ಕೃತವನ್ನು ದೇವ ಭಾಷೆಯೆಂದೂ, ಕನ್ನಡ ಮೊದಲಾದ ಇತರೆ ದೇಸೀ ಭಾಷೆಗಳು ಶೂದ್ರ ಜಾತಿಗೆ ಸೇರಿದವುಗಳೆಂಬ ಭಾವನೆ ಪಂಡಿತರಾದಿಯಾಗಿ ಜನಮನದಲ್ಲಿ ಬೇರೂರಿತ್ತು. ಸಂಸ್ಕೃತದ ಸಹಚರ್ಯೆಯಿಂದಲೇ ತಮಿಳನ್ನು ಹೊರತುಪಡಿಸಿ, ಕನ್ನಡವೇ ಆದಿಯಾಗಿ ಇತರೆ ಭಾರತೀಯ ಭಾಷಾ ಸಾಹಿತ್ಯಗಳು ಬೆಳೆದು ಬಂದಿದ್ದು 'ಭಾರತೀಯ ಸಾಹಿತ್ಯ ಸಮೀಕ್ಷೆ' ಸಂ. ೧,೨ ರಿಂದ ದೃಢಪಡುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ಸಂಸ್ಕೃತದ ಪಾತ್ರ ಪ್ರಧಾನವಾಗಿತ್ತು. ಸಂಸ್ಕೃತದ ಸಹಚರ್ಯೆಯಿಲ್ಲದೆ ಯಾವುದೇ ಭಾರತೀಯ

ಭಾಷೆಯಲ್ಲಿ ಉತ್ತಮ ಕೃತಿ ರಚನೆ ಅಸಾಧ್ಯ ಎಂಬ ಭಾವನೆ ಪಂಡಿತ ಕವಿಗಳಲ್ಲಿ ಬಲವಾಗಿ ಬೇರೂರಿತ್ತು. ಈ ಮಾತು ಪ್ರಾಚೀನ ಕನ್ನಡ ಕಾವ್ಯಕ್ಕೂ ಒಪ್ಪುತ್ತದೆ.

ಆದರೆ ಈ ನಡುವೆ ದೇಸೀ ಕವಿಗಳ ಅಂತರಂಗದಲ್ಲಿ ಪುಟಿದೇಳುವ ನಾಡು, ನುಡಿಗಳ ಅಭಿಮಾನವು ಇದನ್ನು ಕುರಿತು ಚಿಂತಿಸುವಂತಾಗುತ್ತದೆ. ಸಂಸ್ಕೃತದ ಬಗೆಗೆ ವ್ಯಾಮೋಹ, ಹಿರಿಮೆ ಮತ್ತು ಕನ್ನಡದ ಬಗೆಗಿನ ಪ್ರೀತಿ ಪಂಪನಂತಹ ಕವಿಗಳಲ್ಲಿ ಮಾರ್ಗ–ದೇಸಿಗಳ ಸಮನ್ವಯ ತತ್ವವಾಗಿ ಕಾವ್ಯ ರೂಪ ತಾಳುತ್ತದೆ. ಈ ಪರಂಪರೆ ಪಂಪ ಪೂರ್ವ ಕಾಲದಿಂದ ಮೊದಲಾಗಿ ಹೊಸಗನ್ನಡದ ಅರುಣೋದಯದವರೆಗೂ ಚಾಚಿ ಮುಂದುವರೆಯುತ್ತದೆ. ಇದನ್ನು ಪಂಪನಂತೆ ವಿಶೇಷವಾಗಿ ನಿರ್ವಹಿಸಿದವರು ಅಂದಿನ ಚಂಪೂ ಕವಿಗಳಾದ ರನ್ನ, ಪೊನ್ನ, ನಾಗವರ್ಮ, ನಾಗಚಂದ್ರ ಮೊದಲಾದವರು. ಈ ಸಮನ್ವಯ ತತ್ವ ಪಂಪನಲ್ಲಿ ಸಮರ್ಥವಾಗಿ ದುಡಿದಿದ್ದರೆ, ನಯಸೇನನಲ್ಲಿ ದೇಸೀ ಪರ ನಿಲುವು ಹೆಚ್ಚಾಗಿರುವುದು ವೇದ್ಯವಾಗುತ್ತದೆ. ಹೀಗೆ ಮಾರ್ಗ ಮತ್ತು ದೇಸಿ ಎಂಬ ಎರಡರ ನಡುವಿನ ಹಾದಿಯ ಮಧ್ಯದಲ್ಲಿ ಪಂಪ ನಡೆದರೆ, ನಯಸೇನ ದೇಸಿ ಭಾಗದತ್ತ ಹೆಚ್ಚು ಹೆಜ್ಜೆ ಹಾಕುತ್ತಾನೆ. ಇದರ ಅನಂತರದ ಕವಿ ಆಂಡಯ್ಯ ಇವರಂತೆ ವ್ಯಕ್ತವಾಗದೆ ವಿಶಿಷ್ಟ 'ಅಚ್ಚಗನ್ನಡ'ದ ವಿನ್ಯಾಸದಲ್ಲಿ ಕಾಣಿಸಿಕೊಳ್ಳಲು ಯತ್ನಿಸುತ್ತಾನೆ. ಪರಿಣಾಮವಾಗಿ ತನ್ನ ಕಾವ್ಯಾರಂಭದ ೧೫ನೆಯ ಪದ್ಯದಲ್ಲಿಯೇ ತನ್ನ ಕಾವ್ಯೋದ್ದೇಶವನ್ನು ಸ್ಪಷ್ಟವಾಗಿ ನಮೂದಿಸುತ್ತಾನೆ.

> ಸೊಗಯಿಪ ಸಕ್ಕದಂ ಬೆರೆಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
> ಬಗೆಗೊಳೆ ಪೇಟಲಾಱರನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ ।
> ಬ್ಬಿಗಗದು ಮಾತನಾಡಿದವೊಲಂದಮನಾಳ್ದಿರೆ ಬಲ್ಪು ನೆ
> ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ॥
>
> ಎಂದು ತಮತಮಗೆ ಬಲ್ಲವ
> ರೆಂದೊಡೆ ನಾನವರ ಬಯಕೆಯ ಸಲಿಸುವೆ।
> ನ್ನೆಂದಚ್ಚಗನ್ನಡಂ ಬಿಗಿ
> ವೊಂದಿರೆ ಕಬ್ಬಿಗರ ಕಾವನೊಲವಿಂದೊರೆದೆಂ॥[೧೦]

ಸಂಸ್ಕೃತವನ್ನು ಬೆರೆಸದೆಯೆ ಕಾವ್ಯ ರಚನೆ ಅಸಾಧ್ಯ ಎಂದು ನಂಬಿದಂತಹ ಕವಿ, ಪಂಡಿತರ ನಿಲುವನ್ನು ಬದಲಾಯಿಸಲು ಶುದ್ಧ ಕನ್ನಡದಲ್ಲಿ ಕಾವ್ಯ ರಚನೆ ಮಾಡಿದೆನೆಂಬುದಾಗಿ ಮೊದಲಿಗೆ ಹೇಳುತ್ತಾನೆ. ಹೀಗೆ ಹೇಳುವಾಗ ಇದನ್ನೊಂದು ಸವಾಲನ್ನಾಗಿ ಸ್ವೀಕರಿಸಿರುವುದು ವ್ಯಕ್ತವಾಗುತ್ತದೆ. ಸಂಸ್ಕೃತಕ್ಕೆ ಹೆಗಲೆಣೆಯಾಗಿ ಕನ್ನಡವೂ ನಿಲ್ಲಬಲ್ಲುದು. ಅಚ್ಚಗನ್ನಡದಲ್ಲೂ ಸಂಸ್ಕೃತಕ್ಕೆ ಸಮವಾದ ಉತ್ಕೃಷ್ಟ ಅಕ್ಷರಾಭಿವ್ಯಕ್ತಿ ಸಾಧ್ಯ ಎಂಬುದನ್ನು ತೋರಿಸುವುದು ಇವನ ಮನದಾಳದ ಅಭಿಮಾನದ ಕೆಚ್ಚು. ಇಷ್ಟಲ್ಲದೆ ಇದನ್ನೊಂದು ಪರಂಪರೆಯನ್ನಾಗಿ ಬೆಳೆಸುವ ಉದ್ದೇಶವಾಗಲೀ ದುರಭಿಮಾನವಾಗಲೀ ಇದರಲ್ಲಿ ವ್ಯಕ್ತಗೊಳ್ಳುವುದಿಲ್ಲ. ಜೊತೆಗೆ, ಈ ಮಾತುಗಳು ಸಂಸ್ಕೃತ ವಿರೋಧಿ– ಯಾಗಿಯೂ ಕಾಣಿಸುವುದಿಲ್ಲ. ಅಲ್ಲದೆ ಈ ಕವಿ ಅನೇಕ ವಿಧವಾಗಿ ಸಂಸ್ಕೃತಕ್ಕೆ ಋಣಿಯಾಗಿರುವುದು ಸಂಸ್ಕೃತದ ಬಗೆಗಿನ ಗೌರವಾದಾರಗಳಿಗೆ ಸಾಕ್ಷಿಯಾಗುತ್ತದೆ.

ಕಾವ್ಯದ ವಸ್ತುವಿನ ಮೂಲ ಯಾವ ಭಾಷೆಯೆಂಬುದನ್ನು ನಿಷ್ಕರ್ಷೆ ಮಾಡಲು ಸಾಧ್ಯವಿಲ್ಲ. ಸಂಸ್ಕೃತ ಮತ್ತು ಇತರೆ ಭಾಷಾ ಸಾಹಿತ್ಯಗಳ ಸಂದರ್ಭದಲ್ಲಿ ಬಳಕೆಯಲ್ಲಿದ್ದ ಕಥೆಯನ್ನು ಕವಿ ಬಳಸಿದ್ದಾನೆ ಎಂಬುದು ನಿರ್ವಿವಾದ ಸಂಗತಿ. ಹೀಗೆ ವಸ್ತುವನ್ನು ತನ್ನ ಕಾವ್ಯಕ್ಕೆ ಒಡ್ಡಿಕೊಳ್ಳುವಾಗ ಅನೇಕ ಮಾರ್ಪಾಡುಗಳನ್ನು ಮಾಡಿ, ಖಂಡ ಕಾವ್ಯಕ್ಕೆ ಅನೇಕ ರೀತಿಯ ಔಚಿತ್ಯವನ್ನು ಕಾಪಾಡಿದ್ದಾನೆ. ಈ ಹಿನ್ನೆಲೆಯಲ್ಲಿ ಕವಿ ಸಂಸ್ಕೃತಕ್ಕೆ ಪೂರ್ಣ ಋಣಿಯಾಗಿದ್ದಾನೆಂದು ಹೇಳಲು ಸಾಧ್ಯವಿಲ್ಲವಾದರೂ ಛಂದಸ್ಸಿನ ದೃಷ್ಟಿ ಯಿಂದಂತೂ ಬಹುಪಾಲು ಋಣಿಯಾಗಿದ್ದಾನೆ. ಅಚ್ಚಗನ್ನಡದ ಬಿಗಿವೊಂದಿದ ಕಾವ್ಯ ರಚನೆಗೆ ತೊಡಗಿದರೂ ನಿಸ್ಸಂಕೋಚವಾಗಿ ಸಂಸ್ಕೃತ ಛಂದಸ್ಸನ್ನು ತೆರೆದ ಮನಸ್ಸಿನಿಂದಲೇ ಪಾಲಿಸಿದ್ದಾನೆ. ಅವನ ಕಾಲಕ್ಕಾಗಲೇ ರಗಳೆ, ತ್ರಿಪದಿ, ಬೆದಂಡೆ, ಚತ್ತಾಣಗಳಲ್ಲಿ ಕನ್ನಡ ಕಾವ್ಯಗಳು ಮೂಡಿದ್ದರೂ ಆ ಛಂದಸ್ಸುಗಳನ್ನು ಪೂರ್ಣವಾಗಿ ಕವಿ ತೆಗೆದುಕೊಂಡಿಲ್ಲ ದಿರುವುದು ಅವನ ಉದ್ದೇಶಕ್ಕೆ ಅನುಗುಣವಾಗಿಯೇ ಇದೆ. ಕಾರಣ ಅಂದು ಪಂಡಿತ ಕಾವ್ಯ ಎಂದರೆ ಚಂಪೂ ಕೃತಿಗಳೇ ಆಗಿದ್ದವು. ಮಹಾಕವಿ ಎನಿಸಿಕೊಳ್ಳಬೇಕಾದರೆ ಚಂಪೂ ರಚನೆಯನ್ನೇ ಮಾಡಬೇಕಿದ್ದಿತು. ಇಂತಹ ಸಾಧ್ಯತೆ ಸಂಸ್ಕೃತಕ್ಕೆ ಮಾತ್ರ ಎಂಬ ಭಾವನೆಯಿಂದಿದ್ದ ಪಂಡಿತರ ಮನೋ ಇಚ್ಛೆಯನ್ನು ಸಡಿಲಿಸುವುದು ತನಿಚ್ಛೆಯಾದುದರಿಂದ ಚಂಪೂ ವಿನ್ಯಾಸದಲ್ಲಿ ಕಾವ್ಯ ರಚನೆ ಮಾಡಲು ಉದ್ಯುಕ್ತನಾದನು. ಅದುವರೆಗೂ ಪರಂಪರೆಯಾಗಿ ಬಂದ ಚಂಪೂವಿನ ರೀತಿ ರೂಪದಲ್ಲಿಯೇ, ಅಚ್ಚಗನ್ನಡದ ಭಾಷೆಗೆ ಸಂಸ್ಕೃತ ವೃತ್ತಗಳನ್ನು ಬಳಸಿಕೊಂಡು ಕಾವ್ಯ ರಚಿಸುವ ಶಕ್ತಿ ಇರುವುದನ್ನು, ಸಂಸ್ಕೃತ ಪ್ರಿಯರಾದ ಚಂಪೂ ಕವಿಗಳಿಗೆ, ಕನ್ನಡ ಸಹೃದಯರಿಗೆ ಸಪ್ರಮಾಣವಾಗಿ ತೋರಿಸುವ ಉದ್ದೇಶದಿಂದ ಕಾವ್ಯದ ಒಟ್ಟು ೨೭೨ ಪದ್ಯಗಳಲ್ಲಿ ೫೩ ಚಂಪಕಮಾಲೆ, ೨೪ ಉತ್ಪಲಮಾಲೆ, ೧ ಸ್ರಗ್ಧರಾ, ೫ ಮಹಾಸ್ರಗ್ಧರಾ, ೪ ಶಾರ್ದೂಲ ವಿಕ್ರೀಡಿತ, ೨೨ ಮತ್ತೇಭವಿಕ್ರೀಡಿತ, ೧ ಮಾಲಿನಿ– ಹೀಗೆ ೧೧೦ ಪದ್ಯಗಳಲ್ಲಿ ವೃತ್ತಗಳನ್ನು ತರುತ್ತಾನೆ. ಇದರ ನಡುವೆ ಪ್ರಾಕೃತ ಸಂಬಂಧಿಯಾದ ೧೬೦ ಸಂಖ್ಯೆಯಲ್ಲಿ ಕಂದ ಪದ್ಯಗಳು ಬಳಕೆಯಾಗಿವೆ. ಒಂದೆಡೆ ದೇಸೀ ಛಂದಸ್ಸಾದ ಉತ್ಸಾಹ ರಗಳೆಯೂ ಮಿಂಚಿದೆ ಎಂ. ಗೋವಿಂದ ಪೈಗಳ ಮತದಂತೆ ಉತ್ಪಲ, ಚಂಪಕ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆಗಳು ಸಂಸ್ಕೃತದಲ್ಲಿ ದೊರೆಯದೆ, ಕನ್ನಡದಲ್ಲಿ ಮಾತ್ರ ದೊರೆಯುವ ವೃತ್ತಗಳಾದರೂ ಇವು ಮೂಲದಲ್ಲಿ ಸಂಸ್ಕೃತದವುಗಳೆಂಬುದನ್ನು ಮರೆಯುವಂತಿಲ್ಲ. ಆದರೂ ಇವು ಕನ್ನಡದಲ್ಲಿ ಅವಿನಾಭಾವವಾಗಿ ಬೆರೆತು ಬಂದಿರುವುದರಿಂದ ಇವನ್ನು 'ಖ್ಯಾತ ಕರ್ನಾಟಕ'ಗಳೆಂದು ಕರೆಯುವುದು ಸೂಕ್ತವೇ ಆಗಿದೆ.

ಈ ಹಿನ್ನೆಲೆಯಲ್ಲಿ ಆಂಡಯ್ಯನ ಅಚ್ಚಗನ್ನಡ ಪ್ರಜ್ಞೆ ತನ್ನ ಕಾವ್ಯದ ಸಂದರ್ಭದಲ್ಲಿ ವಸ್ತು ಮತ್ತು ಛಂದಸ್ಸಿಗೆ ಸಂಬಂಧಿಸಿದ್ದಾಗಿರದೆ ಭಾಷಾ ಪದ ಪ್ರಯೋಗಕ್ಕೆ ಮಾತ್ರ ಸೀಮಿತವಾಗಿರುವುದು ವಿದಿತವಾಗುತ್ತದೆ.

ಕಾವ್ಯಾಂಗಗಳ ಸಮಗ್ರ ದೃಷ್ಟಿಯಿಂದ ಪಂಪನಲ್ಲಿ ವ್ಯಕ್ತಗೊಳ್ಳುವ ಕನ್ನಡ ಮತ್ತು ಸಂಸ್ಕೃತಗಳ ಬಗೆಗಿನ ಮಾರ್ಗ – ದೇಸಿ ಸಮನ್ವಯ ತತ್ವದಲ್ಲಿ ಕನ್ನಡದಲ್ಲಿ ಸಂಸ್ಕೃತ

ಭಾಷಾ ಬಳಕೆಯೂ ಸೇರಿದೆ. ಇದನ್ನೇ ನಯಸೇನ ತನ್ನ 'ಧರ್ಮಾಮೃತ'ದಲ್ಲಿ 'ಮಿಸುಕದ' ಅಂದರೆ ಒಗ್ಗದ ಸಂಸ್ಕೃತವನ್ನು ಕನ್ನಡಕ್ಕೆ ಬಳಸಬಾರದು ಎಂದಿರುವುದು. ಅಂದರೆ, ಪಂಪನಲ್ಲಿ ಸಂಸ್ಕೃತ ಭಾಷಾ ಬಳಕೆಗೆ ನೇರ ಸ್ವಾಗತ ಇದ್ದರೆ, ನಯಸೇನನಲ್ಲಿ ನಿರ್ಬಂಧಿತ ಸ್ವಾಗತವಿದೆ. ಆದರೆ ಆಂಡಯ್ಯನಲ್ಲಿ ಈ ಭಾಷಾ ವಿಷಯದಲ್ಲಿ ಹೆಚ್ಚು ಮಡಿವಂತಿಕೆ ಇದೆ. ಸೊಗಯಿಸಿ ಮಿಸುಕುವ ಸಕ್ಕದವನ್ನು ಕೂಡ ಕನ್ನಡದಲ್ಲಿ ಬೆರಸದೆ ಕಾವ್ಯ ರಚನೆ ಮಾಡಿ ಪ್ರತಿಜ್ಞೆಯನ್ನು ಈಡೇರಿಸಬೇಕೆಂಬುದು ಈತನ ಹಠ. ಈ ಹಠವು ಇತರರ ಪ್ರಚೋದನೆಯ ಮೇರೆಗೆ ಬಂದುದೆಂದು ಕವಿ ಹಿಂದಿನ ಎರಡು ಪದ್ಯಗಳಲ್ಲಿ ಹೇಳಿದ್ದರೂ, ವಾಸ್ತವವಾಗಿ ಅಂತರಂಗದ ಒತ್ತಡವೇ ಇಲ್ಲಿ ಕ್ರಿಯಾಶೀಲವಾಗಿರುವುದು ವೇದ್ಯಗೊಳ್ಳುತ್ತದೆ. ಸಹಜವಾಗಿ ಮಾತನಾಡಿದ ಹಾಗೆ ಸೊಗಸಾಗಿ ಕಾವ್ಯ ಹೇಳುವ ಸಾಮರ್ಥ್ಯವಿರುವುದೆಂಬ ಆತ್ಮ ನಿರೀಕ್ಷೆಯಿಂದ ಕಾವ್ಯಾರಂಭ ಮಾಡುತ್ತಾನೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಮೂಡಿರುವ 'ಕಬ್ಬಿಗರ ಕಾವ'ದ ಕವಿಯ ಭಾಷಾ ಪದ ಪ್ರಯೋಗಕ್ಕೆ ಸಂಬಂಧಿಸಿದ ಧೋರಣೆ ಈ ಕೆಳಕಂಡ ಮೂರು ನೆಲೆಗಳಲ್ಲಿ ಅಭಿವ್ಯಕ್ತಿ ಸಾಧಿಸಿದೆ.೧೫

೧. ಸಂಸ್ಕೃತವನ್ನು ಬೆರೆಸಬಾರದು.

೨. ಅದು ಮಾತನಾಡಿದಂತೆ ಸೊಗಸಾಗಿರಬೇಕು.

೩. ಅಚ್ಚಗನ್ನಡದಿಂದ ಅಂದರೆ ದೇಶ್ಯ ಶಬ್ದಗಳಿಂದ ಬಿಗುವಾಗಿರಬೇಕು.

ಇದಕ್ಕೆ ಹಿನ್ನೆಲೆಯಾಗಿ ವೈಯಾಕರಣಿಗಳಾದ ಶ್ರೀವಿಜಯ, ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಹಾಗೂ ಆಧುನಿಕರು ಮಾಡಿಕೊಂಡಿರುವ ಕನ್ನಡ ಭಾಷಾ ಶಬ್ದ ಕೋಶದ ವಿಂಗಡಣೆಯಿಂದ ಈ ಪ್ರಬೇಧಗಳು ಕಂಡುಬರುತ್ತವೆ.

೧. ಸಮ ಸಂಸ್ಕೃತ

೨. ತತ್ಸಮ

೩. ತದ್ಭವ

೪. ದೇಶ್ಯ

ಈ ವಿಂಗಡಣೆಯಲ್ಲಿ ಕವಿ ತನ್ನ ಕಾವ್ಯದಲ್ಲಿ ಸಮ ಸಂಸ್ಕೃತವೊಂದನ್ನು ಹೊರತು ಪಡಿಸಿ ಉಳಿದ ಪ್ರಬೇಧಗಳನ್ನು ಭಾಷಾ ಸಂಪತ್ತಿನಿಂದ ಸೂರೆಗೊಂಡಿದ್ದಾನೆ. ಆದ್ದರಿಂದ ಅಚ್ಚಗನ್ನಡವೆಂಬುದು ಆತನ ಮೇರೆಗೆ ಸಂಸ್ಕೃತವನ್ನು ಬೆರೆಸದೆ, ತತ್ಸಮ, ತದ್ಭವ, ದೇಶ್ಯ ಶಬ್ದಗಳ ಬಿಗುವು ಆಗುತ್ತದೆ.

'ಕಬ್ಬಿಗರ ಕಾವ'ದ ಉದ್ದಕ್ಕೂ ಬಳಕೆಯಾಗಿರುವ ಹಲವು ಪದಗಳ ಮೂಲ ಸಮಸ್ಯಾತ್ಮಕವಾಗಿದೆ. ಆದರೂ ಕವಿ ಸಂಸ್ಕೃತ ಮತ್ತು ಪ್ರಾಕೃತದಿಂದ ಪದಗಳನ್ನು ತದ್ಭವಗೊಳಿಸಿ ಬಳಸಿದ್ದಾನೆ. ಹೀಗೆ ತನ್ನ ಕಾವ್ಯಕ್ಕೆ ತದ್ಭವಗಳನ್ನು ಬಳಕೆ ಮಾಡುವಾಗ ಜನ ಸಾಮಾನ್ಯರಿಂದ ಆಡು ಮಾತಿನಲ್ಲಿ ಸಂಭವಿಸುವ ಸಹಜ ತದ್ಭವ ಹಾಗೂ

ಪಂಡಿತ ಕವಿಗಳು ಮತ್ತು ಈತನಿಂದ ಪ್ರಯತ್ನ ಪೂರ್ವಕವಾಗಿ ರೂಪಿತಗೊಂಡ ಪ್ರಾಕೃತ ತದ್ಭವಗಳು ಸೇರಿವೆ. ಜೊತೆಗೆ ಇವೆಲ್ಲಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ದೇಶ್ಯ ಶಬ್ದಗಳು ಬಳಕೆಗೊಂಡಿವೆ. ಆದ್ದರಿಂದ ತದ್ಭವಗಳ ಮೂಲಕ ಕಾವ್ಯ ಕಟ್ಟಿದ ತದ್ಭವ ಮೂರ್ತಿ ಎಂದು ಆಂಡಯ್ಯನನ್ನು ಕರೆಯಲಾಗುವುದಿಲ್ಲ. ಈ ಅಂಶವನ್ನು ಡಿ.ಕೆ. ಭೀಮಸೇನರಾಯರು ಹೀಗೆ ಸ್ಪಷ್ಟಪಡಿಸುತ್ತಾರೆ. “ಕಬ್ಬಿಗರ ಕಾವದ ಕಾಲು ಭಾಗದ ಪದ್ಯಗಳನ್ನೋದಿ ತದ್ಭವಗಳನ್ನು, ಕನ್ನಡ ದೇಶ್ಯ ಪದಗಳನ್ನು ಗುರುತಿಸಿ ಸಿದ್ಧಪಡಿಸಿದ ಪಟ್ಟಿಯ ಒಟ್ಟು[೧೪] ೬೨೮ ಶಬ್ದಗಳಲ್ಲಿ ೫೦೫ ಕನ್ನಡ ದೇಶ್ಯ ಶಬ್ದಗಳು, ೧೨೩ ಮಾತ್ರ ತದ್ಭವಗಳಿವೆ.” ಅಲ್ಲದೆ ಇದೇ ಕಾವ್ಯವನ್ನು ಅನುಲಕ್ಷಿಸಿದಾಗ ಈ ತದ್ಬವಗಳ ಸಂಖ್ಯೆ ೨೪೫-೨೬೦ ಮಾತ್ರ ಆಗಿರುವುದು ವ್ಯಕ್ತಗೊಂಡಿದೆ. ಈ ಸಂದರ್ಭದಲ್ಲಿ ಎಸ್. ಎಸ್. ಕೋತಿನ ಅವರು ಹೇಳುವಂತೆ ‘ಕಬ್ಬಿಗರ ಕಾವ’ದ ಒಟ್ಟು ಸುಮಾರು ೧೬೦೦ ಶಬ್ದ ಪ್ರಯೋಗಗಳಲ್ಲಿ ಕವಿ ಮಾಡಿಕೊಂಡ ಸಂಸ್ಕೃತ ಶಬ್ದಗಳ ಭಾಷಾಂತರ[೧೫] ಹಾಗೂ ರೂಪಾಂತರವನ್ನುಳಿದು ಸುಮಾರು ೨೬೦ ಮಾತ್ರ ತದ್ಭವಗಳಿವೆ.”

ಹೀಗೆ ವಿವಿಧ ಮೂಲಗಳಿಂದ ಶಬ್ದ ಸ್ವೀಕರಣ ಮಾಡುವ ಕವಿ ಅದನ್ನು ಕನ್ನಡಕ್ಕೆ ಒಗ್ಗುವಂತೆ ಮಾಡುವಲ್ಲಿ ಹೆಚ್ಚಿನ ಶ್ರಮವನ್ನು ವಿನಿಯೋಗಿಸುತ್ತಾನೆ. ಅನ್ಯಭಾಷೆಯ ಮಹಾಪ್ರಾಣಾಕ್ಷರಗಳ ಪದಗಳನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿದ ಅಲ್ಪಪ್ರಾಣಾಕ್ಷರಗಳ ವಿನ್ಯಾಸದಲ್ಲಿ ರೂಪಿಸಿ ಅವನ್ನು ಬಳಸುತ್ತಾನೆ. ಉದಾಹರಣೆಗೆ ಭುಜಂಗ – ಬೊಜಂಗ, ಗೋಷ್ಠಿ – ಗೊಟ್ಟಿ, ಭಾಷಣ – ಬಾಸಣ, ಶ್ರೀಖಂಡ– ಸರಿಖಂಡ , ಮುಖ – ಮೊಗ, ಧ್ವನಿ – ದನಿ ಇತ್ಯಾದಿ.

ಸ್ವಭಾವತಃ ಕನ್ನಡವಲ್ಲದ ಶ, ಷ ಕಾರಗಳನ್ನು ಇಲ್ಲಿ ‘ಸ’ ಕಾರಗಳನ್ನಾಗಿ ಕವಿ ಮಾರ್ಪಡಿಸಿದ್ದಾನೆ. ಉದಾಹರಣೆಗೆ ಅಶೋಕ – ಅಸುಗ, ಕಲಶ– ಕಳಸ, ಶ್ರೀ – ಸಿರಿ, ಗಣೇಶ–ಗಣೇಸ, ಶಶಿ– ಸಸಿ ಇತ್ಯಾದಿ. ಇವು ‘ಶ’ ಕಾರಕ್ಕೆ ನಿದರ್ಶನಗಳಾದರೆ ‘ಷ’ ಕಾರಕ್ಕೆ ಘೋಷ – ಗೋಸ, ದೋಷ–ದೋಸ, ಸಂತೋಷ– ಸಂತಸ, ಹರ್ಷ–ಹರುಸ, ಭಾಷಣ– ಬಾಸಣ ಇತ್ಯಾದಿ.

ಸಂಸ್ಕೃತದ ವಿಜಾತೀಯ ಸಂಯುಕ್ತಾಕ್ಷರ ಪದಗಳು ದೇಸೀ ಜಿಹ್ವೆಗೆ ಒಗ್ಗುವಂತೆ ಕವಿ ಹೀಗೆ ಮಾರ್ಪಡಿಸಿದ್ದಾನೆ–ಇಂದ್ರ–ಇಂದಿರ, ಶ್ರೀಖಂಡ– ಸಿರಿಕಂಡ, ಖಡ್ಗ– ಕಡುಗ, ಪ್ರಾಣಂ–ಹರಣಂ ಇತ್ಯಾದಿ.

ಆಂಡಯ್ಯನ ತದ್ಭವಗಳಲ್ಲಿ ಸಮರೂಪಧಾರಣೆಯು ಸೌಲಭ್ಯಾಕಾಂಕ್ಷೆಯ ಇನ್ನೊಂದು ಫಲ. ಇದಕ್ಕೆ ಉದಾಹರಣೆಗಳಾಗಿ– ಅಕ್ಷರ–ಅಕ್ಕರ, ದರ್ಪ–ದಪ್ಪ, ಬ್ರಹ್ಮ–ಬೊಮ್ಮ, ಕರ್ಪೂರ–ಕಪ್ಪುರ, ಚಕ್ರವಾಕ–ಚಕ್ಕವಕ್ಕಿ, ಮೂರ್ಛೆ–ಮುಚ್ಚೆ ಇತ್ಯಾದಿ.

ಹೀಗೆ ತದ್ಭವ ಕೃಷಿಯ ಮೂಲಕ ಆಂಡಯ್ಯ ಕನ್ನಡ ಶಬ್ದ ಭಂಡಾರವನ್ನು ಬೆಳೆಸಿದ್ದಾನೆ. ಈ ವಿಧಾನದಲ್ಲಿ ಸಂಸ್ಕೃತಕ್ಕಿಂತ ಪ್ರಾಕೃತದಿಂದಲೇ ಸ್ವೀಕರಣ ಹೆಚ್ಚಿದೆ.

ಅಲ್ಲದೆ ವಿವರಣಾತ್ಮಕ ಸ್ವೀಕರಣ ಮಾದರಿಯಲ್ಲೂ ಕನ್ನಡ ಭಾಷೆಯನ್ನು ಬೆಳೆಸಿದ್ದಾನೆ. ಅದಕ್ಕೆ ಉತ್ತಮ ನಿದರ್ಶನಕ್ಕಾಗಿ ಈ ಕೆಲವನ್ನು ನೋಡಬಹುದು–

ಬಾನೆಡೆಯೊಳ್ ಸುಳಿದಾಡುವರ್ –
ದೇವತೆಗಳು
ಕಡಲೊಳೆ ಪಟ್ಟಂ –
ವಿಷ್ಣು
ಇಂದಿರನ ಪೊಟಿಲ್ –
ಅಮರಾವತಿ
ಆನೆಮ್ಮೈಯಾತ –
ಗಜಾಸುರ
ಮೈಯ್ಗಣ್ಣ– ಇಂದ್ರ
ಪಲವಂ ನಾಲಗೆಯುಳ್ಳವಂ – ಆದಿಶೇಷ
ಇಚ್ಛೆಗಾರ್ತಿ – ರತಿ
ಉರಿಗಣ್ಣ, ಮಾದೇವಿಯ ಬಗೆಯೊಡೆಯ – ಶಿವ
ಕೆಂಗಣ್ಣಕ್ಕಿ – ಕೋಗಿಲೆ
ತೇರನೆಸಗುವನ್ – ಸಾರಥಿ
ನುಡಿವೆಣ್ – ಸರಸ್ವತಿ
ಸಿರಿಯರಸ – ಲಕ್ಷ್ಮೀಪತಿ

ಹೀಗೆ ಅಚ್ಚಗನ್ನಡದ ವೀರ ದೀಕ್ಷೆ ತೊಟ್ಟ ಆಂಡಯ್ಯನ ಸಂಸ್ಕೃತದ ಬಗೆಗಿನ ಕನ್ನಡಿಗರ ವ್ಯಾಮೋಹ ಮತ್ತು ಕನ್ನಡದ ಬಗೆಗಿನ ಜನರ ಕೀಳರಿಮೆಯನ್ನು ಅಂದು ಕುಗ್ಗಿಸಿದನೆಂದೇ ಹೇಳಬೇಕು. ಈ ಮಾದರಿಯ ಸಾಹಿತ್ಯ ಕೃಷಿ ಆ ಸಂದರ್ಭದಲ್ಲಿ ಯಾವುದೇ ಭಾರತೀಯ ಭಾಷಾ ಸಾಹಿತ್ಯದಲ್ಲಿ ಸಂಭವಿಸಿಲ್ಲ. ಆದರೆ ಕನ್ನಡದ ಸಂದರ್ಭದಲ್ಲಿ ಇವನ ಕಾಲಕ್ಕಾಗಲೇ ಕನ್ನಡದ ಮೇಲಿದ್ದ ಸಂಸ್ಕೃತದ ಪ್ರಭಾವ ಕಡಿಮೆಯಾಗತೊಡಗಿತ್ತು. ಮಂದಕ್ಕೆ ಅದರ ಪ್ರಭಾವ ಇನ್ನೂ ಕಡಿಮೆಯಾಗಿ ದೇಸೀ ಒಲವಿನ ಕಾವ್ಯಗಳ ಸುಗ್ಗಿ ವಚನ ಸಾಹಿತ್ಯದ ಕಾಲಕ್ಕಾಗಲೇ ಕಾಣಿಸಿಕೊಂಡು, ಮುಂದೆ ವಿಶೇಷವಾಗಿ ಬೆಳೆಯಿತು. ಆಂಡಯ್ಯ ಸಂಸ್ಕೃತ – ಕನ್ನಡ ಸಂಬಂಧದ ವಿಶಿಷ್ಟ ಸಂದರ್ಭದಲ್ಲಿ ಹುಟ್ಟಿ, ಈ ಬಗೆಯ ಕಾವ್ಯ ಬರೆದು, ಮೈಲಿಗಲ್ಲಾಗಿ ನಿಲ್ಲುತ್ತಾನೆ. ಈತನದು ಮಹಾ ಕಾವ್ಯ ಎನಿಸದಿದ್ದರೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮತ್ತು ಪ್ರಸ್ತುತ ಕನ್ನಡ ಚಳುವಳಿಯ ಕಾವಿನ ಸಂದರ್ಭದಲ್ಲಿ ಮರೆಯಲಾಗದ ಅಭೂತಪೂರ್ವ ಕೃತಿಯಾಗುತ್ತದೆ. ಈತ ಪರಂಪರೆಯಾಗಲಿಲ್ಲ; ಒಂಟಿ ಸಲಗವಾಗುತ್ತಾನೆ. ಕ್ರಿ.ಶ. ೨೦ನೆಯ ಶತಮಾನದ ಸಂದರ್ಭದ ಆದಿಭಾಗದಲ್ಲಿ ಇವನನ್ನು ಅನುಸರಿಸಿ ಮುಳಿಯ ತಿಮ್ಮಪ್ಪಯ್ಯ ಮತ್ತು ಕೊಳಂಬೆ ಪುಟ್ಟಣ್ಣಗೌಡರು ಕ್ರಮವಾಗಿ “ಸೊಬಗಿನ ಬಳ್ಳಿ” ಮತ್ತು ‘ಕಾಲೂರ ಚೆಲುವೆ’ ಕಾವ್ಯ ಕೃತಿಗಳನ್ನು ಬರೆದರೂ, ಕನ್ನಡದಾಗಸದಲ್ಲಿ ಪ್ರಜ್ವಲಿಸುತ್ತಿರುವ ಅಸಂಖ್ಯ ಕಾವ್ಯ ತಾರೆಗಳ ಮಧ್ಯೆ ಇವು ಮಸುಕಾಗಿಯೇ ಉಳಿದವು. ಹೀಗೆ ಪ್ರಾಚೀನ ಸಂದರ್ಭದ ಕವಿಯೊಬ್ಬ ಆಧುನಿಕರನ್ನು ಇಷ್ಟರಮಟ್ಟಿಗೆ ಪ್ರಭಾವಿಸಿದ್ದಾನೆ ಎಂಬುದೇ ಇಲ್ಲಿ ಮುಖ್ಯ ಸಂಗತಿಯಾಗಿ ನಿಲ್ಲುತ್ತದೆ.

ಅಂತಿಮವಾಗಿ; ಆಂಡಯ್ಯನ ಕಾಲ ಕ್ರಿ.ಶ. ೧೩ನೆಯ ಶತಮಾನ; ಸಂಸ್ಕೃತದಿಂದಲ್ಲದೇ ಅನ್ಯ ಭಾಷಾ ಮಾಧ್ಯಮಗಳಿಂದ ಸಮರ್ಥ ಅಕ್ಷರಾಭಿವ್ಯಕ್ತಿ ಅಸಾಧ್ಯ ಎಂದು ನಂಬಿದ್ದ ಕಾಲ. ಅಂತಹ ಸಂದರ್ಭದಲ್ಲಿ ಕನ್ನಡದ ಆಶಾಕಿರಣವಾಗಿ ಮೂಡಿ ಬಂದವನು ಆಂಡಯ್ಯ. ಕನ್ನಡದಲ್ಲೂ ಸಂಸ್ಕೃತ ಮಾದರಿಯ ಅಭಿವ್ಯಕ್ತಿ ಸಾಧ್ಯ ಎಂದು ತೋರಿಸಿ ನಿರ್ದೇಶಿಸಿದವನು. ಹೀಗಿರುವಾಗ, ಸಮಕಾಲೀನ ದಿನಗಳಲ್ಲಿ ಅನ್ಯಭಾಷಾ ಕೃತಿಗಳ ಕನ್ನಡೀಕರಣ ಕಷ್ಟ ಸಾಧ್ಯವೆಂದು ಹುಯಿಲೆದ್ದಿರುವ ಶಿಕ್ಷಣ ಕ್ಷೇತ್ರದಲ್ಲಿ ಮುಖ್ಯವಾಗಿ ವೈದ್ಯಕೀಯ ಮತ್ತು ತಾಂತ್ರಿಕ ಕ್ಷೇತ್ರಗಳ ತಜ್ಞರಿಗೆ ಆಂಡಯ್ಯ ತಲೆಯ ಮೇಲೆ ಮೊಟಕುವವನಾಗಿದ್ದಾನೆ. ಕನ್ನಡ ಭಾಷೆ ವಿಪುಲವಾಗಿ ಬೆಳೆದು ನಿಂತಿರುವ ಈ ಇಪ್ಪತ್ತರ ಶತಕದಲ್ಲಿ ಯಾವುದೇ ವಿಷಯವನ್ನು ಸಮರ್ಥವಾಗಿ ಕನ್ನಡದಲ್ಲಿ ಹೇಳಲು ಅಸಾಧ್ಯ ಎಂದರೆ ಅವರಿಗೆ ಕನ್ನಡ ಭಾಷಾ ಸಮೃದ್ಧಿಯ ಅರಿವು ಇಲ್ಲವೆಂದೇ ಹೇಳಬೇಕಾಗುತ್ತದೆ. ಅಂತಹ ಮಹಾನುಭಾವರು ೮೦೦ ವರ್ಷಗಳ ಹಿಂದೆಯೂ ಇದ್ದರು! ಆದ್ದರಿಂದಲೇ ಅಂದು ಹುಟ್ಟಿದ ಆಂಡಯ್ಯನ ಮುಂದೆ ಅವರು ತಲೆ ತಗ್ಗಿಸುವಂತಾಯಿತು. ಈ ಹಿನ್ನೆಲೆಯಲ್ಲಿ ಆಂಡಯ್ಯನು ಕನ್ನಡದ ಸಂದರ್ಭದಲ್ಲಿ ಅಂದಿಗೂ ಇಂದಿಗೂ ನಾಡು-ನುಡಿಯ ವಿಷಯವಾಗಿ ಒಂದು ಉತ್ತಮ ನೀತಿ ಪಾಠವಾಗಿ ಉಳಿಯುತ್ತಾನೆ.

ಇದುವರೆಗೂ ಕನ್ನಡ ನಾಡು-ನುಡಿಗಳ ವಿಷಯವಾಗಿ ವಿಶೇಷ ಚಿಂತನೆ ನಡೆಸಿದ ಕವಿಗಳಲ್ಲಿ ಪ್ರಾತಿನಿಧಿಕವಾಗಿ ಪಂಪ, ನಯಸೇನ ಮತ್ತು ಆಂಡಯ್ಯನನ್ನು ಚರ್ಚಿಸಲಾಯಿತು. ಇದರ ಚರ್ಚೆಯಿಂದ ಪ್ರಾಚೀನ ಕನ್ನಡ ಸಾಹಿತ್ಯ ಸಂದರ್ಭದ ನಾಡು-ನುಡಿಗಳ ಚಿಂತನ ಸ್ವರೂಪ ವ್ಯಕ್ತವಾಯಿತು. ಈ ಚರ್ಚೆಗೆ ಪೂರಕವಾಗಿ ಇನ್ನೆರಡು ಮಾತುಗಳನ್ನು ಸೇರಿಸಿ ಈ ಅಧ್ಯಾಯಕ್ಕೆ ಅಂತ್ಯವನ್ನು ಹಾಡಬಹುದು.

* * *

ಪ್ರಾಚೀನ ಕನ್ನಡ ಸಾಹಿತ್ಯದ ಕಾಲ ಕ್ರಿ.ಶ. ೧೦ನೆಯ ಶತಮಾನ. ಅದು ಕನ್ನಡದ ಸಂದರ್ಭದಲ್ಲಿ ಜೈನ ಕಾವ್ಯ ಮತ್ತು ಧರ್ಮಗಳ ಉಚ್ಛ್ರಾಯ ಕಾಲ. ಈ ಕಾಲದಲ್ಲಿ ಜೈನ ಕವಿಗಳು ವಿಶೇಷವಾಗಿ ಕಾವ್ಯ ರಚನೆ ಮಾಡಿ, ಕನ್ನಡ ಕಾವ್ಯ ಮತ್ತು ಜೈನ ಧರ್ಮಗಳೆಂಬುದು ಅಭಿನ್ನ ಎಂಬ ಭಾವನೆ ಮೂಡಿಸಿದ್ದರು. ಈ ಕಾಲಘಟ್ಟದಲ್ಲಿ ಜೈನ ಧರ್ಮದ ಮುಂದೆ ವೈದಿಕ ಧರ್ಮವು ಕರ್ನಾಟಕದಲ್ಲಿ ಕ್ಷೀಣವಾಗಿತ್ತು. ಆದ್ದರಿಂದ ವೈದಿಕ ಕವಿಗಳಿಗೆ ಈ ಸಂಕಷ್ಟದ ದಿನಗಳಲ್ಲಿ ತಮ್ಮನ್ನು ತಾವು ಗುರ್ತಿಸಿಕೊಳ್ಳಬೇಕಾದ್ದು ಅತ್ಯಂತ ಜರೂರಾಗಿತ್ತು. ಆದ್ದರಿಂದ ತಮಗೆ ಪರಂಪರಾಗತವಾಗಿ ಬಂದಿದ್ದ ಸಂಸ್ಕೃತದ ಮೊರೆ ಹೋಗಿ, ಏಕಕಾಲಕ್ಕೆ ಕನ್ನಡ- ಜೈನಕ್ಕೆ ಪ್ರತಿಯಾಗಿ ನಿಂತರು. ಈ ಹಿನ್ನೆಲೆಯಲ್ಲಿ ಕನ್ನಡದ ನಾರಾಯಣಭಟ್ಟನು ತೆಲುಗಿನ ಆದಿಕವಿಯಾದ ನನ್ನಯಭಟ್ಟನಿಗೆ ವೈದಿಕ ಕಾವ್ಯ ಬರೆಯಲು ಪ್ರಚೋದಿಸಿದ್ದು ಇಲ್ಲಿ ಸ್ಮರಣೀಯ. ಈ ಸಂಗತಿಯನ್ನು ನನ್ನಯ ತನ್ನ ಕಾವ್ಯದಲ್ಲಿ ಸೂಚ್ಯವಾಗಿ ಧ್ವನಿಸಿದ್ದಾನೆ. ನಾರಾಯಣಭಟ್ಟರ ನೆರವಿಲ್ಲದೆ ನನ್ನಿಂದ ಭಾರತ ರಚನೆ ಸಾಧ್ಯವಾಗುತ್ತಿರಲಿಲ್ಲ ಎಂದು ನನ್ನಯ ಹೇಳುವ ಮಾತಿನಲ್ಲಿ

ನಾರಾಯಣಭಟ್ಟುವಿನ ಧಾರ್ಮಿಕ ಧೋರಣೆ ವ್ಯಕ್ತಗೊಳ್ಳುತ್ತದೆ. ನಾರಾಯಣ ಭಟ್ಟ ಇಂದಿನ ಆಂಧ್ರದ ವೇಮುಲವಾಡದ ಕನ್ನಡಿಗನಾದ್ದರಿಂದ 'ಕನ್ನಡ-ಜೈನ' ಅಬೇಧ ಎಂದು ಎಣಿಸಿದ್ದ. ಆತ ಜೈನ ಅಥವಾ ಕನ್ನಡ ಕಾವ್ಯ ಬರೆಯಲು ಪ್ರಚೋದನೆ ನೀಡಬಹುದಿತ್ತು. ಆದರೆ ಭಾಷೆಗಿಂತಲೂ ಧರ್ಮದ ಬಗೆಗಿನ ಕಳಕಳಿ ಅಂದು ಸಹಜವಾಗಿ ಎಲ್ಲರಲ್ಲೂ ಇದ್ದುದರಿಂದ, ಜನಸಾಮಾನ್ಯರ ವಕ್ತಾರನಾದ ನಾರಾಯಣ ಭಟ್ಟನಲ್ಲೂ ಅಂತಹ ಧೋರಣೆ ಸಹಜವಾಗಿ ಕಂಡು ಬಂದು, ನನ್ನಯ ಭಟ್ಟನಿಂದ ತೆಲುಗು- ವೈದಿಕ ಕಾವ್ಯವನ್ನು ಬರೆಸುತ್ತಾನೆ. ಈ ಮೂಲಕ ಕನ್ನಡ- ಜೈನಕ್ಕೆ ಪ್ರತಿಯಾಗಿ ನಾರಾಯಣ ಭಟ್ಟ - ನನ್ನಯ ನಿಂತು, 'ಸಂಸ್ಕೃತ - ವೈದಿಕ' ಧರ್ಮವನ್ನು ಅಂಕುರಿಸುತ್ತಿರುವ ತೆಲುಗು ಭಾಷಾ ಭೂಮಿಕೆಯಲ್ಲಾದರೂ ಅರಳಿಸಿ, ತಮ್ಮ ನೆಲೆಯನ್ನು ಕಾಯ್ದುಕೊಳ್ಳಲು ಹವಣಿಸುತ್ತಾರೆ. ಇದು ಕರ್ಣಾಟಕದ ಸಂದರ್ಭದಲ್ಲಿ ಜೈನ ಧರ್ಮದ ಅವನತಿಯ ಕಾಲವಾಗಿ ಕೂಡ ಕಂಡು ಬರುತ್ತದೆ.

ಇಲ್ಲಿ ನಾರಾಯಣ ಭಟ್ಟನಿಗೆ ಕನ್ನಡ ಭಾಷೆಗಿಂತ ವೈದಿಕ ಧರ್ಮವೇ ಮಿಗಿಲಾಗುತ್ತದೆ. ಅಲ್ಲಿ ನನ್ನಯನದು ತೆಲುಗಿನ ಅಭಿಮಾನವಲ್ಲ. ಅದು ಬಹುಮುಖ್ಯವಾಗಿ ತನ್ನ ಧರ್ಮದ ಬಗೆಗಿನ ಅಭಿಮಾನ. ಆದ್ದರಿಂದಲೇ ಸುಲಭ ತೆಲುಗಿನಲ್ಲಿ ಕಾವ್ಯ ರಚಿಸದೆ ವೈದಿಕ ಪರವಾದ ಸಂಸ್ಕೃತ ಭೂಯಿಷ್ಟ ಭಾಷೆಯಲ್ಲಿ ಕಾವ್ಯ ಬರೆಯುವುದು.

ಹೀಗೆ ಪ್ರಾಚೀನ ಕಾಲದ ಕನ್ನಡ-ಸಂಸ್ಕೃತಗಳ ಸಾಹಿತ್ಯ ಸಂಬಂಧ ಕೇವಲ ಸಾಹಿತ್ಯಕ ಸಂಬಂಧವಾಗಿರದೆ ಧಾರ್ಮಿಕ ಸಂಬಂಧವೂ ಆಗಿರುವುದು ವಿದಿತಗೊಳ್ಳುತ್ತದೆ. ಇದೇ ಘಟ್ಟದಲ್ಲಿ ಧರ್ಮಗಳ ಮೇಲಾಟ ನಡೆದದ್ದರಿಂದ ಪಂಪನ ಅನಂತರ ಬಂದ ನಯಸೇನನಂತಹ ಕವಿಗಳು ಭಾಷೆಯ ವಿಷಯದಲ್ಲಿ ಪಂಪನಿಗಿಂತಲೂ ಹೆಚ್ಚು ಲಿಬರಲ್ ಆಗಿ ಕನ್ನಡ-ಜೈನವನ್ನು ಉಳಿಸಿ ಬೆಳೆಸಬೇಕಾದ ಪ್ರಯತ್ನ ಮಾಡಿದರು. ಆಂಡಯ್ಯನಂತೂ ಧರ್ಮವನ್ನು ಪಕ್ಕಕ್ಕಿಟ್ಟು ಕನ್ನಡವನ್ನು ಉದ್ಧರಿಸಬೇಕಾದ ಸನ್ನಿವೇಶವಾಗಲೇ ನಿರ್ಮಾಣವಾಗಿತ್ತು.

ಹೀಗೆ ಕ್ರಿ.ಶ. ೧೦ರಿಂದ ೧೨ನೆಯ ಶತಮಾನದ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ಜೈನ ಧರ್ಮವು ಅವನತಿ ಹೊಂದುತ್ತಾ ಬಂದಿತ್ತು. ಇದರೊಂದಿಗೆ ಜೈನ - ಕನ್ನಡ ಅಬೇಧ ಎಂದು ಭಾವಿಸಿದ್ದ ಜೈನ ಧರ್ಮದೊಂದಿಗೆ ಕನ್ನಡ ಸಾಹಿತ್ಯವೂ ಇಳಿಮುಖವಾಗಿ ಸಾಗಿತ್ತು. ಆಂಡಯ್ಯನ ಕಾಲಕ್ಕೆ ಈ ಚಿತ್ರ ಸ್ಪಷ್ಟವಾಗಿ ಕಾಣುತ್ತದೆ. ಹೀಗೆ ಕ್ರಿ.ಶ. ೧೨ನೆಯ ಶತಮಾನದ ಸುಮಾರಿಗೆ ಅನಾಥವಾಗುವ ಸ್ಥಿತಿಯನ್ನು ತಲುಪಿದ್ದ ಕನ್ನಡವನ್ನು ವೀರಶೈವರು ಕೈ ಹಿಡಿದರು. ಆಶ್ರಯದಾತರಾಗಿ ಬಂದ ವೀರಶೈವರು ಕನ್ನಡವನ್ನು ಸಾಹಿತ್ಯದ ಪ್ರಜ್ಞೆಯಿಲ್ಲದೆ ಹತ್ತು ದಿಕ್ಕಿಗೆ ಬೆಳೆಸುವ ನಿಟ್ಟಿನಲ್ಲಿ ನೂರಾರು ಹೊಸ ಸಂವೇದನೆಗಳನ್ನು ಕನ್ನಡ ಕಾವ್ಯಕ್ಕೆ ತಂದು 'ಕನ್ನಡ' ವನ್ನು ಮತ್ತೆ ಶ್ರೀಮಂತವನ್ನಾಗಿ ಮಾಡಿ ಜಗತ್ತಿನ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಕ್ಷಿತಿಜವನ್ನು ತೆರೆದರು.

ಹೀಗೆ ಮಾರ್ಗ ಮತ್ತು ದೇಸಿಗಳನ್ನು ಸಮನ್ವಯಗೊಳಿಸಿ ಗಾಂಭೀರ್ಯದಿಂದ ಕಾವ್ಯ ನಿರ್ವಹಿಸಿರುವ ಪಂಪ ಕವಿಯು ನಾಡು ಮತ್ತು ನುಡಿಗಳನ್ನು ಕುರಿತ ಚರ್ಚೆಯಲ್ಲಿ ಅತ್ಯಂತ ಮುಖ್ಯನೆನಿಸಿದ್ದಾನೆ. ಇವನ ಅನಂತರದಲ್ಲಿ ಅಧ್ಯಯನಕ್ಕೆ ಒಳಪಟ್ಟ ನಯಸೇನನಲ್ಲಿ ಪ್ರಧಾನವಾಗಿ ದೇಸೀಪರ ನಿಲುವು ವ್ಯಕ್ತಗೊಂಡಿದೆ. ಆದರೆ ಇವನ ಅನಂತರದಲ್ಲಿ ಕಾಣಿಸಿಕೊಳ್ಳುವ ಆಂಡಯ್ಯ ಇವರಿಬ್ಬರಿಗಿಂತ ಮುಂದೆ ಹೋಗಿ ಭಾಷಾ ಶೈಲಿಯ ದೃಷ್ಟಿಯಿಂದ ಕ್ರಾಂತಿಯನ್ನೇ ಸಾಧಿಸಿದ್ದಾನೆ. ಆದರೆ ಅದು ಪರಂಪರೆಯಾಗಿ ಮುಂದುವರೆಯದೆ ಸ್ಥಗಿತಗೊಳ್ಳುತ್ತದೆ. ಅನಂತರದಲ್ಲಿ ಬಂದ ಕವಿಗಳು ಪಂಪನನ್ನು ವಿಶೇಷವಾಗಿ ಸ್ಮರಿಸಿ, ನಯಸೇನನ ಶೈಲಿಯಲ್ಲಿ ಒಲವಿಟ್ಟು ಕಾವ್ಯ ಸೃಜಿಸಿರುವುದು ಮುಂದಿನ ಅಧ್ಯಾಯದಿಂದ ವೇದ್ಯವಾಗುತ್ತದೆ.

ಅಡಿಟಿಪ್ಪಣಿಗಳು

೧. ಆರ್.ವಿ. ಕುಲಕರ್ಣಿ (ಸಂ.), (ಗ) ಕಬ್ಬಿಗರ ಕಾವಂ, ಪು. ೧೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೭೬.

೨. ಈ ಮಾತನ್ನು ಎಸ್.ಎಸ್. ಕೋತಿನ ಅವರೂ ಚರ್ಚಿಸಿದ್ದಾರೆ. ಕೃತಿ: ಆಂಡಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೩. ಆರ್.ವಿ. ಕುಲಕರ್ಣಿ (ಸಂ.), (ಗ) ಕಬ್ಬಿಗರ ಕಾವಂ, ಪು. ೧೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬.

೪. ಕೆ.ಎಸ್. ನರಸಿಂಹಸ್ವಾಮಿ (ಸಂ.), ನವಪಲ್ಲವ, ಪು. ೨೫, ಲಿಪಿ ಪ್ರಕಾಶನ, ಬೆಂಗಳೂರು, ೧೯೮೩.

೫. ಆರ್.ವಿ. ಕುಲಕರ್ಣಿ (ಸಂ.), (ಗ) ಕಬ್ಬಿಗರ ಕಾವಂ, ಪು. ೧೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬.

೬. ಅದೇ, ಪು. ೧೩.

೭. ಅದೇ, ಪು. ೧೧.

೮. ಅದೇ, ಪು. ೫೨.

೯. ಅದೇ, ಪು. ೮೮.

೧೦. ಅದೇ, ಪು. ೧೦.

೧೧. ಎಸ್.ಎಸ್. ಕೋತಿನ (ಸಂ.), ಆಂಡಯ್ಯ, ಪು. ೩೦೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೧೨. ಈ ಭಾಗದ ಕೆಲವು ವಿವರಗಳಿಗೆ ಮೇಲ್ಕಂಡ ಕೃತಿಗೆ ಋಣಿಯಾಗಿದ್ದೇನೆ.

೧೩. ಅದೇ.

೧೪. ಅದೇ.

೧೫. ಅದೇ.

*

ವಚನಕಾರರು ಮತ್ತು ನಾಡು-ನುಡಿ ಪ್ರಜ್ಞೆ

ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ನಾಂದಿ ಹಾಡಿದವರು ವಚನಕಾರರು. ಅದುವರೆಗೂ ಮಾರ್ಗ-ದೇಸಿಗಳ ಸಮನ್ವಯ ರೂಪದಲ್ಲಿ ಪ್ರವಹಿಸುತ್ತಿದ್ದ ರಾಜಾಶ್ರಯ ಪ್ರೇರಿತ ಕನ್ನಡ ಸಾಹಿತ್ಯವನ್ನು ತೀವ್ರವಾಗಿ ಕನ್ನಡಪರವಾಗಿಸಿ ಜನಮುಖಿಗೊಳಿಸಿದರು. ಸಾಹಿತ್ಯದ ಪರಿವೆ ಇಲ್ಲದೆ ಸಾಹಿತ್ಯಕೃಷಿ ಮಾಡಿದರು. ಇಂತಹ ಸಾಹಿತ್ಯದಲ್ಲಿ ಹಿಂದಿನ ದೀರ್ಘ ಕತೆಗಳಾಗಲೀ, ಅಷ್ಟಾದಶ ವರ್ಣನೆಗಳಾಗಲೀ ಇಲ್ಲ. ಅವು ಒಂದು ಕ್ಷಣದ ಅನಿಸಿಕೆಯನ್ನು ಸೆರೆ ಹಿಡಿಯುವ ಸಂಕ್ಷಿಪ್ತವೂ ಸ್ವಯಂಪೂರ್ಣವೂ ಆದ ಮುಕ್ತಕಗಳು. ಇವು ಸಂದರ್ಭಕ್ಕನುಸಾರವಾದ ರಚನೆಗಳಾಗಿವೆ. ತೀವ್ರ ಸಾಮಾಜಿಕ ಪ್ರಜ್ಞೆಯನ್ನೊಳಗೊಂಡ ಇವು ಅದುವರೆಗಿನ ಸ್ಥಗಿತ ಸಾಮಾಜಿಕ ಕಟ್ಟಳೆಗಳಿಂದ ಹೊರಬಂದಿವೆ. ಮತ ಸಂಪ್ರದಾಯ, ಕವಿ ಸಮಯ, ರಾಜತ್ವಪರ ನಿಲುವು, ಸಂಸ್ಕೃತಭೂಯಿಷ್ಠತೆ -ಇವು ಅಂತಹ ಸಂಕೋಲೆಗಳು. ಇವುಗಳಿಂದ ಬಿಡುಗಡೆ ಪಡೆದ ವಚನಗಳು ಹಲವು ಉಪ ಸಂಸ್ಕೃತಿಗಳನ್ನು ನಿರಾಕರಿಸಿ, ಭವಿ ಮತ್ತು ಭಕ್ತ ಎಂಬ ವಿಂಗಡಣೆಯಲ್ಲಿ ಶಿವ ಸಂಸ್ಕೃತಿಯಾಗಿ ರೂಪುಗೊಂಡಿತು. ಹೀಗೆ ಚಲನಶೀಲತೆಯನ್ನು ಪಡೆದು ಶಿವ ಸಂಸ್ಕೃತಿಯ ನೆಲೆಯಲ್ಲಿ ರೂಪುಗೊಂಡ ವಚನ ಸಂಕುಲವು ಸಾಮಾಜಿಕ ಆಂದೋಲನಕ್ಕೆ ಪ್ರಚೋದನೆ ನೀಡಿತು. ಇದರಿಂದ ಪಡೆದ ಸಾಫಲ್ಯ- ವೈಫಲ್ಯಗಳೇನೇ ಇದ್ದರೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡವನ್ನು ಅದರ ಎಲ್ಲಾ ಆಯಾಮಗಳಲ್ಲೂ ಬಳಸಿ, ಅದಕ್ಕೆ ಸಾಹಿತ್ಯದಲ್ಲಿ ಉನ್ನತ ಪೀಠವೊಂದನ್ನು ಕಲ್ಪಿಸಿಕೊಟ್ಟದ್ದು ಮುಖ್ಯ ಸಂಗತಿ. ಇದು ಜಾಗತಿಕ ಸಾಹಿತ್ಯಕ್ಕೆ ವಚನಕಾರರು ನೀಡಿದ ಅಪೂರ್ವ ಎನಿಸಿದ ವಿಶಿಷ್ಟ ಕೊಡುಗೆ.

ವಚನಗಳು ರಚನೆಯಾದುದು ಕನ್ನಡ ಪರಂಪರೆಯ ಒಂದು ಸಂಧಿಕಾಲದಲ್ಲಿ. ಪ್ರಭುತ್ವ, ಸಂಸ್ಕೃತ ಮತ್ತು ಪುರೋಹಿತಶಾಹಿಗಳ ಅಸ್ತಿತ್ವ ಈ ಕಾಲದಲ್ಲಿ ಅಲುಗಾಟಕ್ಕೆ ಈಡಾಗಿತ್ತು. ಇಂತಹ ಸಂಕ್ರಮಣಾವಸ್ಥೆಯಲ್ಲಿ ರಚನೆಯಾದ ವಚನಗಳ ಬಗೆಗೆ ಮಾತನಾಡುವಾಗ ಯಾವುದೇ ಭಾಷೆ ಮತ್ತು ಧರ್ಮಗಳ ನಡುವಣ ಸಂಬಂಧ ಹಾಗೂ ಸಮಸ್ಯೆಗಳನ್ನು ಎದುರಾಗುವುದು ಅನಿವಾರ್ಯ. ಈ ಚರ್ಚೆ ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಬಂದಿದೆ. ಆದರೂ ಇಲ್ಲಿ ಪೂರಕವಾಗಿ ಒಂದೆರಡು ಅಂಶಗಳನ್ನಷ್ಟೆ ಉಲ್ಲೇಖಿಸಲಾಗುವುದು.

ವಚನಗಳು ಕಾಣಿಸಿಕೊಂಡ ಕಾಲಕ್ಕೆ ಬ್ರಾಹ್ಮಣ ವರ್ಗ ದೂರೀಕರಿಸಿದ್ದ ಭಾಷೆ ಕನ್ನಡವಾಗಿತ್ತು. ಜೈನರು ಕನ್ನಡ ಭಾಷೆಯನ್ನು ತಮ್ಮೆಲ್ಲ ಚಿಂತನೆ, ಕಾವ್ಯಸೃಷ್ಟಿಯನ್ನು

ಅಭಿವ್ಯಕ್ತಿಗೆ ತಂದುಕೊಳ್ಳುವ ಪ್ರಯತ್ನವನ್ನು ನಡೆಸಿದರು. ಇದರಿಂದ ವೈದಿಕ ನೆಲೆಯ ಸಂಸ್ಕೃತಕ್ಕೆ ಪ್ರತಿಕ್ರಿಯೆಯನ್ನು ತೋರಿದ ನೆಲೆ ತುಂಬ ಮಹತ್ವದ್ದಾಯಿತು. ಈ ಕಾರಣದಿಂದಲೇ ಕನ್ನಡದ ನಾರಾಯಣಭಟ್ಟ, ತೆಲುಗಿನ ನನ್ನಯಭಟ್ಟನಿಗೆ ವೈದಿಕ ಕಾವ್ಯ (ತೆಲುಗು ಕಾವ್ಯ)ವನ್ನು ಬರೆಯಲು ಪ್ರಚೋದಿಸುವ ಮೂಲಕ ತನ್ನ ವೆಂಗಿನಾಡಿನಲ್ಲಿ ಜೈನಧರ್ಮದ ಪ್ರಭಾವವನ್ನು ತಗ್ಗಿಸಲು ಪ್ರಯತ್ನಿಸಿದ್ದು. ಹಲವು ಕಾರಣಗಳಲ್ಲಿ ಇದೂ ಒಂದು ಆದದ್ದರಿಂದ ಕ್ರಿ.ಶ. ೧೨ನೆಯ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ ಜೈನಧರ್ಮದ ಅವನತಿಯೊಂದಿಗೆ ಕನ್ನಡವೂ ಇಳಿಮುಖವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಕನ್ನಡವನ್ನು ಕೈಹಿಡಿದವರು ವಚನಕಾರರಾದರು. ಈ ಮಾತುಗಳಿಗೆ ನಿದರ್ಶನವಾಗಿ ಕನ್ನಡದ ಚಂಪೂ ಸಾಹಿತ್ಯ ಪ್ರವರ್ಧಮಾನದಲ್ಲಿದ್ದಾಗ ಆ ಪ್ರಕಾರದಲ್ಲಿ ಕಾವ್ಯ ರಚನೆ ಮಾಡಿದ ಜೈನ ಮತ್ತು ಬ್ರಾಹ್ಮಣ ಬರಹಗಾರರ ಅಸಮಾನ ಸಂಖ್ಯಾಪ್ರಮಾಣವು ಸಾಕ್ಷ್ಯ ನುಡಿಯುತ್ತದೆ. ರಂ.ಶ್ರೀ. ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯ ಪಟ್ಟಿಯನ್ನು ಆಧರಿಸುವುದಾದರೆ ೨೦ ಕವಿಗಳಲ್ಲಿ ೧೪ ಮಂದಿ ಜೈನರು ಉಳಿದ ೬ಮಂದಿ ಬ್ರಾಹ್ಮಣರು. ಈ ಪಟ್ಟಿಯ ಕಾಲಾವಧಿ ಕ್ರಿ.ಶ. ೯೪೦-೧೧೫೦. ಈ ಹಿನ್ನೆಲೆಯಲ್ಲಿ ಜೈನ ಬರಹಗಾರರ ಸಂಖ್ಯೆ ಹೆಚ್ಚಾಗಿ ಕಂಡು, ಬ್ರಾಹ್ಮಣರ ಸಂಖ್ಯೆ ಅಂದಿನ ಕನ್ನಡದಲ್ಲಿ ಕಡಿಮೆ ಎನಿಸಿದರೆ ಅದಕ್ಕೆ ಭಾಷೆ ಮತ್ತು ಧರ್ಮ, ಜೈನ ಮತ್ತು ಕನ್ನಡ, ಬ್ರಾಹ್ಮಣ ಮತ್ತು ಸಂಸ್ಕೃತ- ಇವುಗಳ ನಡುವಣ ತಾತ್ವಿಕ ಆಯ್ಕೆಯೇ ಮುಖ್ಯ ಕಾರಣವೆನ್ನಬೇಕು.

ಕನ್ನಡದ ಸಂದರ್ಭದಲ್ಲಿ ಕನ್ನಡ 'ನುಡಿ'ಯ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಮಾಡದೆ ಮೊಟ್ಟಮೊದಲಿಗೆ ಚಿಂತನೆ ನಡೆಸಿದವರು ಕ್ರಿ.ಶ. ೧೨ನೆಯ ಶತಮಾನದಲ್ಲಿ ಕಾಣಿಸಿಕೊಂಡ ವಚನಕಾರರು. ಅದುವರೆಗೂ ಹಲವು ತಾತ್ವಿಕ ವಿಚಾರಧಾರೆಗಳನ್ನು ಸಂಸ್ಕೃತದಲ್ಲಿ ಮಾತ್ರ ಸಮರ್ಥವಾಗಿ ಅಭಿವ್ಯಕ್ತಿಸಲು ಸಾಧ್ಯ ಎಂಬ ನಂಬಿಕೆಯನ್ನು ಇವರು ಸಡಿಲಿಸಿದರು. ಇದರ ಜೊತೆಗೆ ಪಂಪ ಮೊದಲಾದವರಿಂದ ಮಾರ್ಗ-ದೇಸಿಗಳ ಸಮನ್ವಯ ರೂಪದಲ್ಲಿ ಪ್ರವಹಿಸುತ್ತಿದ್ದ ಕನ್ನಡ ಚಿಂತನೆಯನ್ನು ಪೂರ್ಣ ಪ್ರಮಾಣದಲ್ಲಿ ದೇಸೀ ಕನ್ನಡಕ್ಕೆ ತಿರುಗಿಸಿದ ಶ್ರೇಯಸ್ಸು ಇವರಿಗೆ ಸೇರುತ್ತದೆ. ಸಂಸ್ಕೃತ ಪಾಂಡಿತ್ಯ ಪಡೆದಿದ್ದ ಬಸವಣ್ಣ, ಅಲ್ಲಮ, ಚನ್ನಬಸವಣ್ಣ ಮೊದಲಾದ ವಚನಕಾರರು ತಮ್ಮ ತಾತ್ವಿಕ ಚಿಂತನೆಯನ್ನು ತಿಳಿಗನ್ನಡದಲ್ಲಿ ಹೇಳುವ ಮೂಲಕ ಕನ್ನಡವನ್ನು ತಮ್ಮ ಮಾಧ್ಯಮ ಭಾಷೆಯನ್ನಾಗಿ ಮಾಡಿಕೊಂಡರು. ಹೀಗೆ ಪ್ರಪ್ರಥಮವಾಗಿ ಕನ್ನಡವು ನಿಜವಾದ ಅರ್ಥದಲ್ಲಿ ಶಿಕ್ಷಣ ಮಾಧ್ಯಮವಾಗಿ ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಂಡಿದ್ದು ಹಾಗೂ ಯಶಸ್ವಿಯಾದದ್ದು ಇಲ್ಲಿಯೇ. ಈ ನೆಲೆಯಲ್ಲಿ ಕನ್ನಡವು ಹತ್ತು ದಿಕ್ಕುಗಳಲ್ಲಿ ಪ್ರವಹಿಸಿ, ಹಲವು ತಾತ್ವಿಕ ಚಿಂತನೆಗಳು ಸುಲಭವಾಗಿ ಜನರ ಮನದಾಳಕ್ಕೂ ಪ್ರವೇಶಿಸಿ ಪರಿಣಾಮಕಾರಿಯಾದವು. ಈ ಮೂಲಕ ವಚನಕಾರರು ಕನ್ನಡ ನುಡಿಯನ್ನು ಸಾಮಾಜಿಕ ಕ್ರಾಂತಿಗೆ ಕಾರಣೀಭೂತವಾಗಿಸಿದರು. ಅದುವರೆಗೂ ಪಂಡಿತ ಮಂಡಲಿಯ ಆಶ್ರಯದಲ್ಲಿದ್ದ ಕಾವ್ಯವನ್ನು ಜನಸಾಮಾನ್ಯರಿಗೆ ಹಂಚಿ, ಕಾವ್ಯದ ರುಚಿಯನ್ನು ಅವರಿಗೂ ಉಣಬಡಿಸಿದರು. ಇಂತಹ ವಚನಗಳ ಮೂಲಕ ಜನರು ಕಾವ್ಯಕ್ಕೆ ಹತ್ತಿರವಾದರು.

ಹೀಗೆ ರಾಜಾಶ್ರಯದ ಪಂಡಿತ ಮಂಡಲಿಯಲ್ಲಿ ನಿರ್ಬಂಧಿತವಾಗಿ ಪ್ರವಹಿಸುತ್ತಿದ್ದ ಕನ್ನಡ ಕಾವ್ಯವನ್ನು ಮೊದಲಿಗೆ ಖಾಸಗೀಕರಣಗೊಳಿಸಿ, ಸಾವಿರಾರು ವಚನಕಾರರ ಮೂಲಕ ಕನ್ನಡದ ಅಸಂಖ್ಯ ಸಂವೇದನೆಗಳನ್ನು ಮೊದಲು ಅಭಿವ್ಯಕ್ತಿಸಿದ ಮಹತ್ತರ ಕಾಲವಾಗಿ ೧೨ನೆಯ ಶತಮಾನವು ಕಾಣಿಸುತ್ತದೆ. ಇಂತಹ ಸಂದರ್ಭದಲ್ಲಿ ಅತ್ಯಂತ ಶ್ರೀಮಂತವೆನಿಸಿದ್ದ ಸಂಸ್ಕೃತ ಭಾಷೆ ಮಾಡಿದ್ದ ಕೆಲಸವನ್ನು ಈ ಮಣ್ಣಿನ ಭಾಷೆಯಾದ ಕನ್ನಡವು ಪರಿಣಾಮಕಾರಿಯಾಗಿ ಮಾಡಿತು. ಇದಕ್ಕೆ ಮತ್ತೂ ಒಂದು ಮುಖ್ಯ ಕಾರಣವೆಂದರೆ, ಕನ್ನಡವು ಸಂಸ್ಕೃತದಂತೆ ಅಲ್ಪಸಂಖ್ಯಾತರ ಭಾಷೆಯಾಗಿರದೆ, ಬಹುಸಂಖ್ಯಾತರ ಮುಕ್ತ ಮಣ್ಣಿನ ಭಾಷೆ ಆಗಿರುವುದು. ಇದು ಕನ್ನಡಕ್ಕೆ ಗುಣಾತ್ಮಕ ಅಂಶ. ಆದ್ದರಿಂದಲೇ ಶಿ.ಶಿ. ಬಸವನಾಳರು ಹೀಗೆ ಹೇಳಿದ್ದು : “ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ಕನ್ನಡದ ವೀರಶೈವ ವಚನಕಾರರದು.”

ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಸಂಬಂಧವು ಕನ್ನಡ ಪರಂಪರೆಯಲ್ಲಿ ಮುಖ್ಯವಾಗಿ ಎರಡು ಬಗೆಯದು:

೧. ಮಾರ್ಗ-ದೇಸಿಗಳ ಸಮನ್ವಯ ರೂಪ

೨. ಅಚ್ಚಗನ್ನಡ ರೂಪ ಮತ್ತು

೩. ಸಂಘರ್ಷ

ಈ ಮೂರರಲ್ಲಿ ಮೊದಲನೆಯದಕ್ಕೆ ಪ್ರಾಧಾನ್ಯ. ಆದರೆ, ವಚನಕಾರರಲ್ಲಿ ಇಂತಹ ಸಂಬಂಧ ಮೂರೂ ವಿನ್ಯಾಸಗಳನ್ನೂ ಮೀರಿದ ಮಾದರಿಯಲ್ಲಿ ವ್ಯಕ್ತವಾಗಿದೆ. ಅದೆಂದರೆ, ಇವರ ಭಾಷೆ ತಿಳಿಗನ್ನಡ, ಸಂವಹನ ಮಾರ್ಗ ಸುಲಲಿತವಾಗಿರಬೇಕು. ಆದ್ದರಿಂದ ಇವರು ಬಳಸಿರುವ ಕನ್ನಡವು ಜನಪ್ರಚುರವಾದ ಕನ್ನಡವೇ. ಇಂತಹ ಭಾಷೆಯ ಮೂಲಕ ತಮ್ಮ ತಾತ್ವಿಕ ವಿಚಾರಗಳನ್ನು ಮಂಡಿಸುವಾಗ ಸಂಸ್ಕೃತದ ಬಗೆಗಿನ ಪ್ರೇಮವನ್ನಾಗಲೀ, ದ್ವೇಷವನ್ನಾಗಲೀ ಸಾಮಾನ್ಯವಾಗಿ ಪ್ರಕಟಿಸುವುದಿಲ್ಲ. ಅದು ಅವರ ಆಶಯವೂ ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಸಂಸ್ಕೃತದೊಂದಿಗೆ ಇವರ ಸಂಬಂಧ ಸ್ಥಾಪಿತವಾಗಿದೆ.

ವಚನಗಳ ಮಧ್ಯೆ ಪ್ರಾಸಂಗಿಕವಾಗಿ ಸಂಸ್ಕೃತ ಕಾವ್ಯದ ಕೆಲವು ಮಾತುಗಳು, ಶ್ಲೋಕಗಳು ಮತ್ತು ತಾವೇ ರಚಿಸಿದ ಸಂಸ್ಕೃತದ ಉಲ್ಲೇಖಗಳೂ ಉಲ್ಲೇಖಿಸಲ್ಪಟ್ಟಿವೆ. ಉದಾಹರಣೆಗೆ ಸೊಡ್ಡಳ ಬಾಚರಸನ ಒಂದು ವಚನದಲ್ಲಿ ಬಂದಿರುವ ಸಂಸ್ಕೃತ ನುಡಿಗಟ್ಟನ್ನು ಗಮನಿಸಬಹುದು.

> ಏಕಮೇವ ನ ದ್ವಿತೀಯಂ ಬ್ರಹ್ಮವೆಂಬ ಘನಮಹಿಮನ ಕಂಡ ಕಾಣಿಕೆಯಲ್ಲಿ ಮನ
> ಮನ ಬೆರಸಿ, ತನುತನು ಕರಗಿ, ಕರಣಂಗಳೆಲ್ಲಾ ತರಹರವಾದವಯ್ಯ
> ದೀರ್ಘದಂಡ ನಮಸ್ಕಾರಂ ನಿರ್ಲಜ್ಜಂ ಗುರು ಸನ್ನಿದೌ।
> ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್॥

ಎಂಬುದಾಗಿ ನಿಮಗೆ ಶರಣುವೊಕ್ಕೆ ನಾನು. ಎನ್ನ ಶಿರ ನಿಮ್ಮ ಚರಣದಲ್ಲಿ ಬಿಡಿಸಬಾರದ ಸಂಗ. ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ ಕಂಡು ಎನ್ನ ಭವದ ಬಳ್ಳಿಯ ಬೇರುಹಱಿಯಿತ್ತಯ್ಯ.[೧]

ಹೀಗೆ ತಾವು ಹೇಳುವ ವಿಚಾರಕ್ಕೆ ಸಂಸ್ಕೃತದ ಒಂದು ನುಡಿಕಟ್ಟು ಪೂರಕವಾಗಿದ್ದರೆ ಅದನ್ನು ನಿರಾಯಾಸವಾಗಿ ಬಳಸುತ್ತಾರೆ. ಅಂತಹ ಪ್ರಕ್ರಿಯೆಯಲ್ಲಿ ಸಂಸ್ಕೃತದ ಬಗೆಗಿನ ಪ್ರೇಮವನ್ನಾಗಲೀ ಅದನ್ನು ಬಳಸದಿರುವ ಎಡೆಗಳಲ್ಲಿ ದ್ವೇಷವನ್ನಾಗಲೀ ಕಾಣಲು ಸಾಧ್ಯವಿಲ್ಲ. ಇದು ಒಂದು ವಿನ್ಯಾಸ.

ಮತ್ತೊಂದು ವಿನ್ಯಾಸದಲ್ಲಿಯೂ ಇವರು ಸಂಸ್ಕೃತದೊಂದಿಗೆ ಸಂಬಂಧವನ್ನು ಗುರುತಿಸಿಕೊಳ್ಳುತ್ತಾರೆ. ಬಸವಣ್ಣ, ಅಲ್ಲಮ, ಚೆನ್ನಬಸವಣ್ಣ ಮೊದಲಾದವರು ಸಂಸ್ಕೃತ ಗ್ರಂಥರಾಶಿಯ ಸಾರವನ್ನು ಹೀರಿದ್ದಾರೆ. ಅದಕ್ಕೆ ಅವರ ವಚನಗಳ ಆಂತರಂಗಿಕ ವಿವರಗಳೇ ಸಾಕ್ಷಿ. ಮಹಾದೇವಿಯಕ್ಕನು 'ವೇದಶಾಸ್ತ್ರ ಪುರಾಣಾಗಮ'ಗಳನ್ನೆಲ್ಲಾ ಅರಿತಿದ್ದಾಳೆ. ಅವುಗಳಲ್ಲಿನ ಸ್ವೀಕೃತ ಮತ್ತು ಅಸ್ವೀಕೃತ ವಿಚಾರಗಳನ್ನು ಕನ್ನಡದಲ್ಲಿ ಇವರೇ ಮೊದಲಾಗಿ ಬಹುತೇಕ ವಚನಕಾರರು ಅಭಿವ್ಯಕ್ತಿಸುತ್ತಾರೆ. ಇದಕ್ಕೆ ಕಾರಣ, ಹಿಂದೆ ಸೂಚಿಸಿದಂತೆ ವಚನಗಳಲ್ಲಿ ಸಾಹಿತ್ಯ ಗುಣವನ್ನು ಅರಸುವುದು ಆಗಿರದೆ, ಅದರಿಂದ ಜನಕೋಟಿಯನ್ನು ಜಾಗೃತಗೊಳಿಸುವುದಾಗಿದೆ. ಅದಕ್ಕಾಗಿ 'ಮಿಸುಕದ' ಸಂಸ್ಕೃತ ಉಲ್ಲೇಖಗಳನ್ನು ಯಥಾವತ್ತಾಗಿ ವಚನಗಳ ಮಧ್ಯೆ ಬಳಸಿ, ಅದರ ವಿವರಣೆಯನ್ನು ಧ್ವನಿಸಿದ್ದಾರೆ. ಇದರ ಜೊತೆಗೆ ಮಿಸುಕುವ ಸಂಸ್ಕೃತ, ನುಡಿಗಳನ್ನು ಯಥಾವತ್ತಾಗಿ ಬಳಸಿದ್ದಾರೆ. ಕಾರಣ, ಇವು ಜನರ ಆಡು ನುಡಿಯಲ್ಲಿ ಕನ್ನಡದಷ್ಟೇ ಸಹಜವಾಗಿ ಬಳಕೆಯಾಗುತ್ತಿದ್ದುದು.

ಹೀಗೆ ಸಂಸ್ಕೃತದ ಉಪನಿಷತ್ತುಗಳ ಸ್ವೀಕೃತ ವಿಚಾರ, ಸಂಸ್ಕೃತ ತಾತ್ವಿಕತೆಯ ಪರಿಶೀಲನೆ, ಅದರ ಕೆಲವು ಸೂಕ್ತಿ, ಶ್ಲೋಕ ಮತ್ತು ಕಾವ್ಯ ಬರಹಗಳ ನೇರ ಬಳಕೆ ಮತ್ತು ಅದರ ಹಲವಾರು ಪದಗಳ ಬಳಕೆ –ಈ ನೆಲೆಯಲ್ಲಿ ವಚನಕಾರರು ತಮ್ಮ ವಚನಗಳನ್ನು ಕನ್ನಡದ ಮೂಲಕ ಪ್ರಕಟಿಸಿದ್ದಾರೆ. ಇಂತಹ ವಚನಗಳಲ್ಲಿ ಕಾಣುವ ಈ ಬಗೆಯ 'ಕನ್ನಡ–ಸಂಸ್ಕೃತ'ಗಳ ಸಂಬಂಧಿತ ಸ್ವರೂಪ ಕನ್ನಡದ ಸಂದರ್ಭಗಳಲ್ಲಿ ಇಲ್ಲಿಯೇ ಮೊದಲು ವ್ಯಕ್ತವಾದದ್ದು. ಇಂತಹ ಸಂಬಂಧದ ಮುಂದುವರೆದ ಮಾದರಿಗಳಾಗಿ ಅನಂತರದಲ್ಲಿ ಕೀರ್ತನೆಗಳು, ತತ್ವಪದಗಳು ಕಾಣಿಸಿಕೊಳ್ಳುವುದು ಇಲ್ಲಿಗೆ ಆನುಷಂಗಿಕ ವಿಚಾರವಷ್ಟೆ.

ಇಂತಹ ಸಂಬಂಧದ ಮಧ್ಯೆಯೂ ವಚನ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯಗಳ ನಡುವೆ ಅತ್ಯಂತ ಸೂಕ್ಷ್ಮ ಜಗಳವು ಇತ್ತು. ಇದು ನೇರವಾಗಿ ಭಾಷೆಗಳಿಗೆ ಸಂಬಂಧಿಸಿದ ಪ್ರಶ್ನೆಯೊಂದಿಗೆ ಧಾರ್ಮಿಕ ನೆಲೆಗೂ ಸಂಬಂಧಿಸಿದ್ದು. ವೈದಿಕ ಧರ್ಮದ ಜಡತೆಯು ಸಮಾಜದ ಮೇಲೆ ದುಷ್ಪರಿಣಾಮ ಬೀರಿದ್ದರಿಂದ ಸಹಜವಾಗಿಯೇ ವಿಚಾರವಂತರು ದನಿಯೆತ್ತಬೇಕಾಯಿತು. ಆದ್ದರಿಂದ, ವೈದಿಕ ಧರ್ಮದ ತಾತ್ವಿಕತೆಯನ್ನು ಪೂರ್ಣವಾಗಿ ನಿರಾಕರಿಸಿದ ಶರಣರು ಅದಕ್ಕೆ ಪ್ರತಿಯಾದ ತಾತ್ವಿಕತೆಯನ್ನು ರೂಪಿಸಿದರು. ಹಾಗೆ ರೂಪಿಸಿದ ವಿಚಾರಗಳನ್ನು ಜನರಿಗೆ ಮುಟ್ಟಿಸಿ ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳಲು

ಸಹಜವಾಗಿಯೇ ಜನಭಾಷೆಯಾದ ಕನ್ನಡವನ್ನು ತಮ್ಮ ವಚನಗಳಿಗೆ ಬಳಸಿದರು. ಹೀಗೆ ಕನ್ನಡದಲ್ಲಿ ವಚನಿಸಿದಾಗ ಸಂಸ್ಕೃತಕ್ಕೂ ಪ್ರತಿಯಾಗಿ ನಿಲ್ಲಬೇಕಾಯಿತು. ಆದ್ದರಿಂದ, ಏಕಕಾಲಕ್ಕೆ ವೈದಿಕಕ್ಕೆ ಪ್ರತಿಯಾಗಿ ಶರಣ ಚಳುವಳಿ, ಸಂಸ್ಕೃತಕ್ಕೆ ಪ್ರತಿಯಾಗಿ ಕನ್ನಡವು ಬಂದಿತು. ಈ ನೆಲೆಯಲ್ಲಿ ಸಂಸ್ಕೃತ ನಿರ್ದೇಶಿತ ಛಂದೋನಿಯಮಗಳಿಗೆ ಭಿನ್ನವಾಗಿ ದೇಸೀ ಲಯಗಳನ್ನು ವಚನಕಾರರಾದಿಯಾಗಿ ಮುಂದಿನ ಬರಹಗಾರರು ಬಳಕೆಗೆ ತಂದರು. ಅದನ್ನು ಕುರಿತು ಒಬ್ಬ ಅಜ್ಞಾತ ಕವಿ ಆಡಿದ ಮಾತು ಇಲ್ಲಿ ಉಲ್ಲೇಖನೀಯ.

> ಛಂದಮಿದಾವುದೆಂದೊಡಿರಿವರ್, ಪದಬಂಧದೊಳೀ ಪ್ರಯೋಗಮೆಂ
> ತೆಂದೊಡೆ ಬಯ್ವರ್, ಆವ ಕವಿಮಾರ್ಗಮಿದೆಂದೊಡೆ ಪೊಯ್ವರ್, ಅರ್ಥಮೇ।
> ನೆಂದೊಡೆ ತೊಂಡುಭಂಡಗೆಡೆದುಟ್ಟುದನಿಕ್ಕುವರ್, ಆವ ರೀತಿ ಪೇ
> ಳೆಂದೊಡೆ ಕೊಲ್ವರ್, ಈಗಳಿನ ದೇಸಿಗೆ ಬಿಳ್ದ ಮಹಾಕವೀಶ್ವರರ್॥[೨]

ಕವಿಯ ಈ ಮಾತು ಸಮನ್ವಯಕಾರರ ಮತ್ತು ದೇಸೀ ಬರಹಗಾರರ ನಡುವಿನ ಜಗಳವನ್ನೂ ಸೂಚಿಸುತ್ತದೆ. ಇದೇ ಧಾಟಿಯಲ್ಲಿ ರಾಜಾಶ್ರಯವನ್ನು ನೆಚ್ಚಿ, ಮಾರ್ಗ ಪದ್ಧತಿಯನ್ನು ಪೋಷಿಸುತ್ತಾ ಬಂದ ಸಂಸ್ಕೃತ ಭಾಷೆಯನ್ನು ನಗೆಯ ಮಾರಿತಂದೆ ಒಂದು ವಚನದ ಮೂಲಕ ಪ್ರಶ್ನಿಸುತ್ತಾನೆ.

> ಕಲ್ಲಿಯ ಹಾಕಿ ನೆಲ್ಲವ ತಳೆದು
> ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
> ವಾಗದ್ವೈತವ ಕಲಿತು
> ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
> ಮತ್ಸ್ಯನ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
> ಅದೇತರ ನುಡಿ? ಮಾತಿನ ಮರೆ, ಆತುರ ವೈರಿ ಮಾರೇಶ್ವರಾ[೩]

ಹೇಳಬೇಕೆಂದಿರುವ ವಿಚಾರವನ್ನು ನೇರವಾಗಿ ಜನಭಾಷೆಯಲ್ಲಿ ಹೇಳದೆ ನಾಲ್ಕಾರು ಧಾನ್ಯ ಚೆಲ್ಲಿ ಗುಬ್ಬಿಯನ್ನು ಹಿಡಿಯುವ ಕಳ್ಳನಂತೆ ಸಂಸ್ಕೃತ ಭಾಷೆಯನ್ನು ಮುಗ್ಧ ಜನರ ಶೋಷಣೆಗಾಗಿ ಬಳಸುತ್ತಿದ್ದವರನ್ನು ಪ್ರತಿಭಟಿಸುವ ಧ್ವನಿ ಇಲ್ಲಿದೆ. ಇದೇ ನಿಟ್ಟಿನಲ್ಲಿ ಆಂಡಯ್ಯ, ಚೆನ್ನಬಸವಣ್ಣ ಮತ್ತು ಅಲ್ಲಮರ ವಚನಗಳನ್ನು ಕ್ರಮವಾಗಿ ಗಮನಿಸಬಹುದು.

೧. ಖ್ಯಾತಿಗೆ ಜೋತು ಲಾಭಕ್ಕೆ ಲೋಭಿಸಿ......
   ರಾಜದ್ವಾರದಲ್ಲಿ ಸುಳಿದು ಬಳಲುವ
   ಹಿರಿಯರೆಲ್ಲರು ಇತ್ತಿತ್ತಲಲ್ಲದೆ, ಅತ್ತಲೆಲ್ಲಿಯದೋ?[೪]

೨. ಕವಿತ್ವ ಸಾಧಕರೆಲ್ಲ ಕಳವಳಿಸಿ ಹೋದರು
   ವಿದ್ಯಾಸಾಧಕರೆಲ್ಲ ಬುದ್ಧಿಗೆಟ್ಟರು[೫]

೩. ಶಬ್ದ ಸಂಭ್ರಮದಲ್ಲಿ ಹಿಂದುಗಾಣರು –ಮುಂದುಗಾಣರು
   ತಮ್ಮ ತಾವರಿಯರು[೬]

ಕನ್ನಡ ಮತ್ತು ಸಂಸ್ಕೃತಗಳ ನಡುವಿನ ಈ ಸೂಕ್ಷ್ಮ ಜಗಳ ನೇರವಾಗಿ ಭಾಷೆಯನ್ನು ಆಧರಿಸಿದ್ದಲ್ಲ ಎಂಬುದು ಸ್ಪಷ್ಟ. ಈ ಎರಡು ಭಾಷೆಗಳಿಗೆ ಹಿನ್ನೆಲೆಯಾದ ಎರಡು

ಧರ್ಮಗಳ ಪ್ರತ್ಯೇಕ ತಳಹದಿಯನ್ನು ಆಧರಿಸಿದ್ದಾಗಿದೆ. ಆದ್ದರಿಂದ, ವೈದಿಕ ಧರ್ಮಕ್ಕೆ ಪ್ರತಿಯಾಗಿ ಬಂದ ಚಳುವಳಿ ಅದರ ಗೊಡ್ಡು ಆಚಾರಗಳಿಗೆ ಪ್ರತಿಯಾದ ವಿಚಾರಯುಕ್ತ ಬದುಕನ್ನು ರೂಪಿಸಲು ಯತ್ನಿಸಿತು. ಈ ಹಿನ್ನೆಲೆಯಲ್ಲಿ ಕನ್ನಡವನ್ನು ಕೈಹಿಡಿದ ಇವರು ಮೊದಲ ಬಾರಿಗೆ ಅದನ್ನು ಸಾಹಿತ್ಯ ಪರಂಪರೆಯಲ್ಲಿ ವಿಜೃಂಭಿಸುವಂತೆ ಮಾಡಿದರು.

ಹೀಗೆ 'ವೈದಿಕ-ಸಂಸ್ಕೃತ'ಗಳ ಅಭಿನ್ನ ರೂಪಕ್ಕೆ ಪ್ರತಿಯಾಗಿ 'ಶರಣ-ಕನ್ನಡ'ವನ್ನು ಸಮರ್ಥವಾಗಿ ಬಳಕೆಗೆ ತಂದರು. ಹೀಗೆ ಸಾಹಿತ್ಯೇತರ ಮತ್ತು ಜನಪರ ಉದ್ದೇಶದಿಂದ ಹುಟ್ಟಿಕೊಂಡ ವಚನಗಳು ಸಾಹಿತ್ಯದ ಗುಣವನ್ನೂ ಹೊಂದಿದ್ದರಿಂದ ಕನ್ನಡದ ಪರಂಪರೆಯಲ್ಲಿ ಮೊದಲಿಗೆ ಕನ್ನಡ - ಕರ್ನಾಟಕತ್ವವನ್ನು ಮೈಗೂಡಿಸಿಕೊಂಡ ಸಾಹಿತ್ಯ ಪ್ರಕಾರವೆನಿಸಿತು.

ಒಟ್ಟಾರೆ ವಚನಗಳಲ್ಲಿನ ಕನ್ನಡ ಮತ್ತು ಸಂಸ್ಕೃತಗಳ ಸಂಬಂಧವನ್ನು ಹೀಗೆ ಸಮಾರೋಪಿಸಬಹುದು.

೧. ಅಂಗೀಕಾರದ ನೆಲೆ

೨. ನಿರಾಕರಣೆಯ ನೆಲೆ.

ಮೊದಲನೆಯ ನೆಲೆಯಲ್ಲಿ ಇವುಗಳ ಸಂಬಂಧ ಅನ್ಯೋನ್ಯವೆನಿಸಿದೆ. ಸಂಸ್ಕೃತದ ತಿಳಿವಳಿಕೆ, ವಿಧಿವಿಚಾರಗಳನ್ನು ಸ್ವಾಗತಿಸುತ್ತಾರೆ. ಅದರಲ್ಲಿನ ಹಲವು ವಿಚಾರಗಳನ್ನು ತಮ್ಮ ವಚನಗಳಲ್ಲಿ ಕನ್ನಡಿಸುತ್ತಾರೆ. ಕೆಲವು ಮಾತುಗಳನ್ನಂತೂ ಯಥಾವತ್ತಾಗಿ ಉಲ್ಲೇಖಿಸುತ್ತಾರೆ. ಈ ಹಿನ್ನೆಲೆಯಲ್ಲಿ ಉಪನಿಷತ್ತಿನ ಬಹುತೇಕ ವಿಚಾರಗಳು ವಚನಗಳಾಗಿವೆ. ಆದ್ದರಿಂದ ಈ ನೆಲೆಯಲ್ಲಿ ಸಂಸ್ಕೃತದೊಂದಿಗೆ ವಚನಕಾರರು ಸ್ಥಾಪಿಸಿದ ಸಂಬಂಧ ಕನ್ನಡವನ್ನು ಬೆಳೆಸುವ ದೃಷ್ಟಿಯುಳ್ಳದ್ದಾಗಿದೆ. ಇಂತಹ ಕನ್ನಡದಲ್ಲಿನ ಆಲೋಚನೆಯ (ಚಿಂತನೆಯ) ಬೆಳವಣಿಗೆಯಲ್ಲಿ ಸಂಸ್ಕೃತವನ್ನು ಸ್ವೀಕರಿಸುತ್ತಾರೆ. ಅದನ್ನು ಕನ್ನಡೀಕರಣ ಮಾಡುತ್ತಾರೆ.

ಎರಡನೆಯ ಸಂಬಂಧ ಇದಕ್ಕೆ ವ್ಯತಿರಿಕ್ತವಾದುದು. ಸಂಸ್ಕೃತವು ಕೇವಲ ಜ್ಞಾನನಿಧಿ ಎನಿಸದೆ ಪ್ರಭುತ್ವದ, ವೈದಿಕಶಾಹಿಯ, ಜ್ಞಾನಶಾಹಿಯ ವೇಷ ಧರಿಸಿ, ದೇಶೀ ಸಂಸ್ಕೃತಿಯ ಮೇಲೆ ಆಕ್ರಮಣ ಮನೋಭಾವವನ್ನು ತಳೆದಾಗ ಅದನ್ನು ವಚನಕಾರರು ಪ್ರತಿಭಟಿಸುತ್ತಾರೆ. ಜನಪರವಲ್ಲದ ಭಾಷೆಯ ಅನಗತ್ಯದ ಪ್ರಭಾವವನ್ನು ಕುಂಠಿಸಲು ತಾವು ಕನ್ನಡದ ಮೂಲಕ ವಚನಧಾರೆಯನ್ನು ಹರಿಸುತ್ತಾರೆ. ಇಂತಹ ಪ್ರತಿಕ್ರಿಯೆ ನೇರವಾಗಿ ಸಂಸ್ಕೃತಕ್ಕೆ ತೋರಿದುದೆಂದು ಮೇಲ್ನೋಟಕ್ಕೆ ಅನ್ನಿಸಿದರೂ ಅದರ ಆಂತರ್ಯದಲ್ಲಿ ಈ ಭಾಷೆಯನ್ನೂ ಒಳಗೊಂಡ ಹಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ತೋರಿದ ಪ್ರತಿಕ್ರಿಯೆಯೇ ಆಗುತ್ತದೆ. ಸಂಸ್ಕೃತ-ಕನ್ನಡ ಇವುಗಳ ಸಂಬಂಧ ವಚನಕಾರರಿಗೆ ಹೆಚ್ಚು ತಾತ್ವಿಕವಾದದ್ದು. ಎಂದರೆ ಶರಣರು ಎಲ್ಲಿ ಸಂಸ್ಕೃತ ಬಳಸುತ್ತಾರೆ? ಏಕೆ ಸಂಸ್ಕೃತವನ್ನು ಬಳಸುತ್ತಾರೆ ಎಂಬುದು ಹೆಚ್ಚು ನಿರ್ದಿಷ್ಟವಾದ ಗುರಿಯನ್ನು ಹೊಂದಿದ್ದಾಗಿದೆ ಕೂಡಾ. ಕನ್ನಡ

ಸಂಸ್ಕೃತಿಯಲ್ಲಿ ಸಹಜವಾಗಿ ಹೊಂದಿಕೆಯಾಗುವ ಸಂಸ್ಕೃತಿಯ ಸ್ವೀಕೃತ ಸಂಸ್ಕೃತಕ್ಕೂ ಹಾಗಲ್ಲದ ಸಂಸ್ಕೃತದ ಪೆಡಸು ರಚನೆಗಳಿಗೂ ಅಂತರವಿದೆ ಎಂಬುದು ವಚನಕಾರರ ನಿಲುವಾಗಿದೆ.

ಹೀಗೆ ಕನ್ನಡ ಮತ್ತು ಸಂಸ್ಕೃತಗಳ ಸಂಬಂಧ ಕೇವಲ ಭಾಷಿಕ ನೆಲೆಯಲ್ಲಿ ಮಾತ್ರ ಮುಖ್ಯವಾಗದೆ ಹೆಚ್ಚು ವ್ಯಾಪಕವಾಗಿದೆ.

ಇಂತಹ ವಚನಗಳು ಕನ್ನಡದ ಸಂದರ್ಭದಲ್ಲಿಯೇ ಅಲ್ಲದೆ ಜಾಗತಿಕ ಸಂದರ್ಭದಲ್ಲಿಯೂ ವಿಶಿಷ್ಟ ಸಾಹಿತ್ಯ ಪ್ರಕಾರವೆನಿಸಿದೆ. ಇಂತಹ ವಚನಗಳ ಮೂಲವನ್ನು ಹುಡುಕುವುದು ಕುತೂಹಲಕರ ಸಂಗತಿ ಎನಿಸಿದೆ. ಈ ಹಿನ್ನೆಲೆಯಲ್ಲಿ ಎಂ. ಚಿದಾನಂದಮೂರ್ತಿ ಮೊದಲಾದವರು ಇದರ ಮೂಲವನ್ನು ದೇಸೀ ಲಯವಾದ ತ್ರಿಪದಿಯಲ್ಲಿ ಹುಡುಕಲೆತ್ನಿಸಿ ಪ್ರಮೇಯದ ಹಂತದಲ್ಲಿಯೇ ನಿಂತಿದ್ದಾರೆ. ಆದರೆ, ಇವುಗಳಲ್ಲಿ ಸಂಸ್ಕೃತದ ಅಕ್ಷರ ಲಯಗಳೂ ಇರುವುದರಿಂದ ವಚನಗಳ ಮೂಲವನ್ನು ಇದೇ ಮಾದರಿಯಲ್ಲಿ ಸಂಸ್ಕೃತದಲ್ಲಿಯೂ ಹುಡುಕಲೆತ್ನಿಸಬಹುದು. ಆದರೆ ಒಟ್ಟು ವಚನಗಳಲ್ಲಿ ಕನ್ನಡದ ವಿವಿಧ ಲಯಗಳಿವೆ. ಸಂಸ್ಕೃತ ಶ್ಲೋಕಗಳ ಲಯಗಳೂ ಇವೆ. ಕೆಲವೆಡೆಗಳಲ್ಲಿ ಸಂಸ್ಕೃತ ಶ್ಲೋಕಗಳು, ಮಾತುಗಳು ಯಥಾವತ್ತಾಗಿ ಬಳಕೆಯಾಗಿವೆ. ಹೀಗೆ ವಚನಗಳಲ್ಲಿ ಹತ್ತಾರು ಬಗೆಯ ಲಯಗಳು ಕಾಣಿಸಿವೆ. ಆದರೆ ಇವು ಯಾವುವೂ ಕರಾರುವಾಕ್ಕಾಗಿ ಬಹುಪಾಲು ವಚನಗಳಲ್ಲಿ ಬಳಕೆಯಾಗಿಲ್ಲ. ನಿದರ್ಶನಕ್ಕೆ ಕೆಲವು ವಚನಗಳಲ್ಲಿನ ಲಯಗಳನ್ನು ಪರಿಶೀಲಿಸಬಹುದು.

ವಡಿ ಪ್ರಾಸಕ್ಕೆ – ಅ) "ಸಮುದ್ರದೊಳಗಣ ಸಿಂಪಿನಂತೆ"[೭]
ಆ) "ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ"[೮]

ಅನುಪ್ರಾಸಕ್ಕೆ – ಅ) "ತಾಳ ಮರದ ಕೆಳಗೆ ಒಂದು ಹಾಲಹರವಿಯಿರ್ದೊಡೆ"[೯]
ಆ) "ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ"[೧೦]

ಆದಿಪ್ರಾಸಕ್ಕೆ – ಅ) "ಕೊಲ್ಲೆನಯ್ಯಾ ಪ್ರಾಣಿಗಳ ಮೆಲ್ಲೆನಯ್ಯಾ ಬಾಯಿಚ್ಚೆಗೆ
ಒಲ್ಲೆನಯ್ಯ ಪರಸತಿಯರ ಸಂಗವ"[೧೧]

ಆ) "ಅದುರಿತು ಪದಾಘಾತದಿಂದ ಧರೆ
ಬಿದಿರಿದವು ಮುಕುಟ ತಾಗಿ ತಾರಕೆಗಳು"[೧೨]

ಸಹಜಪ್ರಾಸಕ್ಕೆ – ಅ) "ಕಳಿದ ಹೂವಿನಲ್ಲಿ ಕಂಪನುಳಿದ ಸೂಳೆಯಲ್ಲಿ
ಹಂಪಕೊಳಚೆಯ ನೀರಲ್ಲಿ ಗುಂಪನರಸುವಿರಿ ಮರುಳೇ"[೧೩]

ವಿವಿಧ
೩ ೩ ೩ ೩

ಮಾತ್ರಾ ಲಯಗಳಿಗೆ – ಅ) ಹೊನ್ನ ಹೆಣ್ಣ ಮಣ್ಣ ತೋರಿ[೧೪]
೪ ೪ ೪ ೪

ಆ) ಎರೆದರೆ ನೆನೆಯದು ಮರೆದರೆ ಬಾಡದು[೧೫]

೫ ೫ ೫ ೫
ಇ) ಎನ್ನನಡೆಯೊಂದು ಪರಿ ಎನ್ನನುಡಿಯೊಂದು ಪರಿ[೧೬]

೬ ೬ ೬
ಈ) ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ[೧೭]

೩ ೪ ೩ ೪
ಉ) ನುಗ್ಗು ಮಾಡುವ ನುಸಿಯ ಮಾಡುವ[೧೮]

೩ ೫ ೩ ೪
ಊ) ಸುಳಿವಿನೊಸಗೆ ಸುಳಿಯುತ್ತಲಿದ್ದೇನೆ[೧೯]

ವಿವಿಧ
ಅಂಶ ಲಯಗಳಿಗೆ-

ವಿ ವಿ ವಿ ವಿ
ಅ) ಎಲವದ ಮರಹೂತು ಫಲವಾದ ತೆರನಂತೆ
ವಿ ಬ್ರ ವಿ ವಿ
ಸಿರಿಯಾದರೇನು ಶಿವಭಕ್ತಿ ಯಿಲ್ಲದ
ವಿ ಬ್ರ ವಿ
ಫಲವಾದ ರೇನು ಹೇಳಾ[೨೦]
ವಿ ವಿ ಬ್ರ ವಿ

ಆ) ನಂಬರು ನಚ್ಚರು ಬರಿದೆ ಕರೆವರು
ವಿ ವಿ ವಿ ವಿ
ನಂಬಲ ರಿಯರೀ ಲೋಕದ ಮನುಜರು[೨೧]

ಹೀಗೆ ವಿವಿಧ ಲಯಗಳು ವಚನಗಳಲ್ಲಿವೆ. ಕೆಲವು ವಚನಗಳು ಪೂರ್ತಿಯಾಗಿ ಒಂದು ನಿರ್ದಿಷ್ಟ ಛಂದೋ ನಿಯಮಗಳಿಗೆ ಅಳವಟ್ಟಿವೆ. ಇನ್ನೂ ಕೆಲವು ಅಂತಹ ಛಂದೋನಿಯಮಗಳಿಗೆ ಆಂಶಿಕವಾಗಿ ಒಳಪಟ್ಟಿವೆ. ಆದರೆ ಇಂತಹ ರಚನೆಗಳ ಸಂಖ್ಯೆ ಒಟ್ಟು ವಚನ ರಾಶಿಯಲ್ಲಿ ತೀರಾ ಅಲ್ಪ. ಆದ್ದರಿಂದ ಇವುಗಳ ರಚನೆಯ ಮುಂದೆ ಛಂದಸ್ಸು ಒಂದು ನಿಯಮವಾಗಿರಲಿಲ್ಲ. ಆದ್ದರಿಂದಲೇ ಬಸವಣ್ಣ ಹೀಗೆ ಹಾಡಿದ್ದು-

ತಾಳ ಮಾನ ಸರಸವನರಿಯೆ,
ಓಜೆ ಬಜಾವಣೆಯ ಲೆಕ್ಕವನರಿಯೆ, ಅಮೃತಗಣ ದೇವಗಣವನರಿಯೆ
ಕೂಡಲ ಸಂಗಮದೇವಾ ನಿನ್ನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ.[೨೨]

ಮೇಲ್ಕಂಡ ಚರ್ಚೆಯ ಹಿನ್ನೆಲೆಯಲ್ಲಿ ಇದೇ ವಚನಗಳ ನಿಜವಾದ ಲಯ ವಿನ್ಯಾಸ. ಯಾಕೆಂದರೆ ವಚನಗಳಲ್ಲಿ "ಲಯ ಒಮ್ಮೆಲೆ ಕಣ್ಣಿಗೆ ಕಾಣುವಷ್ಟು ಸೂಕ್ಷ್ಮವಾಗಿಯಾಗಲಿ, ಕಿವಿಗೆ ಕೇಳುವಷ್ಟು ಘನವಾಗಿಯಾಗಲಿ ಇರದೆ ಹೆಚ್ಚು ಸೂಕ್ಷ್ಮವಾಗಿಯೇ ಇರುತ್ತಿದೆ."[೨೩]

ಈ ಹಿನ್ನೆಲೆಯಲ್ಲಿ ನೋಡಿದಾಗ ವಚನಗಳ ಮೂಲ ಮತ್ತು ಲಯಗಳನ್ನು ತಮಿಳಿನ ತೇವಾರಂಗಳ ಮೂಲದಲ್ಲಿ ಹುಡುಕುವ ಡಿ.ಎಲ್. ನರಸಿಂಹಾಚಾರ್ ಅವರ

ನಿಲುವು, ವೇದೋಪನಿಷತ್ತಿನ ಕಸಿಗೊಂಡ ಗದ್ಯದಲ್ಲಿ ಹುಡುಕುವ ಎಲ್. ಬಸವರಾಜು ಅವರ ನಿಲುವು ಮತ್ತು ಕನ್ನಡದ ದೇಸೀ ಮೂಲದ ತ್ರಿಪದಿಯಲ್ಲಿ ಹುಡುಕುವ ಎಂ. ಚಿದಾನಂದಮೂರ್ತಿ ಅವರ ನಿಲುವುಗಳು ಪ್ರಮೇಯದ ಸಿಲೆಯ ನಿಲುವುಗಳು ಅಷ್ಟೇ. ಅಭಿವ್ಯಕ್ತಿಯೊಂದಿಗೆ ಹೊಸ ಲಯದ ಸಾಧ್ಯತೆಗಳು ಕಾಣಿಸಿಕೊಂಡದ್ದು ವಚನಗಳ ವಿಶಿಷ್ಟತೆ. ಆದ್ದರಿಂದ, ಈ ಲಯ ಇದಕ್ಕೆ ವಿಶಿಷ್ಟವೆನಿಸಿ ತನ್ನ ಆಶಯದ ಅಭಿವ್ಯಕ್ತಿಗೆ ಅತ್ಯಂತ ಪೂರಕವಾಗಿದೆ.

ಸಾಹಿತ್ಯಕ್ಕೆ ತನ್ನದೇ ಆದ ಲಯವಿದೆ. ಇದು ಆಡು ಮಾತಿಗಿಂತ ಭಿನ್ನವಾದುದು. ಇದು ಗದ್ಯ ಅಥವಾ ಪದ್ಯ ಪ್ರಕಾರವಿರಬಹುದು ಅಥವಾ ಎರಡೂ ಏಕತ್ರವಾಗಿ ಮೂಡಿ ಬಂದ ವಿನ್ಯಾಸವಾಗಿರಬಹುದು. ಇಂತಹ ಲಯಕ್ಕೆ ಆಡು ಮಾತಿನ ಲಯವೆಂದಾಗಲೀ ನಿರ್ದಿಷ್ಟ ಸಾಹಿತ್ಯದ ಲಯವೆಂದಾಗಲೀ ಕರೆಯುವುದು ಸಾಧ್ಯವಿಲ್ಲ. ಇಂತಹ ವಿಶಿಷ್ಟ ಲಯವೇ ವಚನಗಳಲ್ಲಿ ಕಾಣಿಸುವುದು. ಆದ್ದರಿಂದ ವಚನಗಳ ಉಗಮ ಮತ್ತು ಅವುಗಳ ನುಡಿ ವಿನ್ಯಾಸ ತನಗೆ ತಾನೇ ಮೂಡಿ ಬಂದ ಮಾದರಿ ಎಂಬುದನ್ನು ಹಿಂದಿನ ಮಾತಿಗೆ ಪೂರಕವಾಗಿ ಬಳಸಬಹುದು.

ಹೀಗೆ ಕನ್ನಡಕ್ಕೊಂದು ವೈಶಿಷ್ಟ್ಯವನ್ನು ತಂದುಕೊಟ್ಟ ವಚನ ಸಾಹಿತ್ಯದ ಆಶಯದ ಹಿನ್ನೆಲೆಯಲ್ಲಿ ಕನ್ನಡ ಭಾಷೆಯನ್ನು ಕುರಿತು ಮಧ್ಯಕಾಲದ ಒಬ್ಬ ಸಂತ ಹೀಗೆ ಹಾಡಿರುವುದು. ಇದರಲ್ಲಿ ಅಭಿಮಾನದ ಸೆಲೆಯಿದೆ. ಭಾವಗೀತಾತ್ಮಕ ಗುಣವಿದೆ. ಆದ್ದರಿಂದ ಕನ್ನಡ ನುಡಿಯನ್ನು ಕುರಿತ ಮೊದಲ ಭಾವಗೀತೆ ಇದೇ ಆಗುತ್ತದೆ.

ನೋಡಿರೆ ಕನ್ನಡವ, ನುಡಿಸಿರೆ ಕನ್ನಡವ!
ತಲೆಯೊಲೆವುತ ಬಂದು ಕುಣಿವ ಕನ್ನಡವ! ॥ ಪಲ್ಲವ ॥

ಒಂದೆ ಕಾಲವಳು, ಕೆದಜೆದ ಮಂಡೆಯವಳು!
ಒಂದೆ ಮೊಲೆಗೆ ಒಕ್ಕಳದ ಹಾಲ ಕರೆವವಳು!
ಅಂದೆ ಹುಟ್ಟಿತ್ತೊಂದು ರತ್ನವರ್ಣದ ಬಳ್ಳಿ! ಎತ್ತೇ
ನೆಂದಡೆ! ಕಿತ್ತೇನೆಂದಡೆ ಕೀಳದು!
ನಿಜಗುಣ ಗುರುಸಿದ್ಧರಾಮನ ಕನ್ನಡವ!
ನಿಜಲಿಂಗ ಲೀಲೆಯೊಳು ಕುಣಿವ ಕನ್ನಡವ![೨೪]

ಇದುವರೆಗಿನ ಚರ್ಚೆಯನ್ನು ಗಮನಿಸಿದಾಗ ವಚನಕಾರರಲ್ಲಿ ಕನ್ನಡ ಮತ್ತು ಸಂಸ್ಕೃತಗಳ ನಡುವಿನ ಸಂಬಂಧದ ಸ್ವರೂಪ ಅತ್ಯಂತ ವಿಶಿಷ್ಟವಾದುದು ಎಂದೆನಿಸುತ್ತದೆ.

* * *

ಹೀಗೆ ಇಲ್ಲಿಯವರೆಗೂ ಬೇರೆ ಬೇರೆ ನೆಲೆಗಳಲ್ಲಿ ವಚನಕಾರರ ಕನ್ನಡ ನುಡಿಯ ಬಗೆಗಿನ ಚಿಂತನೆಯ ಸ್ವರೂಪವನ್ನು ಅರಿತಿದ್ದಾಯಿತು. ಇನ್ನು ಮುಂದೆ ಅವರ ನಾಡಿನ ಕಲ್ಪನೆಯನ್ನು ಕುರಿತು ಚರ್ಚಿಸಲಾಗುವುದು.

ಪ್ರಾಚೀನ- ಮಧ್ಯಕಾಲೀನ ಕವಿಗಳಿಗಿಂತ ವಚನಕಾರರ ನಾಡಿನ ಕಲ್ಪನೆ ಭಿನ್ನವಾದುದು. ಇದನ್ನು ಇವರು ನೋಡುವ, ಪರಿಭಾವಿಸುವ, ಅಭಿವ್ಯಕ್ತಿಸುವ ರೀತಿಯೇ ವೈಶಿಷ್ಟ್ಯಪೂರ್ಣವಾದುದು. ಈ ಹಿನ್ನೆಲೆಯಲ್ಲಿ ಇದು ರಾಜಕೀಯ ಕೇಂದ್ರವಾಗಿ, ನಿರ್ದಿಷ್ಟ ಸಾಂಸ್ಕೃತಿಕ ಭೂ ವಲಯವಾಗಿ, ತನ್ನದೇ ಆದ ಮೇರೆಗಳನ್ನು ಸೃಷ್ಟಿಸಿಕೊಂಡ ಪ್ರಾಕೃತಿಕ ನೆಲೆಯಾಗಿ ಕಾಣಿಸುವುದಿಲ್ಲ. ಇವೆಲ್ಲವನ್ನೂ ಮೇಳೈಸಿಕೊಂಡ ತಾತ್ವಿಕ ನೆಲೆಯಾಗಿ ಕಾಣಿಸುತ್ತದೆ.

ಕಾವ್ಯ ಸಂಪ್ರದಾಯದಂತೆ ಒಂದು ನಾಡಿನಲ್ಲಿ ಹುಟ್ಟಿ, ಬೆಳೆದು, ಅದರೊಂದಿಗೆ ಹಲವು ಕಾಲದ ತಾದಾತ್ಮ್ಯ ಸಂಬಂಧವನ್ನು ಹೊಂದಿದ ಕವಿ ಮಾತ್ರ ಆ ನಾಡನ್ನು ಕುರಿತು ಅಭಿಮಾನದ ನೆಲೆಯಲ್ಲಿ ಪರಿಭಾವಿಸಿ, ಅದಕ್ಕೆ ಕಾವ್ಯಾಭಿವ್ಯಕ್ತಿ ಕೊಡುತ್ತಾನೆ. ಆದರೆ ವಚನಕಾರರಲ್ಲಿ ಕಂಡುಬರುವ 'ನಾಡು' ಅಂತಹ ತಾತ್ವಿಕ ನೆಲೆ ಪಡೆದಿಲ್ಲ. ಈ ನಾಡಿಗೆ ಆಕರ್ಷಿತರಾಗಿ ಹೊರಗಿನಿಂದ ಬಂದವರೂ ಕೂಡ ಇದನ್ನು ಕುರಿತು ಮಾತನಾಡುತ್ತಾರೆ. ಉದಾಹರಣೆಗೆ ತೆಲುಗೇಶ ಮಸಣಯ್ಯ, ತೆಲುಗು ಬೊಮ್ಮಣ್ಣ, ಅಮರಗೊಂಡ ಮಲ್ಲಿಕಾರ್ಜುನ ಇವರು ಆಂಧ್ರದ ಮೂಲದವರು. ಇದಕ್ಕೆ ಕಾರಣ ಇವರಿಗೆ ಪಂಪ, ಆಂಡಯ್ಯ ಮೊದಲಾದವರಂತೆ ಲೌಕಿಕ ದೃಷ್ಟಿ ಇಲ್ಲದಿರುವುದು. ಆದ್ದರಿಂದ ವಚನಕಾರರ 'ನಾಡು' ಎಂಬ ಪರಿಕಲ್ಪನೆ ಕೇವಲ ತನ್ನ ಮಡಿಲಿನ ಮಕ್ಕಳಿಂದ ಮಾತ್ರ ಅಭಿವ್ಯಕ್ತಿಸಿಕೊಳ್ಳದೆ, ಇತರೆ ಪ್ರದೇಶದ ಸಾಂಸ್ಕೃತಿಕ ವಕ್ತಾರರಾದ 'ನುಡಿ'ಕಾರರ ಮೂಲಕವೂ ಅಭಿವ್ಯಕ್ತಿಗೊಳ್ಳುವುದು ವೇದ್ಯವಾಗುತ್ತದೆ. ಹೀಗೆ ಸೀಮಿತ ಪ್ರಾದೇಶಿಕ ನೆಲೆಯನ್ನು ಮೀರಿದ ವಿಶಾಲ ನೆಲೆಯ ನಾಡು ಇವರಲ್ಲಿ ಕಾಣಸಿಗುತ್ತದೆ. ಈ ತಾತ್ವಿಕತೆಯ ಹಿನ್ನೆಲೆಯಲ್ಲಿ ಮುಂದಿನ ಚರ್ಚೆ ಮೊದಲಾಗುತ್ತದೆ.

ವಚನಕಾರರಲ್ಲಿ ನಾಡಿನ ರೂಪದಲ್ಲಿ ವ್ಯಕ್ತವಾಗುವುದು 'ಕಲ್ಯಾಣ'. ಇದು ಎರಡು ಮುಖ್ಯ ನೆಲೆಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಮೊದಲನೆಯದು ಪ್ರಾದೇಶಿಕ ನೆಲೆ. ಇದರಲ್ಲಿ ನಾಡಿನ ಮೂರ್ತ ವಿವರಗಳು ಕಾಣಿಸುತ್ತವೆ. ಎರಡನೆಯದು, ಅನುಭಾವಿಕ ನೆಲೆ. ಈ ನೆಲೆಯಲ್ಲಿ 'ಕಲ್ಯಾಣ'ವು ಒಂದು ರೂಪಕವಾಗಿ ಕಂಡಿದೆ. ಈ ಚರ್ಚೆ ಇಲ್ಲಿ ಎರಡು ಕವಲಾಗಿ; ಮೊದಲ ಕವಲಿನಲ್ಲಿ ಪ್ರಾದೇಶಿಕ ನೆಲೆಯಲ್ಲಿ ವಚನಕಾರರು ಕಂಡ ಕಲ್ಯಾಣ ನಾಡಿನ ಚರ್ಚೆಗೆ ಆರಂಭವಾಗುತ್ತದೆ.

ಕಲ್ಯಾಣ ನಾಡನ್ನು ಕುರಿತು ಹಲವು ವಚನಕಾರರು ನೀಡುವ ವಿವರಗಳು ಚರಿತ್ರೆ-ಕಲ್ಪನೆ-ಸಾಂಕೇತಿಕತೆಗಳಿಂದ ಕೂಡಿದ್ದು, ಇದಕ್ಕೆ ಕಾರಣ ಇವು ವಚನಗಳೇ ಹೊರತು ಶುದ್ಧ ಚರಿತ್ರೆ ಅಲ್ಲ ಎಂಬುದು. ಆದರೂ ಇವರ ವಚನಗಳಲ್ಲಿ ಕಂಡು ಬಂದಿರುವ ಕಲ್ಯಾಣವನ್ನು ಅವಲೋಕಿಸುವಾಗ ಅದರಲ್ಲಿ ಉತ್ಪ್ರೇಕ್ಷೆ, ಕಲ್ಪನೆ, ಭಕ್ತಿಯ ಛಾಪು ಎದ್ದು ಕಾಣುತ್ತದೆ. ಉದಾಹರಣೆಗೆ, ಚೆನ್ನಬಸವಣ್ಣನ ಒಂದು ವಚನ. ಅದರಲ್ಲಿ ಕಲ್ಯಾಣದ ಮೂರ್ತ ವಿವರಗಳು ಗದ್ಯದ ೭೦ ಸಾಲುಗಳಲ್ಲಿ ಬಂದಿದೆ. ಅದು ವಾಸ್ತವ ಆಗಿ ಏನೂ ಕಾಣುವುದಿಲ್ಲ. ಅಲ್ಲಿ ಇರುವವರೆಲ್ಲ ಸಾತ್ವಿಕರೇ ಹೊರತು ಪಾಪಿ, ಕೋಪಿ,

ಅನಾಚಾರಿಗಳೆಂಬುವರು ಅಲ್ಲ. ಅಂತಹ ಕಲ್ಯಾಣ ನಾಡಿನ ವಿಸ್ತೀರ್ಣ ಹನ್ನೆರಡು ಯೋಜನ. ಅದಕ್ಕೆ ೩೬೫ ಬಾಗಿಲವಾಡಗಳು. ೧೧೫ ಚೋರಗಿಂಡಿಗಳು. ಈ ಪಟ್ಟಣವನ್ನು ಬಳಸಿರುವ ಕೋಟೆಯ ಉದ್ದ ನಲ್ವತ್ತೆಂಟು ಯೋಜನ ಬಾನೆತ್ತರ. ನಿಯೋಗಿಗಳ ಮನೆ ಲಕ್ಷ. ಮಾಂಡಲೀಕರ ಮನೆ ಲಕ್ಷ. ಸಾಮಂತರ ಮನೆ ಲಕ್ಷ. ರಾಯರಾವುತರ ಮನೆಗಳಿಗೆ ಲೆಕ್ಕವಿಲ್ಲ. ಇದರಲ್ಲಿ ನೂರಾರು ಮುಖ್ಯ ಬೀದಿಗಳಿವೆ. ಒಂದೊಂದು ರಸ್ತೆ ಸಾಮಾನ್ಯವಾಗಿ ೧೦-೧೨ ಯೋಜನೆಗಳ ವಿಸ್ತೀರ್ಣದ್ದು. ಅಲ್ಲಿ ಲಕ್ಷದ ತೊಂಬತ್ತಾರು ಸಾವಿರ ಶಿವಾಲಯಗಳು, ಎರಡು ಲಕ್ಷದ ಎಂಬತ್ತೈದು ಸಾವಿರ ದಾಸೋಹದ ಮಠಗಳು.[೨೫] ಹೀಗೆ ಇದರ ವಿವರಗಳು ಮುಂದುವರೆಯುತ್ತವೆ. ಆದ್ದರಿಂದ ಯಾವ ಒಬ್ಬ ವಚನಕಾರನೇ ಆಗಲಿ ಕಲ್ಯಾಣದ ಪ್ರಾದೇಶಿಕ ವಿವರಗಳನ್ನು ಅನುಲಕ್ಷಿಸಿ ನಾಡಿನ ಅಭಿವ್ಯಕ್ತಿ ನೀಡಿಲ್ಲ ; ಮಿಗಿಲಾಗಿ ಅದನ್ನೊಂದು ತಾತ್ವಿಕ ಸಂಕೇತವನ್ನಾಗಿಸಿದ್ದಾನೆ. ಇಂತಹ ಈ ವಚನ ಕೂಡ ಅಂತಿಮವಾಗಿ ಏರುವುದು ತಾತ್ವಿಕ ನೆಲೆಗೆ. ಅದನ್ನು ಈ ವಚನದ ಆರಂಭದ ಒಂದು ಸಾಲು ಹೀಗೆ ನುಡಿಯುತ್ತದೆ. "ರುದ್ರಲೋಕವೆ ಮರ್ತ್ಯಲೋಕಕ್ಕಿಳಿತಂದು ಕಲ್ಯಾಣಪುರವಾಗಿ ಹುಟ್ಟಿತ್ತು ನೋಡಿರಯ್ಯ."

ಆದ್ದರಿಂದ ವಚನಕಾರರ ನಾಡಿನ ಮೂರ್ತ ಕಲ್ಪನೆಗಿಂತ ಅನುಭಾವಿ ನೆಲೆಯ ಪರಿಕಲ್ಪನೆಯೇ ಮುಖ್ಯವೆನಿಸುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಹತ್ತಾರು ವಚನಗಳು ಸಿಗುತ್ತವೆ. ಇವರಿಗೂ ಪೂರ್ವದಲ್ಲಿ ಇದು ಕೇವಲ ಚಾರಿತ್ರಿಕ ನೆಲೆ ಮಾತ್ರ. ಆದರೆ ಇವರ ಕಾಲದಲ್ಲಿ ಸಾಂಸ್ಕೃತಿಕವಾಗಿ ಇದು ಮಹತ್ತರ ಸ್ಥಾನವನ್ನು ನಿರ್ವಹಿಸುತ್ತದೆ. ಜಗದ ಕತ್ತಲೆಯನ್ನು ತೊಡೆಯಲು ಯತ್ನಿಸುತ್ತದೆ. ಆದ್ದರಿಂದಲೇ ಚನ್ನಬಸವಣ್ಣನು ಈ ಕಲ್ಯಾಣವನ್ನು ಕುರಿತು ತನ್ನ ಒಂದು ವಚನದಲ್ಲಿ ಹೀಗೆ ನುಡಿದದ್ದು. "ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು ಕಟ್ಟಿತ್ತು ಕಲ್ಯಾಣ." ಇಂತಹ ಕಲ್ಯಾಣದಲ್ಲಿ 'ಕತ್ತಲ' ನ್ನು ಕುರಿತು ಮಾತನಾಡುವಾಗ ನೂರಾರು ಬೆಳಕಿನ ಕಿರಣಗಳು ಮೂಡಿವೆ. ಅವು ವಚನಗಳಾಗಿ ಪರಿಣಮಿಸಿವೆ. ಅಂತಹ ವಚನಗಳ ಕೇಂದ್ರ ವ್ಯಕ್ತಿಯಾಗಿ ಬಸವಣ್ಣ ಕಾಣಿಸುತ್ತಾನೆ. ಉದಾಹರಣೆಗೆ ಕಲ್ಯಾಣದ ಪ್ರಸ್ತಾಪ ಬಂದಿರುವ ಬಹುತೇಕ ವಚನಗಳಲ್ಲಿ ಬಸವಣ್ಣನ ಪ್ರಸ್ತಾಪ ಇದೆ. ಬಸವಣ್ಣ ಕೇಂದ್ರ ವ್ಯಕ್ತಿಯಾಗಿ, ಬೆಳಕಿನ ರೂಪವಾಗಿ, ಆಂದೋಲನದ ನಾಯಕನಾಗಿ ಕಾಣಿಸುತ್ತಾನೆ. ಕೆಲವು ಬಾರಿ ಈತ ಕಲ್ಯಾಣವೇ ಆಗಿ ಬಿಡುತ್ತಾನೆ. ಹೀಗೆ ಬಸವಣ್ಣ ಮತ್ತು ಕಲ್ಯಾಣ ಎರಡನ್ನೂ ಅಭಿನ್ನವಾಗಿ ಕಾಣುವ ಹಲವು ವಚನಗಳಿಗೆ ಮಾದರಿಯಾಗಿ ಇದೂ ಒಂದು-

> ಬಸವಣ್ಣನ ನಡೆಪರುಷ, ಬಸವಣ್ಣನ ನುಡಿಪರುಷ
> ....
> ಬಸವಣ್ಣನ ನೆನೆವುದೇ ಲಿಂಗಾರ್ಚನೆ ಬಸವಣ್ಣನ ನೆನೆವುದೇ ಪರಮ ತತ್ವವು
> ಬಸವಣ್ಣನ ನೆನೆವುದೇ ಕಲ್ಯಾಣವೆನಗೆ
> ಕಲಿದೇವಯ್ಯ ನಿಮ್ಮ ಶರಣ ಬಸವಣ್ಣನಂತಹ ಮಹಿಮ ನೋಡಯ್ಯ[೨೬]

ಹೀಗೆ ಕಲ್ಯಾಣವೆಂಬುದು ತಾತ್ವಿಕ ನೆಲೆಗೆ ಏರಿಬಿಡುತ್ತದೆ. ಅದರಲ್ಲಿ ಬಸವಣ್ಣನಿಗೆ ಕಲ್ಯಾಣ ಮತ್ತು ಕೈಲಾಸಗಳಲ್ಲಿ ಬೇಧ ಕಾಣದಾಗುತ್ತದೆ. ಆದ್ದರಿಂದಲೇ ತಾನು ಕಾಯಕದಲ್ಲಿ ಕೈಲಾಸವನ್ನು ಕಾಣುವುದು. ಆಚಾರವೇ ಸ್ವರ್ಗ ಅನಾಚಾರವೇ ನರಕ, ಇಲ್ಲಿ ಸಲ್ಲುವವರೂ ಅಲ್ಲಿಯೂ ಸಲ್ಲುವರು– ಹೀಗೆ ಹಲವು ವಚನ ನುಡಿಗಳ ಮೂಲಕ ಕಾಣುವ ಬಸವಣ್ಣ ಉನ್ನತ ಬದುಕನ್ನು ರೂಪಿಸುವ ಆಂದೋಲನದಲ್ಲಿ ತೊಡಗಿದ್ದರಿಂದ ಅದರಿಂದ ಆಕರ್ಷಿತರಾಗಿ ಹಲವು ದೇಶಗಳಿಂದ ಜನ ಇಲ್ಲಿಗೆ ಬರುತ್ತಾರೆ. ಸೊನ್ನಲಿಗೆಯಿಂದ ಅಲ್ಲಮ, ಉಡುತಡಿಯಿಂದ ಮಹಾದೇವಿ, ಅಮರಗುಂಡದಿಂದ ಮಲ್ಲಿಕಾರ್ಜುನ, ಹಾವಿನಹಾಳದಿಂದ ಕಲ್ಲಯ್ಯ....... ಹೀಗೆ.

ಕಲ್ಯಾಣದಲ್ಲಿ ಕಾಣಿಸಿಕೊಳ್ಳತೊಡಗಿದ್ದ ವಿಚಾರಧಾರೆಗಳಿಗೆ ಬಸವಣ್ಣ ಬೆನ್ನು ಕಟ್ಟಿದ್ದರಿಂದ ಮತ್ತು ಅಂತಹ ವಿಚಾರಗಳನ್ನು ರೂಪಿಸುವಲ್ಲಿ ತಾನು ಮಹತ್ವದ ಪಾತ್ರ ವಹಿಸಿದ್ದರಿಂದ ಹಾಗೂ ಇದರ ಮುಖ್ಯ ಭೂಮಿಕೆ ಕಲ್ಯಾಣವಾದದ್ದರಿಂದ ತತ್ವ–ಬಸವಣ್ಣ –ಕಲ್ಯಾಣಗಳು ಅಭಿನ್ನವಾಗಿ ಕಾಣಿಸಿಕೊಂಡದ್ದು ಸಮಂಜಸವೇ ಆಗಿದೆ. ಇದಕ್ಕೆ ಹಿನ್ನೆಲೆಯಾಗಿ ಕೊಂಡಗುಳಿ ಕೇಶಿರಾಜ (ಕ್ರಿ.ಶ. ೧೧೦೭–೩೨)ನಿಂದ ಜೇಡರ ದಾಸಿಮಯ್ಯನ ಕಾಲ (ಕ್ರಿ.ಶ. ೧೧೪೦)ದವರೆವಿಗೂ ಕ್ರಾಂತಿಕಾರಕ ಧ್ವನಿಗಳು ಕೇಳಿಬರುತ್ತವೆ. ಆದರೆ, ಅವುಗಳ ಪ್ರಮಾಣ ತೀವ್ರವಾಗಿ ಸಮಗ್ರರೂಪವೆನ್ನುವಂತೆ ಪ್ರಕಟವಾದದ್ದು ಬಸವಣ್ಣನ ನೇತೃತ್ವದ ಕಲ್ಯಾಣದಲ್ಲಿ. ಆ ದೃಷ್ಟಿಯಿಂದ ವಚನ ಕ್ರಾಂತಿಯ ಕೇಂದ್ರ 'ಕಲ್ಯಾಣ–ಬಸವಣ್ಣ'ನೇ ಆಗುತ್ತಾನೆ. ಹೀಗೆ ಕಲ್ಯಾಣ ಮತ್ತು ಬಸವಣ್ಣ ಈ ನೆಲೆಯಲ್ಲಿ ರೂಪಕವೇ ಆಗಿ ಮಾರ್ಪಡುತ್ತದೆ. ಈ ಹಿನ್ನೆಲೆಯಲ್ಲಿ ಚೆನ್ನಬಸವಣ್ಣನ ಒಂದು ವಚನ ಹೀಗಿದೆ–

> ಲಿಂಗ ಜಂಗಮ–ಜಂಗಮ ಲಿಂಗದ ಮುಖವ ನೀವಲ್ಲದೆ ಇನ್ನು ಬಲ್ಲವರಾರಯ್ಯ?
> ಅಂಗದ ಮೇಲೆ ಲಿಂಗವುಳ್ಳದೆಲ್ಲವೂ ಸಂಗಮನಾಥನೆಂದಲ್ಲಿ, ಪರವಾದಿ ಬಿಜ್ಜಳನು
> ಒರೆದು ನೋಡಲೆಂದಟ್ಟಿದರೆ ಹಗರಣಿಗರ–ಜಂಗಮಮುಖ ಲಿಂಗ
> ಮಾಡಿದವರಾರು ಹೇಳಾ ನೀವಲ್ಲದೆ? ಮಂದ ಮಾನಿಸರ ಕರೆದು –ಓ
> ಎನಿಸೆ, (ಉಡಿಸಿ), ಉಣಿಸಿ, ಜಂಗಮಲಿಂಗ ಪ್ರಾಣಿಸಲಗ್ನ ಬಸವಣ್ಣನೆಂಬ
> ಧ್ವಜವನೆತ್ತಿ, ಮೆರೆದವರಾರು ಹೇಳಾ ಈ ಕಲ್ಯಾಣದಲ್ಲಿ?

ಆದ್ದರಿಂದಲೇ ಚಿಕ್ಕದಣ್ಣಾಯಕರು ಹೀಗೆ ನುಡಿದದ್ದು: "ಮರ್ತ್ಯಲೋಕ ಶಿವಲೋಕವೆಂಬುದೊಂದು ನಿಶ್ಚಯ ನಿಮಗೆ ಯಾವುದು ದೇವ? ನೀವೀ ಕಲ್ಯಾಣಕ್ಕೆ ಬಂದವತರಿಸಿದಲ್ಲಿ". ಆದ್ದರಿಂದ ಬಸವಣ್ಣ ಅಲ್ಲಮನ ಮಾತಿನಂತೆ "ಮರ್ತ್ಯಕ್ಕೆ ಪ್ರತಿ ಕೈಲಾಸವೆಂಬ ಕಲ್ಯಾಣಮಂ" ಮಾಡುತ್ತಾನೆ.

ಹೀಗೆ ರೂಪಕವಾಗಿ ಮಾರ್ಪಟ್ಟ 'ಬಸವಣ್ಣ–ಕಲ್ಯಾಣ'ವು ಮುಂದಿನ ಘಟ್ಟದಲ್ಲಿ 'ಮನಸ್ಸು–ಕಲ್ಯಾಣ' ರೂಪಕವಾಗಿ ಬೆಳೆಯುತ್ತದೆ. ಆದ್ದರಿಂದ ಕಲ್ಯಾಣ ನಾಡನ್ನು ವಚನಕಾರರು ಪರಿಭಾವಿಸುವ ಕ್ರಮವೇ ವಿಶಿಷ್ಟವಾದುದು. ಸಾಮಾಜಿಕ ಬದಲಾವಣೆ ಮತ್ತು ಶರಣ ಕೇಂದ್ರವಾಗಿರುವ ಈ ನೆಲೆಯಲ್ಲಿ ಇರುವುದೆಲ್ಲ ಸಾತ್ವಿಕವೇ. ಆ ದೃಷ್ಟಿಯಲ್ಲಿ

ಇದು ಸೂರ್ಯನ ಚಿರಬೀಡು. ಅದನ್ನು ಧ್ವನಿಸುವ ಒಂದು ವಚನ ಮಹಾದೇವಿ ಯಕ್ಕನಿಂದ–

ಕಲ್ಯಾಣವೆಂಬುದಿನ್ನಾರಿಗೂ ಹೊಗಬಾರದು
ಆಶೆ–ಆಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು
ಒಳಗು–ಹೊರಗು ಶುದ್ಧವಾದಂಗಲ್ಲದೆ ಕಲ್ಯಾಣವ ಹೊಗಬಾರದು
ನಾನೆಂಬುದ ಹರಿದವಂಗಲ್ಲದೆ ಕಲ್ಯಾಣವ ಹೊಗಬಾರದು
ಒಳಗು ತಿಳಿದು ಚೆನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ ಕಲ್ಯಾಣವ ಕಂಡು
ನಮೋ ನಮೋ ಎನುತಿರ್ದೆನು

ಅಕ್ಕನ ಈ ನಾಡು ಕೇವಲ ಕಲ್ಯಾಣವಾಗಿರದೆ ಅದರ ಅನ್ವರ್ಥರೂಪವೂ ಆಗಿದೆ. ಆದ್ದರಿಂದ ಆಸೆ, ಆಮಿಷ, ಅಹಂಗಳನ್ನು ತೊರೆದ ಮತ್ತು ಆತ್ಮಜ್ಞಾನವನ್ನು ಸಂಪಾದಿಸದ ಮನಸ್ಸುಗಳಿಗೆ ಅಲ್ಲಿ ನೆಲೆಯಿಲ್ಲ. ಹೀಗೆ 'ಒಳಗನ್ನು ತಿಳಿಯುವ' ನಿಟ್ಟಿನಲ್ಲಿ ಇದು ಬೆಳಕಿನ ಕೇಂದ್ರವಾಗಿದೆ. ಇಂತಹ ನಾಡು ಅಂದಿನ ಹಲವು 'ಕತ್ತಲು'ಗಳಿಗೆ ಬೆಳಕನ್ನೀಡುವ ವಚನ ರಶ್ಮಿಯ ಮೂಡಲ ಸ್ಥಾನವಾಗಿದೆ. ಈ ಹಿನ್ನೆಲೆಯಲ್ಲಿ ಇನ್ನೂ ಹಲವು ವಚನಗಳು ಮೂಡಿವೆ. ಅವುಗಳ ಕೆಲವು ವಚನಗಳಲ್ಲಿ ಕೈಲಾಸ ಮತ್ತು ಕಲ್ಯಾಣಗಳು ಅಭಿನ್ನವಾಗಿ ಕಾಣುವುದಲ್ಲದೇ ಈ ಅಭಿನ್ನ ರೂಪ ಮತ್ತು ವ್ಯಕ್ತಿ ಮನಸ್ಸುಗಳು ಕೂಡ ಅಭಿನ್ನವಾಗಿ ಕಂಡಿರುವುದು ವೇದ್ಯವಾಗುತ್ತದೆ. ಹೀಗೆ ಮನಸ್ಸು ಮತ್ತು ಕಲ್ಯಾಣಗಳು ರೂಪಕದ ನೆಲೆಗೂ ಏರುತ್ತವೆ. ಅದಕ್ಕೆ ನಿದರ್ಶನಾರ್ಥವಾಗಿ ಮಹಾದೇವಿಯಕ್ಕನ ಒಂದು ವಚನ ಈ ಕೆಳಕಂಡಂತಿದೆ–

ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು
ಒಳಗೂ ಕಲ್ಯಾಣ ಹೊರಗೂ ಕಲ್ಯಾಣ
ಇದರಂತುವನಾರು ಬಲ್ಲರಯ್ಯಾ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
ನಿಮ್ಮ ಶರಣರ ಬಸವಣ್ಣನ ಕ್ಕಾಂಬೆನೆಂಬ ತವಕವೆನಗಾಯಿತ್ತು
ಕೇಳಾ ಚೆನ್ನಮಲ್ಲಿಕಾರ್ಜುನ

ಕಲ್ಯಾಣದಲ್ಲಿ ವಚನಕಾರರ ಮೂಲಕ ಮೂಡಿ ಬಂದ ವಿಚಾರಗಳನ್ನು ಮೈಗೂಡಿಸಿಕೊಂಡ ಮನಸ್ಸುಗಳು ಸ್ವತಃ ಕಲ್ಯಾಣವಾಗುತ್ತವೆ. ಇಂತಹ 'ಕಲ್ಯಾಣ'ಗಳು ಕಲ್ಯಾಣದಲ್ಲಿಯೇ ಹೆಚ್ಚು. ಇದಕ್ಕೆ ಪೂರಕವಾಗಿ ವಿವಿಧ ಪ್ರಾದೇಶಿಕ ನೆಲೆಗಳಲ್ಲಿ ಕೂಡ ವಿಭಿನ್ನ ಕಲ್ಯಾಣಗಳು ಕಾಣಸಿಗುತ್ತವೆ. ಉದಾಹರಣೆಗೆ ಮಲ್ಲಿಕಾರ್ಜುನನ ರೂಪದಲ್ಲಿ 'ಅಮರಗೊಂಡದ ಕಲ್ಯಾಣ,' ಕಲ್ಲಯ್ಯನ ರೂಪದಲ್ಲಿ 'ಹಾವಿನಹಾಳ ಕಲ್ಯಾಣ', ಸಿದ್ಧರಾಮನ ರೂಪದಲ್ಲಿ 'ಸೊನ್ನಲಿಗೆಯ ಕಲ್ಯಾಣ,'....... ಹೀಗೆ ಇವುಗಳ ಸಂಖ್ಯೆ ಅಂದಿನ ಸಂದರ್ಭದಲ್ಲಿ ಅಗಣಿತ.

ಇಂತಹ ಉನ್ನತವಾದ ಮೂಲ ಕಲ್ಯಾಣವು ಹಲವು ಸ್ಥಗಿತ ಮೌಲ್ಯಗಳ ಪ್ರತೀಕ ಶಕ್ತಿಗಳಿಂದ ನಾಶವಾದಾಗ, ಶರಣರೂ ಚದುರುತ್ತಾರೆ. ಹಲವರು ರಕ್ತ ಸುರಿಸುತ್ತಾರೆ.

ತಮ್ಮ ತತ್ವಗಳೂ ಬಿರುಗಾಳಿಗೆ ತೂರಲ್ಪಡುತ್ತವೆ. ಇಂತಹ ಘೋರ ಸನ್ನಿವೇಶದಲ್ಲಿ ಬಸವಣ್ಣನೂ ಕೊಲೆಯಾಗಿರಲು ಸಾಧ್ಯವಿದೆ! ಅಂತೂ ಆರೋಗ್ಯಕಾಯನಾದ ಬಸವಣ್ಣ ತನ್ನ ೩೯ನೆಯ ವಯಸ್ಸಿನಲ್ಲಿ ತೀರಿಕೊಂಡಿದ್ದು ಇದುವರೆಗಿನ ಶೋಧಿತ ಸತ್ಯ.

ಹೀಗೆ ಬೆಳಗಿನ ಕೇಂದ್ರವಾಗಿ ಬೆಳೆಯುತ್ತಿದ್ದ ಕಲ್ಯಾಣವು ಹಲವು ದುಷ್ಟ ಶಕ್ತಿಗಳ ಸಂಚಿಗೆ ಬಲಿಯಾಗುತ್ತದೆ. ಅದರ ನಿರ್ಮಾಪಕ ಮರೆಯಾಗುತ್ತಾನೆ. ಸಮಸ್ತ ವಚನಕಾರರು ಕಟ್ಟಿಕೊಂಡ ಕನಸುಗಳು ಭಗ್ನವಾಗಿ ರಕ್ತ ಕಾರತೊಡಗುತ್ತದೆ. ಈ ನೋವಿನ ಹಿನ್ನೆಲೆಯಲ್ಲಿ ಅಂತಹ ನಾಡನ್ನು ಕುರಿತ ಬಸವಣ್ಣನ ಉದ್ಗಾರ ಅವನ ಅವಸಾನದ ದಿನಗಳಲ್ಲಿ ಬಂದಿರಲು ಸಾಧ್ಯವಿದೆ. ಅದು ಹೀಗಿದೆ–

> ಅರಸು ವಿಚಾರ, ಸಿರಿಯು, ಶೃಂಗಾರ, ಸ್ಥಿರವಲ್ಲಾ ಮಾನವಾ
> ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ
> ಒಬ್ಬ ಜಂಗಮದ ಅಭಿಮಾನದಿಂದ
> ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು
> ಸಂದಿತ್ತು, ಕೂಡಲ ಸಂಗಮದೇವಾ ನಿಮ್ಮ ಕವಳಿಗೆಗೆ[೩೦]

ಈ ಹಿನ್ನೆಲೆಯಲ್ಲಿ ವಚನಕಾರರ ಮುಖ್ಯ ನಾಡಾದ 'ಕಲ್ಯಾಣ'ವು ಕೇವಲ ಪ್ರಾದೇಶಿಕ ನೆಲೆಯಲ್ಲಿ ವ್ಯಕ್ತವಾಗಿಲ್ಲ. ಅದಕ್ಕಿಂತ ನೂರು ಪಟ್ಟು ಮಿಗಿಲಾಗಿ ತಾತ್ವಿಕತೆಯ ನೆಲೆಯಲ್ಲಿ ಅಭಿವ್ಯಕ್ತಿ ಕಂಡಿದೆ. ವೈದಿಕಶಾಹಿಗೆ ಪ್ರತಿಭಟನೆ, ಭಕ್ತಿಯ ಖಾಸಗೀಕರಣ, ಕಾಯಕವೇ ಪರಮೋಚ್ಛ ಕ್ರಿಯಾ ಮಂತ್ರ, ಸ್ತ್ರೀ ಸ್ವಾತಂತ್ರ್ಯ–ಸಮಾನತೆ, ಉಪಸಂಸ್ಕೃತಿಗಳ ನೂರಾರು ಸಂವೇದನೆಗಳ ಅಭಿವ್ಯಕ್ತಿ, ಒಳ–ಹೊರಗುಗಳ ಭೇದನಿವಾರಣೆ –ಹೀಗೆ ಹಲವು ಆಶಯಗಳ ಚರ್ಚಿತ ಭೂಮಿಯಾಗಿ ಕಾಣಿಸಿಕೊಳ್ಳಲಾರಂಭಿಸಿದ್ದ ಕಲ್ಯಾಣವು ಮುಂದೆ ಇವೆಲ್ಲದರ ಪ್ರತೀಕವಾಗಿ ಬೆಳೆಯುತ್ತಾ, ಕಡೆಗೊಮ್ಮೆ ಭಗ್ನತೆ ಪಡೆದಾಗ ಅದರ ಚೂರುಗಳು ಕಾಲಪ್ರವಾಹದಲ್ಲಿ ತೇಲಿ ತೇಲಿ ಇಂದಿಗೂ ಹರಿದು ಬಂದಿವೆ; ನಮ್ಮನ್ನೂ ಮುಟ್ಟಿವೆ, ತಟ್ಟಿವೆ.

ವಚನಕಾರರ ನಾಡಿನ ಕಲ್ಪನೆ ಅತ್ಯಂತ ವಿಶಿಷ್ಟವಾದುದು. ಕನ್ನಡ ಪರಂಪರೆಯಲ್ಲಿ ಈ ಮಾದರಿ ಇದೇ ಮೊದಲು. ವಚನಕಾರರ ನಾಡಿನ ಕಲ್ಪನೆ ಮುಖ್ಯವಾಗಿ 'ಕಲ್ಯಾಣ'ದ ರೂಪದಲ್ಲಿ ವ್ಯಕ್ತಗೊಂಡಿದ್ದರೂ ಅವರಲ್ಲಿ ಕೆಲವರು ಅದಕ್ಕೂ ಮೂಲವಾದ ತಮ್ಮ ಪ್ರಾದೇಶಿಕತೆಯ ನೆಲೆಗೆ ಹೋಗಿ ಮುಟ್ಟಿದ್ದಾರೆ ಅಥವಾ ಅಲ್ಲಿಂದ ಎದ್ದು ಬಂದಿದ್ದಾರೆ. ಉದಾಹರಣೆಗೆ ಬಸವಣ್ಣನ ಕೂಡಲ ಸಂಗಮ, ಕಲ್ಲಯ್ಯನ ಹಾವಿನಹಾಳ, ಮಾಚಯ್ಯನ ಗೊಬ್ಬೂರು ಮೊದಲಾದವು. ಇಂತಹ ಊರುಗಳ ಉಲ್ಲೇಖ ವಚನಕಾರರ ಅಂಕಿತಗಳಲ್ಲಿ ಕೂಡಿ ಬಂದಿದೆ. ಆದ್ದರಿಂದ ಇಂತಹ ವಚನಕಾರರು ಆಡುವ ಮಾತು ಕನ್ನಡ ನಾಡು, ಅಖಿಲಭಾರತ ಅಥವಾ ವಿಶ್ವಾತ್ಮಕ ನೆಲೆಗೆ ಏರಿದರೂ ಕೂಡ ಅದರ ಬೇರು ಮಾತ್ರ ತಮ್ಮನ್ನು ಪ್ರಾಥಮಿಕವಾಗಿ ರೂಪಿಸಿದ ಸಾಂಸ್ಕೃತಿಕ ಭೂನೆಲೆಗಟ್ಟಿನಲ್ಲಿಯೇ ಇರುತ್ತದೆ. ಇದು ಅವರಿಗೆ ಅಭಿಮಾನಾಸ್ಪದ ಸಂಗತಿಯೂ ಹೌದು. ಈ ಹಿನ್ನೆಲೆಯಲ್ಲಿ ತಮ್ಮ ವಚನಗಳ ಮೂಲಕ ಮೂಲ ಪ್ರಾದೇಶಿಕತೆಯ ಅನನ್ಯತೆ ಮತ್ತು ಅಸ್ಮಿತೆಯನ್ನು

ಕಾಯ್ದಿರಿಸಿಕೊಳ್ಳುತ್ತಾರೆ. ಅಲ್ಲದೆ ತಾವು ಹೇಳುವ ಯಾವುದೇ ವಿಚಾರಕ್ಕೂ ಇಂತಹ ಮೂಲ ನೆಲೆಯ ಸೀಲನ್ನು ಒತ್ತುತ್ತಾರೆ. ಹೀಗೆ ತಮ್ಮ ವಿಚಾರಗಳ ಮೂಲಕ ವಿಶ್ವಾತ್ಮಕ ನೆಲೆಗೆ ಏರುವ ಇವರು ಅದೇ ನೆಲೆಗೆ ತಮ್ಮ ಊರುಗಳಿಗೂ ಸಹ ಪ್ರವೇಶಿಕೆಯನ್ನು ದೊರಕಿಸುತ್ತಾರೆ. ಈ ಮೂಲಕ ಒಂದೊಂದು ಸೀಮಿತ ಭೂ ವಲಯವೂ ಸಾಂಸ್ಕೃತಿಕ ಮಹತ್ವದ್ದಾಗಿ ತೋರಿ, ಅವೂ ಒಂದೊಂದು ವಿಶ್ವಗಳೇ ಆಗುತ್ತವೆ. ಅದರ ಮೂಲಕ ಆಯಾ ವಚನಕಾರರು ತಮಗೆ ಜನ್ಮ ನೀಡಿ ರೂಪಿಸಿದ ಸಂವೇದನೆಗಳನ್ನು ಮೈಗೂಡಿಸಿದ ಊರುಗಳ ಬಗೆಗೆ ಅಭಿಮಾನವನ್ನೂ ತೋರುವಂತಾಗುತ್ತದೆ. ಅದರ ಋಣವನ್ನು ತೀರಿಸುವ ಯತ್ನ ಮಾಡಿದಂತಾಗುತ್ತದೆ. ಈ ಸಣ್ಣ ನೆಲೆಯಿಂದ ಪುಟಿದೇಳುವ ಇವರು ಅನಂತರದಲ್ಲಿ ವಿಶಾಲವಾದ ಕಲ್ಯಾಣ ನಾಡನ್ನು ಕುರಿತು ಅಭಿಮಾನದಿಂದ ಆಡುವ ಮಾತುಗಳು ಗಟ್ಟಿ ಎನ್ನಿಸುತ್ತವೆ. ಯಾಕೆಂದರೆ ಒಬ್ಬ ವ್ಯಕ್ತಿ ಪ್ರಾಥಮಿಕ ಹಂತದಲ್ಲಿ ತನ್ನ ತಾಯಿ, ಕುಟುಂಬ, ಗ್ರಾಮ ಇವುಗಳ ಬಗೆಗೆ ಅಭಿಮಾನ ತಾಳದೆ ಅದನ್ನು ವಿಶಾಲ ನಾಡಿನಲ್ಲಿ ಮಾತ್ರ ಅಭಿವ್ಯಕ್ತಿಸುವುದು ಗಟ್ಟಿ ಎನಿಸುವುದಿಲ್ಲ. ಅದು ವಿಚಾರಯುಕ್ತವೂ ಅಲ್ಲ. ಈ ಕಾರಣದಿಂದ ವಚನಕಾರರು ತಮ್ಮ ವಚನಗಳ ಅಂಕಿತಗಳಲ್ಲಿ ತಮ್ಮ ನೆಲೆಗಳನ್ನು ಮರೆಯದೆ ದಾಖಲಿಸಿರುವುದು ಪ್ರಶಂಸಾರ್ಹ ಎನಿಸುವಷ್ಟರ ಮಟ್ಟಿಗೆ ಯೋಗ್ಯವೆನಿಸಿದೆ.

ಈ ಹಿನ್ನೆಲೆಯಲ್ಲಿ ವಚನಕಾರರ ನಾಡಿನ ಕಲ್ಪನೆ ಇತರ ಕವಿಗಳಂತೆ ಕೇಂದ್ರೀಕರಣಗೊಂಡದ್ದು ಅಲ್ಲ. ಅದು ವಿಕೇಂದ್ರೀಕೃತವಾದುದು. ಇಂತಹ ಸಾಧನೆಯನ್ನು ತೋರಿದ ವಚನಕಾರರಲ್ಲಿ ಮುಖ್ಯವಾಗಿ ಬಸವಣ್ಣನಿಗೆ ಕೂಡಲ ಸಂಗಮ, ಕಲ್ಲಯ್ಯನಿಗೆ ಹಾವಿನಹಾಳ, ಮಲ್ಲಿಕಾರ್ಜುನನಿಗೆ ಅಮರಗೊಂಡ ಮೊದಲಾದವುಗಳು ನಾಡುಗಳಾಗುತ್ತವೆ. ಇದು ನಾಡಿನ ಅತ್ಯಂತ ಪ್ರಾಥಮಿಕ ಹಂತ. ಈ ಹಂತದಿಂದಲೇ ಹಲವು ವಚನಕಾರರು ಮೂಲ ಸಂವೇದನೆಗಳೊಂದಿಗೆ ಮೂಡಿ ಬರುತ್ತಾರೆ. ಇದರ ಮೂಲಕ ವಿಶಾಲ ವ್ಯಾಪ್ತಿಯ ನಾಡನ್ನು ನೋಡಬಯಸುತ್ತಾರೆ. ಅಂತಹ ನಾಡು ಅವರ ಮಟ್ಟಿಗೆ ಕಲ್ಯಾಣವೇ ಆಗಿದೆ.

ಹೀಗೆ ಕಲ್ಯಾಣವೆಂಬುದು ಕೇವಲ ಒಂದು ನಾಡಾಗಿರದೆ, ಹಲವು ನಾಡುಗಳ ಕೇಂದ್ರೀಕರಣವಾಗಿದೆ. ಇಂತಹ ಕೇಂದ್ರೀಕೃತ ನಾಡು ಇವರಿಗೆ ಕೇವಲ ಪ್ರಾದೇಶಿಕವಾಗಿ ಕಾಣುವುದಿಲ್ಲ. ಅದಕ್ಕೂ ಮಿಗಿಲಾಗಿ ಅದು ಅನುಭಾವಿ ನೆಲೆಯಲ್ಲಿಯೇ ಕಾಣುವುದು ಎಂಬ ಸಂಗತಿಯನ್ನು ಈಗಾಗಲೇ ಗಮನಿಸಲಾಗಿದೆ. ಆದ್ದರಿಂದ ಇವರ ದೃಷ್ಟಿಯಲ್ಲಿ ಕಲ್ಯಾಣವೆಂಬುದು ಇನ್ನೂ ಮೂಡಿಲ್ಲ; ಮೂಡಬೇಕಾಗಿದೆ. ಅದನ್ನು ರೂಪಿಸುವ ಅಥವಾ ಕಟ್ಟುವ ನಿಟ್ಟಿನಲ್ಲಿ ಸಾವಿರಾರು ವಚನಕಾರರು ಕ್ರಿಯಾಶೀಲವಾಗಿದ್ದಾರೆ. ಅಂತಹ ನಾಡು ಕೇವಲ ಬಾಹ್ಯ ನೆಲೆಯದಾಗಿರದೆ ಅಂತರಂಗಿಕ ನೆಲೆಗೂ ವ್ಯಾಪಿಸಿದೆ. ಹೀಗೆ ಅಂತರಂಗ ಮತ್ತು ಬಹಿರಂಗ – ಎರಡೂ ನೆಲೆಗಳಲ್ಲಿ ವ್ಯಾಪಿಸಿರುವ ಕಲ್ಯಾಣವನ್ನು ಅನ್ವರ್ಥ ನಾಮದ ನೆಲೆಯಲ್ಲಿ ಕಟ್ಟುವ ನಿಟ್ಟಿನಲ್ಲಿ ಹಲವು ಕನಸುಗಳನ್ನು ಹೊತ್ತಿದ್ದಾರೆ. ಅದಕ್ಕೆ ಎದುರಿಗಿದ್ದ ಆತಂಕಗಳ ಅರಿವನ್ನೂ ಸಹ ಪಡೆದು ಅವುಗಳ ಎದುರಿಗೆ ಈಜುವ ಮನಸ್ಥಿತಿಯನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ 'ಕಾಯಕವೇ

ಕೈಲಾಸ' ಎಂಬ ಮಹತ್ತರ ನುಡಿ ಮಂತ್ರವನ್ನು ಜನರಿಗೆ ಬೋಧಿಸಿ ಬೆವರು ಸುರಿಸುವ ಹಾಗೆ ಮಾಡಿದ್ದಾರೆ. ಅದರ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಸದೃಢ ನಾಡನ್ನು ಕಟ್ಟುವ ಆಶೋತ್ತರವನ್ನು ಇಟ್ಟುಕೊಂಡಿದ್ದಾರೆ. ಪರಿಣಾಮವಾಗಿ ಇದು ರಾಜಕೀಯ ವ್ಯವಸ್ಥೆಯ ಮೇಲೆಯೂ ಪ್ರಭಾವಿತವಾಗಿ ಕಲ್ಯಾಣದ ಹೊರಗಿನ ಭಾಗಗಳಿಂದ ಹಲವು ವಾಣಿಜ್ಯ ಆಕರ್ಷಣೆಗಳೂ ಮೂಡಿ, ಕಲ್ಯಾಣವೆಂಬುದು ಒಂದು ಪ್ರಮುಖ ವಾಣಿಜ್ಯ ಕೇಂದ್ರವಾದ ಮಾತನ್ನು ಇತಿಹಾಸ ಹೇಳುವುದನ್ನು ಇಲ್ಲಿ ಸ್ಮರಿಸಬಹುದು.

ಹೀಗೆ ಇವರು ನೋಡಿದ ಮತ್ತು ಕಟ್ಟಬಯಸಿದ ನಾಡು ವಿವಿಧ ನೆಲೆಗಳಲ್ಲಿ ವಿಕಾಸಗೊಳ್ಳುತ್ತಾ ಸಾಗಿ, ಅಂತಿಮವಾಗಿ ವಿಶ್ವಾತ್ಮಕ ನೆಲೆಗೆ ಏರುತ್ತದೆ. ಇದಕ್ಕೆ ಪೂರಕವಾಗಿ ಇದು ವ್ಯಕ್ತಿ ಕೇಂದ್ರಿತ ಮತ್ತು ಸಮಷ್ಠಿ ಕೇಂದ್ರಿತ ನೆಲೆಯಲ್ಲೂ ಮತ್ತು ಅದರ ಅಂತರಂಗ ಮತ್ತು ಬಹಿರಂಗಗಳಲ್ಲೂ ಕ್ರಿಯಾಶೀಲವಾಗಿ, ಇಡೀ ಕನ್ನಡ ಸಾಹಿತ್ಯದಲ್ಲಿ ನಾಡಿನ ಕಲ್ಪನೆ ಅತ್ಯಂತ ವಿಶಿಷ್ಟ ಎನ್ನಿಸಿಬಿಡುತ್ತದೆ.

ಹೀಗೆ ಕನ್ನಡ ಸಾಹಿತ್ಯಕ್ಕೆ ವಚನಕಾರರ ಮೂಲಕ ಮೊದಲಿಗೆ ಪುರ-ಗ್ರಾಮ-ಮೂಲ ನೆಲೆಗಳು ವಿಶಿಷ್ಟ ಸಂವೇದನೆಗಳೊಂದಿಗೆ ಪ್ರವೇಶ ಮಾಡುತ್ತವೆ. ಆದರೆ, ಇಲ್ಲಿ ಎಲ್ಲಿಯೂ ಸಂಕುಚಿತ ಮನೋಭಾವವಿರದೆ, ತಮ್ಮ ಮೂಲ ನೆಲೆಯಾಂತರ್ಗತ ನಾಡು; ಅದರ ಮೂಲಕ ವಿಶ್ವವೇ ಕಾಣುವುದು ಮುಂದಿನ ಬರಹಗಾರರಿಗೆ ಮಾದರಿಯೂ ಎನಿಸುತ್ತದೆ. ಆದ್ದರಿಂದಲೇ ವಚನಕಾರರ ಆಶಯಗಳನ್ನು ಹೊತ್ತ ವೀರಶೈವ ಕವಿಗಳು ತಮ್ಮ ನಾಡಿನೊಂದಿಗೆ ತಮ್ಮ ಪ್ರಾದೇಶಿಕ ಅಸ್ಮಿತೆಯನ್ನು ಗುರುತಿಸಿಕೊಂಡದ್ದು.

ಉದಾಹರಣೆಗೆ: **ಪಾಲ್ಕುರಿಕೆ** ಸೋಮನಾಥ
ಎಡೆಯೂರು ಸಿದ್ಧಲಿಂಗೇಶ್ವರ
ಗೂಳೂರು ಸಿದ್ಧವೀರಣ್ಣೊಡೆಯ
ಗುಮ್ಮಳಾಪುರದ ಸಿದ್ಧಲಿಂಗಯತಿ
ಗುಬ್ಬಿಯ ಮಲ್ಲಣಾರ್ಯ

ಈ ಪರಂಪರೆಯನ್ನು ಕೀರ್ತನಕಾರರು ಮತ್ತು ಅನಂತರದ ತತ್ವಪದಕಾರರೂ ಪಾಲಿಸಿದರು. ಉದಾಹರಣೆಗೆ ಕೀರ್ತನಕಾರರಲ್ಲಿ-

	ಪುರಂದರ ವಿಠಲ	-	ಪುರಂದರದಾಸ
	ಕಾಗಿನೆಲೆಯಾದಿಕೇಶವ	-	ಕನಕದಾಸ
ತತ್ವಪದಕಾರರಲ್ಲಿ	**ಶಿಶುನಾಳದೀಶ**	-	ಶರೀಫ
	ಕಡಕೋಳ	-	ಮಡಿವಾಳಪ್ಪ

ಇವರ ಬಗೆಗೆ ಒಂದೆರಡು ಹೆಚ್ಚುವರಿ ಮಾತು. ಇಲ್ಲಿಯ ವೀರಶೈವ ಕವಿ ಮತ್ತು ತತ್ವಪದಕಾರರು ಒಂದು ಪ್ರಾದೇಶಿಕ ನೆಲೆಯಲ್ಲಿ ನೆಲೆಸಿ ಅಲ್ಲಿ ಕೃತಿಯನ್ನು ಹಾಡಿದವರು.

ಆದ್ದರಿಂದ ಅವರ ಚಿಂತನೆಗಳು ಈ ನೆಲೆಯಿಂದಲೇ ವಿವಿಧ ದಿಕ್ಕುಗಳಿಗೆ ಪಸರಿಸಬೇಕಾಗಿತ್ತು. ಆದರೆ, ಅನಂತರದ ಕೀರ್ತನಕಾರರಾಗಲೀ, ತತ್ವಪದಕಾರರಾಗಲೀ ಒಂದು ಸೀಮಿತ ನೆಲೆಯಲ್ಲಿ ನಿಂತು ಕೃತಿ ರಚನೆ ಮಾಡಿದವರಲ್ಲ. ಇವರು ಜಂಗಮರು. ಹುಟ್ಟು ಮತ್ತು ಮೂಲ ಸಂವೇದನೆಗಳನ್ನು ಪಡೆದ ದೃಷ್ಟಿಯಿಂದ ಒಂದು ನಿರ್ದಿಷ್ಟ ಪ್ರದೇಶದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಂಡಿದ್ದರೂ ಆ ಪ್ರದೇಶಕ್ಕೆ ಅವರು ಅಂಟಿಕೊಂಡು ಕೂರಲಿಲ್ಲ. ಅದು ಮತ್ತು ಅದರ ಸುತ್ತಲ ಪ್ರದೇಶಗಳನ್ನು ಸುತ್ತಾಡಿ, ಜನಪದದ ವಿವಿಧ ಅನುಭವಗಳನ್ನು ತಮ್ಮದನ್ನಾಗಿ ಮಾಡಿಕೊಂಡು, ಅವಕ್ಕೆ ತತ್ವಪದಗಳ ಮೂಲಕ ಪ್ರತಿಕ್ರಿಯೆ ನೀಡುತ್ತಾ ಬಂದರು. ಆದ್ದರಿಂದ ಇವರ ಹಲವು ತತ್ವ ಚಿಂತನೆಗಳು ವಿವಿಧ ಪ್ರಾದೇಶಿಕ ವಲಯಗಳಲ್ಲಿ ಮೂಡಿ ಬಂದವು. ಹೀಗೆ ಯಾವುದೇ ಪ್ರಾದೇಶಿಕ ವಲಯದ ಅನುಭಾವಿ ಪದಗಳನ್ನು ಇವರು ಕಟ್ಟಿದರೂ ಅವುಗಳ ಆಂತರ್ಯದಲ್ಲಿ ತಮ್ಮ ಮೂಲ ನಾಡಿನ ಛಾಪನ್ನು ತರುವುದನ್ನು ಮರೆಯುವುದಿಲ್ಲ. ಆ ಹಿನ್ನೆಲೆಯಲ್ಲಿ ಮೂಡಿ ಬಂದ ತತ್ವ ಪದಗಳಿಗೆ ತಮ್ಮ ಪ್ರಾದೇಶಿಕತೆಯ ಮೊಹರನ್ನು ಒತ್ತಿರುತ್ತಾರೆ. ಉದಾಹರಣೆಗೆ ಶಿಶುವಿನಹಾಳದಿಂದ ಬಂದ ಶರೀಫ ಅದರ ಸುತ್ತಲಿನ ಭಾಗಗಳಲ್ಲಿ ಸಂಚರಿಸಿ, ಜನಪದದ ಹಲವು- ಹನ್ನೊಂದು ಅನುಭವಗಳನ್ನು ತನ್ನದನ್ನಾಗಿ ಮಾಡಿಕೊಂಡು, ಅವುಗಳಿಗೆ ಅನುಭಾವಿ ನೆಲೆಯ ಪ್ರತಿಕ್ರಿಯೆಯನ್ನು ನೀಡುತ್ತಾನೆ. ಉದಾಹರಣೆಗೆ,

ಬಿದ್ದೀಯಬೆ ಮುದುಕಿ ಬಿದ್ದೀಯಬೆ
ನೀ ದಿನ ಹೋದಾಕಿ ಇರು ಬಾಳ ಜೋಕಿ
ಬುದ್ಧಿಗೇಡಿ ಮುದುಕಿ ನೀನು ಬಿದ್ದೀಯಬೆ[೩೧]

....
ಅಳಬ್ಯಾಡ ತಂಗಿ ಅಳಬ್ಯಾಡ ನಿನ್ನ
ಕಳುಹ ಬಂದವರಿಲ್ಲಿ ಉಳುಹಿಕೊಂಬುವರಿಲ್ಲ.....[೩೨]

ಗಿರಣಿ ವಿಸ್ತಾರ ನೋಡಮ್ಮ । ಶರಣಿ ಕೊಡಮ್ಮ। ಧರಣೀಶ ರಾಣಿ।
ಕರುಣದಿ ರಾಜ್ಯಕ। ತರಿಸಿದ ಘನಚೋದ್ಯವೋ ಚೀನಾದ ವಿದ್ಯವೋ[೩೩]

ಈ ಬಗೆಯ ಹಲವು ಸಂವೆದನೆಗಳು ವಿವಿಧ ಪ್ರಾದೇಶಿಕ ವಲಯಗಳಿಂದ ಮೂಡಿ ಬಂದ ಅನುಭಾವಿ ನೆಲೆಗಳಾಗಿವೆ.

ಈ ಉದಾಹರಣೆಗೆ ಪೂರಕವಾಗಿ ಮತ್ತೊಂದು ಉದಾಹರಣೆಯನ್ನು ವಿಸ್ತೃತ ನೆಲೆಯಲ್ಲಿ ನೋಡಬಹುದು.

ಕಡಕೋಳ ಮಡಿವಾಳಪ್ಪನವರು ೧೮ನೇ ಶತಮಾನದಲ್ಲಿ ಜೀವಿಸಿದ್ದವರು. ಹುಟ್ಟಿದ್ದು ಬಿದನೂರು. ಜೀವನದ ಪ್ರಾಥಮಿಕ ಘಟ್ಟವನ್ನು ರೂಪಿಸಿಕೊಂಡದ್ದು ಗುಲ್ಬರ್ಗ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ. ಈ ಮಧ್ಯೆ ಚಿಮಣಗೇರಿಯಲ್ಲಿ ಜ್ಞಾನ ಸಂಪಾದಿಸಿ, ಅರಳಗುಂಡಿಗೆಯಲ್ಲಿ ಪಕ್ವವಾಗುತ್ತಾರೆ. ಇಲ್ಲಿ ಬಿದನೂರು ಒಂದನ್ನು

ಬಿಟ್ಟರೆ ಉಳಿದೆಲ್ಲವು ಇಂದಿನ ಗುಲ್ಬರ್ಗಾದ ಪ್ರದೇಶಗಳೇ ಆಗಿವೆ. ಇಂತಹ ನೆಲೆಯಿಂದ ಹೊರಟ ಇವರು ತಮ್ಮ ಅನುಭಾವಿ ಬದುಕನ್ನು ರೂಪಿಸಿಕೊಳ್ಳುವಲ್ಲಿ ಮತ್ತು ಆ ಹಿನ್ನೆಲೆಯಲ್ಲಿ ತತ್ವಪದ ಕಟ್ಟುವಲ್ಲಿ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸುತ್ತಾರೆ. ಕೆಲವೆಡೆ ವಾಸ್ತವ್ಯ ಹೂಡುತ್ತಾರೆ. ಅದಕ್ಕೆ ಅವರ ಹಾಡುಗಳೇ ಆಧಾರಗಳನ್ನು ಕೊಡುತ್ತವೆ. ನಿದರ್ಶನಾರ್ಥವಾಗಿ ಕೆಲವು ಹಾಡುಗಳ ಸಾಲನ್ನು ಇಲ್ಲಿ ನೋಡಬಹುದು–

ಬೆಂಡೆಗುಂಬಳ ಬಜನಾಪುರದ
ಈ ಮಾತು ಕಡಕೋಳ ಮಡಿವಾಳ್ವೇಳಿದ[೩೪]

....
ಪೊಡವಿಯೊಳಗೆ ಮಿಗಿಲ ದೃಷ್ಟ[೩೫] **ಸೈದಾಪೂರ**
ದಡವಿಗಿಡದ ಪೊರಡಿಗೆ ಬಂದ

....
ಉರಗ ಭೂಷಿತ ಶಿರವರದ ಶೋಭಿತಕರ
ಮೆರೆವ ಮಂದಿರ **ಸೈದಾಪುರ** ಮಹಾಂತೇಶ್ವರ[೩೬]

....
ಬಿದನೂರ ಮಡಿವಾಳ ದೇಶಿಕ ಬಲ್ಲ[೩೭]

....
ಬಿದನೂರ ಮಡಿವಾಳಾಖ್ಯಾನ[೩೮]

....
ಶಿಕ್ಷಾಗುರು ಶಿಖಾಮಣಿ ಸ್ವಾಮಿಯೆನಿಸಿ
ಪರಮಾರಾಧ್ಯ **ಗೊಬ್ಬೂರ** ಸದಾಶಿವ ದೇವರೆನಿಸಿದಿ[೩೯]

ಹೀಗೆ ಮಡಿವಾಳಪ್ಪನವರು ಕಡಕೋಳ ಎಂಬ ಊರಿನ ಹೆಸರನ್ನು ಧರಿಸಿ, ತಮ್ಮ ಬದುಕಿನುದ್ದಕ್ಕೂ ನೂರಾರು ಬಗೆಯ ಅನುಭವಗಳನ್ನು ಪಡೆಯುವ ನಿಟ್ಟಿನಲ್ಲಿ "ಲೆಕ್ಕವಿಲ್ಲದಷ್ಟು ಗ್ರಾಮಗಳಲ್ಲಿ ಸುತ್ತಾಡಿದ್ದಾರೆ. ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಗಳಲ್ಲಿಯೂ ಇವರು ಸಂಚರಿಸಿದ್ದಾರೆ. ಅವುಗಳಲ್ಲಿ ಕೆಲವೊಂದು ಗ್ರಾಮಗಳು ಇವರ ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಚಿಮಣಗೇರಿ, ಚೌಡಾಪುರ, ಬಿದನೂರ, ಅರಳಗುಂಡಿಗೆ, ಜಿಂಬೇರುಳ, ಕೋಣಸಿರಸಗಿ, ಹಂದಿಗನೂರ, ಕೋರವಾರ, ಅಲಮೇಲ, ಕಾಜಾಪೂರ, ಗಂವ್ವಾರ, ಚಾಂದಕೋಟಿ, ಬನ್ನಿಕೊಪ್ಪ, ಚೆನ್ನೂರ, ತೆಲಗಬಾಳ, ಕಡ್ಲೆವಾಡ, ಕೋಡ್ಲಿ, ಶಹಾಪುರ, ಸುರಪುರ, ಸೈದಾಪುರ ಮುಂತಾದ ಗ್ರಾಮಗಳೊಂದಿಗೆ ಇವರ ಬದುಕಿನ ಕೊಂಡಿಗಳು ಹೆಣೆದುಕೊಂಡಿವೆ. ಆಯಾ ಸಂದರ್ಭದ ನೆನಪಿಗಾಗಿ ಇಲ್ಲಿ ದಾಖಲುಗೊಂಡಿವೆ."[೪೦]

ಹೀಗೆ ಹಲವು ಪ್ರಾದೇಶಿಕ ನೆಲೆಗಳಿಂದ ಅನುಭವದ್ರವ್ಯವನ್ನು ಸಂಪಾದಿಸಿದರೂ ಅವನ್ನು ತತ್ವಪದಗಳ ಮೂಲಕ ಅಭಿವ್ಯಕ್ತಿಸುವಾಗ ತನ್ನ ಪ್ರಾದೇಶಿಕ ಮೂಲ ನೆಲೆಯ ಐಡೆಂಟಿಟಿಯನ್ನು ತಪ್ಪದೇ ದಾಖಲಿಸುವುದು ನಾಡು–ನುಡಿಗಳ ವಿಚಾರ ದೃಷ್ಟಿಯಿಂದ

ಅತ್ಯಂತ ಮುಖ್ಯ ಎನ್ನಿಸಿದೆ. ಇಂತಹ ಪರಂಪರೆ ವಚನಕಾರರಿಂದ ಆರಂಭವಾಗಿ ಸಮಕಾಲೀನ ಸಂದರ್ಭದಲ್ಲೂ ಮುಂದುವರೆದಿದೆ.

ಹೀಗೆ ವಚನಕಾರರಲ್ಲಿ ಕಾಣಿಸಿಕೊಂಡ ನಾಡಿನ ಬಗೆಗಿನ ಹಲವು ಮಾದರಿಗಳಲ್ಲಿ ಇದೊಂದು ಮಾತ್ರ ಪರಂಪರೆಯಾಗಿ ಮುಂದುವರೆಯಿತು. ದಾಸರು ಹಂಪೆಯನ್ನು ಕುರಿತು ನಿರ್ವಚಿಸಿದರೂ ಅದು ಶರಣರ ಕಲ್ಯಾಣದಷ್ಟು ಗಾಢವಾಗಿಲ್ಲದಿರುವುದಕ್ಕೆ ಅವರ ಚಾರಿತ್ರಿಕ ಸನ್ನಿವೇಶಗಳೇ ಕಾರಣ. ಆದ್ದರಿಂದ ಇಡೀ ಕನ್ನಡ ಸಾಹಿತ್ಯದಲ್ಲಿ ಶರಣರ ನಾಡು ಮತ್ತು ನುಡಿಗಳ ಚರ್ಚೆ ಅತ್ಯಂತ ವೈಶಿಷ್ಟ್ಯಪೂರ್ಣವಾದುದು ಎನಿಸುತ್ತದೆ.

ಅಡಿಟಿಪ್ಪಣಿಗಳು

೧. ಎಲ್. ಬಸವರಾಜು (ಸಂ.), ಶಿವಗಣ ಪ್ರಸಾದಿ ಮಹದೇವಯ್ಯನ ಶೂನ್ಯಸಂಪಾದನೆ, ಸಂ. ೧, ಪು. ೧೦೫, ಚಿನ್ಮಲಾದ್ರಿ ಬೃಹನ್ಮಠ, ಚಿತ್ರದುರ್ಗ, ೧೯೬೯.

೨. ಜಿ.ಎಸ್. ಶಿವರುದ್ರಪ್ಪ (ಸಂ.), ಕನ್ನಡ ಸಾಹಿತ್ಯ ಸಂದರ್ಭ, ಪು. ೧೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

೩. ಎಸ್. ವಿದ್ಯಾಶಂಕರ (ಸಂ.), ಸಮಗ್ರ ವಚನ ಸಂಪುಟ–೭, ಪು. ೩೯೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೪. ಎಂ.ಎಂ. ಕಲಬುರ್ಗಿ (ಸಂ.), ಸಮಗ್ರ ವಚನ ಸಂಪುಟ–೬, ಪು. ೨೭೮, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೫. ಬಿ.ಕೆ. ಮಲ್ಲಾಪುರ (ಸಂ.), ಸಮಗ್ರ ವಚನ ಸಂಪುಟ–೩, ಪು. ೩೯೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೬. ಬಿ.ವಿ. ಮಲ್ಲಾಪುರ (ಸಂ.), ಸಮಗ್ರ ವಚನ ಸಂಪುಟ–೨, ಪು. ೧೬೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೭–೨೩. ಈ ವಿವರಗಳಿಗೆ ಎಂ. ಪ್ರಭುಸ್ವಾಮಿ ಮಠ ಅವರ 'ಬಸವಣ್ಣನವರ ವಚನಗಳ ಸಾಹಿತ್ಯಕ ಅಧ್ಯಯನ' ಕೃತಿಗೆ ಋಣಿಯಾಗಿದ್ದೇನೆ. ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬.

೨೪. ಎಲ್. ಬಸವರಾಜು (ಸಂ.), ಶಿವದಾಸ ಗೀತಾಂಜಲಿ, ಪು. ೧೭೫, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲ, ಮೈಸೂರು, ೧೯೬೬.

೨೫. ಅದೇ, ಪು. ೬೬.

೨೬. ಅದೇ, ಪು. ೧೪೩.

೨೭. ಅದೇ, ಪು. ೬೫.

೨೮. ಎಲ್. ಬಸವರಾಜು (ಸಂ.), ಅಕ್ಕನ ವಚನಗಳು, ಪು. ೯೬, ಗೀತಾ ಬುಕ್ ಹೌಸ್, ಮೈಸೂರು, ೧೯೯೦.

೨೯. ವೀರಣ್ಣ ರಾಜೂರ (ಸಂ.), ಸಮಗ್ರ ವಚನ ಸಂಪುಟ–೫, ಪು. ೪೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೩೦. ಎಂ.ಎಂ. ಕಲಬುರ್ಗಿ (ಸಂ.), ಸಮಗ್ರ ವಚನ ಸಂಪುಟ–೧, ಪು. ೧೫೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೩೧. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ (ಸಂ.), ಶಿಶುನಾಳ ಶರೀಫ ಸಾಹೇಬರ ಗೀತೆಗಳು, ಪು. ೨೫, ಕ್ಷಮಾ ಪ್ರಕಾಶನ, ಬೆಂಗಳೂರು, ೧೯೮೮.

೩೨. ಅದೇ, ಪು. ೫೯.

೩೩. ಅದೇ, ಪು. ೬೪.

೩೪–೩೯. ಈ ಉಲ್ಲೇಖನಗಳನ್ನು ಮೀನಾಕ್ಷಿ ಬಾಳಿ ಅವರ 'ಕಡಕೋಳ ಮಡಿವಾಳಪ್ಪನವರು ಮತ್ತು ಅವರ ಶಿಷ್ಯರು ಒಂದು ಅಧ್ಯಯನ', ಎಂಬ ಅಪ್ರಕಟಿತ ಕೃತಿಯಿಂದ ಸ್ವೀಕರಿಸಲಾಗಿದೆ.

*

ಭಾಷೆ – ಧರ್ಮ – ಪ್ರಭುತ್ವ : ಕನ್ನಡದ ಅವಸ್ಥಾಂತರ
(ಪ್ರಾಚೀನ ಕಾಲವನ್ನು ಅನುಲಕ್ಷಿಸಿ)

'ಕವಿರಾಜಮಾರ್ಗ'ದ ಕಾಲಕ್ಕೆ ಕನ್ನಡ ನಾಡು ಕಾವೇರಿಯಿಂದ ಗೋದಾವರಿಯ ವರೆಗೂ ಹಬ್ಬಿತ್ತು ಎಂಬ ಮಾತನ್ನು ಈಗಾಗಲೇ ದೃಢಪಡಿಸಲಾಗಿದೆ. ಹೀಗೆ ದೃಢಪಟ್ಟ ಅಂದಿನ ಉತ್ತರದ ಗಡಿ ದಕ್ಷಿಣಕ್ಕೆ ಸರಿದುದರ ಬಗೆಗೆ ಮರುಪ್ರಶ್ನೆ ಮೂಡುವುದು ಸಹಜ. ಈ ಹಿನ್ನೆಲೆಯಲ್ಲಿ ಸಂಸ್ಕೃತಿಯ ಮೂಲ ಧಾತುಗಳಾದ ಭಾಷೆ, ಧರ್ಮ ಮತ್ತು ಪ್ರಭುತ್ವಗಳ ಅಂತರ ಸಂಬಂಧೀ ನೆಲೆಯಲ್ಲಿ ಕನ್ನಡವು ಪಡೆದ ಅವಸ್ಥಾಂತರವನ್ನು ಪರಿಶೀಲಿಸಲಾಗುವುದು.

ಭಾಷೆ–ಧರ್ಮ ಮತ್ತು ಪ್ರಭುತ್ವಗಳ ನಡುವೆ ಪರಸ್ಪರ ಅವಿನಾಭಾವ ಸಂಬಂಧವಿದೆ. ಆದ್ದರಿಂದಲೇ ಒಂದರಲ್ಲಿ ಘಟಿಸುವ ಸ್ಥಿತ್ಯಂತರವು ಮತ್ತೊಂದರ ಮೇಲೆ ಪರಿಣಮಿಸುವುದು. ಈ ನೆಲೆಯಲ್ಲಿ ತನ್ನ ಸಂಸ್ಕೃತಿ ಮತ್ತೊಂದು ವಿನ್ಯಾಸವನ್ನು ಮೈತಾಳುತ್ತದೆ. ಈ ಹಿನ್ನೆಲೆಯಲ್ಲಿ ಗೋದಾವರಿಯ ಕನ್ನಡ ಗಡಿಯೂ ದಕ್ಷಿಣಕ್ಕೆ ಸರಿದಿದೆ.

ಕ್ರಿ.ಶ. ೯ನೆಯ ಶತಮಾನದ ಸರಿಸುಮಾರಿಗೆ ಕನ್ನಡ ಭಾಷೆ– ಸಾಹಿತ್ಯ ಮತ್ತು ಸಂಸ್ಕೃತಿಗಳು ವಿಶೇಷವಾಗಿ ಪಾರಲೌಕಿಕ ಜೀವನಕ್ಕೆ ಒತ್ತು ಕೊಟ್ಟಿದ್ದವು. ಅದೇ ಸಂದರ್ಭದಲ್ಲಿ ಸಂಸ್ಕೃತ – ಪ್ರಾಕೃತ ಮೂಲದಿಂದ ಕುಡಿಯೊಡೆದ ಮರಾಠಿ ಭಾಷೆಯು ವೈದಿಕ ಧರ್ಮದೊಂದಿಗೆ ಗುರುತಿಸಿಕೊಂಡಿತ್ತು. **"**ಶ್ರೌತ – ಸ್ಮಾರ್ತರ ಭೂಮಿಕೆಯ ಜೀವನ ದೃಷ್ಟಿಯ ಪ್ರಭಾವದಲ್ಲಿ**"**[೧] ಲೌಕಿಕ ಜೀವನಕ್ಕೆ ಹೆಚ್ಚು ಒತ್ತು ಕೊಡುತ್ತಾ ಮರಾಠಿ ಸಂಸ್ಕೃತಿ ರೂಪುಗೊಳ್ಳುತ್ತಿತ್ತು. ಆದ್ದರಿಂದ ಕನ್ನಡಿಗರಿಗಿಂತ ಹೆಚ್ಚಾಗಿ ಇವರಲ್ಲಿ ಸಾಮಾಜಿಕ ಜಾಗೃತಿ ಉಂಟಾಯಿತು. ಈ ಅಂಶವನ್ನು ಏಕನಾಥ, ರಾಮದಾಸ ಮೊದಲಾದವರ ಕೃತಿಗಳು ಸಾಬೀತುಪಡಿಸುತ್ತವೆಂಬ ಅಭಿಪ್ರಾಯವಿದೆ.

ಮರಾಠಿಯ ಆದಿಕವಿ (ಕೀರ್ತನಕಾರ) ಎಂದು ಹೇಳಬಹುದಾದ ಜ್ಞಾನೇಶ್ವರರಂತಹ ಪ್ರಭಾವಶಾಲಿ ವ್ಯಕ್ತಿಗಳು ಕ್ರಿ.ಶ. ೧೨ನೆಯ ಶತಮಾನದ ಹೊತ್ತಿಗೆ ಮರಾಠಿಗೆ ಬೆನ್ನು ಕಟ್ಟುತ್ತಾರೆ. ಇವರ ದಾರಿಯಲ್ಲಿ ಇನ್ನೂ ಅನೇಕ ಸಂತರು ಸಾಗುತ್ತಾರೆ. ಇವರು ಜನಸಮ್ಮುಖತೆಯನ್ನು ಪಡೆಯುತ್ತಾರೆ. ಆದ್ದರಿಂದ ಇವರ ಸುತ್ತಲೂ ಪ್ರಭಾ(ವ) ವಲಯವೂ ಏರ್ಪಡುತ್ತದೆ.

* ಈ ಚರ್ಚೆಯ ಕೆಲವು ವಿಚಾರಗಳು ಶಂಬಾ ಜೋಶಿಯವರ ಚಿಂತನೆಗಳನ್ನು ಆಧರಿಸಿದೆ.

ಹೀಗೆ ಜನಸಮ್ಮುಖತೆಯನ್ನು ಪಡೆದ ಮರಾಠಿ ವ್ಯಕ್ತಿಗಳ ಪ್ರಭಾವ ವಲಯಕ್ಕೆ ಗೋದಾವರಿ ಪ್ರದೇಶದ ಕನ್ನಡ ಜನರೂ ಸೇರುತ್ತಾರೆ.

ಭಾರತೀಯ ಸಂದರ್ಭದಲ್ಲಿ ಭಾಷೆ ಮತ್ತು ಜಾತಿ-ಧರ್ಮ - ಇವುಗಳ ಆಯ್ಕೆಯ ವಿಚಾರ ಬಂದಾಗ ಭಾರತೀಯರು ಆರಿಸುವುದು ತಮ್ಮ ಜಾತಿ- ಧರ್ಮಗಳನ್ನೆ ಹೊರತು ತಮ್ಮ ಭಾಷೆಯನ್ನಲ್ಲ. ಅದಕ್ಕೆ ಎರಡನೆಯ ಸ್ಥಾನ. ಈ ಹಿನ್ನೆಲೆಯಲ್ಲಿ ಗೋದಾವರಿ ಪರಿಸರದ ಕನ್ನಡ ಜನತೆ ಜ್ಞಾನೇಶ್ವರನಂತಹ ಮರಾಠಿ ಧಾರ್ಮಿಕರ ಪ್ರಭಾವಕ್ಕೆ ಈಡಾಗಿ ತನ್ನ ಭಾಷೆಯಾದ ಕನ್ನಡಕ್ಕೆ ಮಾರಕವಾದರು. ಆದ್ದರಿಂದ ಈ ಪ್ರದೇಶದಲ್ಲಿ ಕನ್ನಡದ ಸ್ಥಾನವನ್ನು ಮರಾಠಿ ಭಾಷೆಯು ಧಾರ್ಮಿಕತೆಯ ಹೆಸರಿನಲ್ಲಿ ಆಕ್ರಮಿಸಲಾರಂಭಿಸಿತು. ಹೀಗೆ ಮರಾಠಿಮಯವಾಗ ತೊಡಗಿದ ಕನ್ನಡದ ನೆಲದಲ್ಲಿ ವೈದಿಕ ಮತ್ತು ವೈದಿಕೇತರ ಸಂಸ್ಕೃತಿಗಳ ನಡುವಿನ ಸೌಮ್ಯ ರೂಪಿ ಸಂಘರ್ಷ ವ್ಯಕ್ತವಾಗುತ್ತದೆ. ಈ ನೆಲೆಯಲ್ಲಿ ಲೌಕಿಕ ದೃಷ್ಟಿಯನ್ನೊಳಗೊಂಡ ಸರಳ ವೈದಿಕ ಧರ್ಮದ ಪ್ರತಿಷ್ಠಾಪನೆಯೊಂದಿಗೆ, ಅದರ ಹೆಸರಿನಲ್ಲಿ ಮರಾಠಿ ಭಾಷೆಯೂ ಆ ನೆಲದ ಜನರ ಭಾಷೆಯಾಗತೊಡಗಿತು.

ಭಾಷೆ ಮತ್ತು ಧರ್ಮಗಳು ಒಂದಾದಾಗ ಅದರ ಪ್ರಭುತ್ವವು ಸಹ ಅದಕ್ಕೆ ಪೋಷಕವಾಗಿಯೇ ನಿಲ್ಲುತ್ತದೆ. ಈ ನಿಟ್ಟಿನಲ್ಲಿ ಆ ಪ್ರದೇಶದ ಕನ್ನಡ ಭಾಷೆಯನ್ನಾಡುವ ಸೇವುಣರು ಸಹ ಮರಾಠಿಯ ಬೆನ್ನು ಕಟ್ಟಿ ನಿಂತರು. ಇದು ಅವರ ಆಳ್ವಿಕೆಯ ಕೊನೆಯ ದಿನಗಳಾಗಿದ್ದವು.

ಭಾಷೆ-ಧರ್ಮ ಮತ್ತು ಸಿಂಹಾಸನ - ಇವುಗಳ ನಡುವೆ ಇವರ ಆಯ್ಕೆ ಸಿಂಹಾಸನವೇ ಆಗಿರುತ್ತದೆ. ಇದಕ್ಕೆ ಸೇವುಣರು ಸಹ ಹೊರತಲ್ಲ. ಆದ್ದರಿಂದಲೇ ಇವರ ಬಹುತೇಕ ಶಾಸನಗಳು ಕನ್ನಡದಲ್ಲಿದ್ದರೂ ತಮ್ಮ ಆಳ್ವಿಕೆಯ ಕೊನೆಯ ಕೆಲವು ಶಾಸನಗಳು ಮಾತ್ರ ಮರಾಠಿ ಭಾಷೆಯಲ್ಲಿರುವುದು ಮೇಲ್ಕಂಡ ಸತ್ಯವನ್ನೇ ಪೋಷಿಸುತ್ತದೆ.

ಅದುವರೆಗೂ ರಾಷ್ಟ್ರಕೂಟ, ಚಾಲುಕ್ಯ, ಕಲಚೂರಿ ಮೊದಲಾದ ರಾಜವಂಶಗಳಿಂದ ಆಳ್ವಿಕೆಗೊಳಪಟ್ಟಿದ್ದ ಕನ್ನಡ ನೆಲದಲ್ಲಿ ಆನಂತರ ಮರಾಠಿ ಭಾಷೆ- ಸಂಸ್ಕೃತಿಯು ಉತ್ಥಾನಗೊಳ್ಳುತ್ತದೆ. ಆದ್ದರಿಂದ ಕನ್ನಡಿಗರಾದ ಸೇವುಣರು ಕೂಡ ತಮ್ಮ ಅನನ್ಯತೆಯನ್ನು ಮುಂದೆ ಮರಾಠಿ ಸಂಸ್ಕೃತಿಯಲ್ಲಿಯೇ ಕಂಡುಕೊಳ್ಳಲು ಯತ್ನಿಸುತ್ತಾರೆ.

ಮರಾಠಿಯ ಅನನ್ಯತೆಯ ಮೂಲಕ ಪ್ರಕಟಗೊಳ್ಳುವ ಅಲ್ಲಿಯ ಪ್ರಭುತ್ವವು ಅದರ ಶತ್ರು ನೆಲೆಯಲ್ಲಿಯೂ ಮಹತ್ತರ ಬದಲಾವಣೆಗೆ ಕಾರಣವಾಗುತ್ತದೆ. ಅಂದಿನ ಕಾಲಕ್ಕೆ ಅವರ ಶತ್ರುಗಳಾಗಿದ್ದವರು ಜೈನಧರ್ಮೀಯರಾದ ಹೊಯ್ಸಳರು ಎಂಬುದು ಗಮನಾರ್ಹ.

'ಕವಿರಾಜಮಾರ್ಗ'ದ ಹಿಂದು - ಮುಂದಿನ ಶತಮಾನಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ಪ್ರಧಾನವಾಗಿ ಜೈನಧರ್ಮದೊಂದಿಗೆ ಗುರುತಿಸಿ ಕೊಂಡಿದ್ದವು. ಇದಕ್ಕೆ 'ಕವಿರಾಜಮಾರ್ಗ'ದಲ್ಲಿ ಉಲ್ಲೇಖಗೊಂಡಿರುವ ಮತ್ತು ಪಂಪಯುಗದ ಜೈನಕವಿಗಳೇ ಪುರಾವೆಗಳಾಗಿದ್ದಾರೆ. ಅದರಲ್ಲೂ ಜ್ಞಾನೇಶ್ವರ ಮತ್ತು

ಸೇವುಣರ ಆಳ್ವಿಕೆಯ ಕಾಲಕ್ಕೆ ಕನ್ನಡ ನಾಡಿನ ಒಂದು ಭಾಗವನ್ನಾಳುತ್ತಿದ್ದ ಹೊಯ್ಸಳರು ತಮ್ಮ ಅನನ್ಯತೆಯನ್ನು ಮುಖ್ಯವಾಗಿ ಜೈನಧರ್ಮ ಮತ್ತು ಕನ್ನಡ ಭಾಷೆಗಳ ಮೂಲಕ ಪ್ರಕಟಗೊಳಿಸಿದ್ದರು.

ಈ ಹಿನ್ನೆಲೆಯಲ್ಲಿ ಆ ಕಾಲಘಟ್ಟದ ಎರಡು ಪ್ರಭುತ್ವಗಳಾದ ಸೇವುಣ ಮತ್ತು ಹೊಯ್ಸಳರ ನಡುವಿನ ಸಂಘರ್ಷದಲ್ಲಿ ಭಾಷೆ ಮತ್ತು ಧರ್ಮಗಳೂ ನುಸುಳುತ್ತವೆ. ಹೀಗೆ ಪ್ರಭುತ್ವಗಳ ಮೇಲಾಟದಲ್ಲಿ ಇವೆರಡೂ ಕ್ರಿಯಾತ್ಮಕವಾದ್ದರಿಂದ ಎರಡೂ ಕಡೆಯ ಸಾಮ್ರಾಜ್ಯಶಾಹಿಗಳು ತಮ್ಮ ಸಿಂಹಾಸನಗಳನ್ನು ಕಾಯ್ದುಕೊಳ್ಳಲು ಅವನ್ನು ಬಂಡವಾಳವನ್ನಾಗಿ ಮಾಡಿಕೊಳ್ಳುತ್ತಾರೆ. ಇಂತಹ ಸಂಕೀರ್ಣ ಸನ್ನಿವೇಶದಲ್ಲಿ ಅಭಿನ್ನರೂಪಿ 'ಜೈನ–ಕನ್ನಡ'ಕ್ಕೆ ಪ್ರತಿಯಾಗಿ ವೈದಿಕಪರ ಮರಾಠಿ ಭಾಷೆ ತಲೆಯೆತ್ತಲಾರಂಭಿಸುತ್ತದೆ.

ಈ ಚರ್ಚೆಗೆ ಪೂರಕವಾಗಿ ಹೊಯ್ಸಳ ನೆಲದಲ್ಲಿಯೂ ಪುರಾವೆಗಳು ಒದಗುತ್ತವೆ. 'ಜೈನ–ಕನ್ನಡ'ರೆಂದು ಗುರುತಿಸಿಕೊಂಡ ಹೊಯ್ಸಳರು ತಮ್ಮ ಶಾಸನಗಳಲ್ಲಿ ಕನ್ನಡದ ಅನನ್ಯತೆಯನ್ನು ಹೆಚ್ಚು ಹೆಚ್ಚು ಪ್ರಕಟಗೊಳಿಸುತ್ತಾರೆ. 'ಕರ್ಣಾಟ ಸಿಂಹಾಸನಾಧೀಶ್ವರ' 'ಕರ್ಣಾಟ ರಾಜ ಮಾರ್ತಾಂಡ' ಮುಂತಾದ ರಾಜಸಂಬಂಧಿ ಬಿರುದುಗಳು ಇವರ ಕಾಲಕ್ಕೆ ವಿಶೇಷವಾಗಿ ಗೋಚರಿಸಲಾರಂಭಿಸುತ್ತವೆ. ಈ ನಿಟ್ಟಿನಲ್ಲಿ ಸಾಮಂತ, ದಂಡನಾಯಕ ಮೊದಲಾದವರು ಸಹ ತಮ್ಮ ಕನ್ನಡಾಭಿಮಾನದ ಬಿರುದಾಂಕಿತಗಳನ್ನು ಶಾಸನಗಳಲ್ಲಿ ಉಲ್ಲೇಖಿಸುತ್ತಾರೆ. 'ಕರ್ಣಾಟ ಕುಳಕಮಳ ಮಾರ್ತಾಂಡ ಹೆಗ್ಗಡೆ ಗೋವಿಂದಮಯ್ಯ', 'ಕರ್ಣಾಟ ವಂಶೋದ್ಭವಂ ಕರಂ ಒಪ್ಪಂ ಬಡಿದಿರ್ಪನ್ ಊರ್ಜಿತಂ ಯಶಂ ಶ್ರೀ ವಿಷ್ಣು ದಂಡಾಧಿಪಂ' – ಮೊದಲಾದವು ಅವುಗಳಲ್ಲಿ ಮುಖ್ಯವು.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಇಂತಹ ಭಾಷಾ ಅನನ್ಯತೆಯ ಬಿರುದುಗಳು ಮೂಡಲಾರಂಭಿಸಿ, ಕ್ರಮೇಣ ಅವು ಮುಂದಿನ ಪ್ರಭುತ್ವಗಳ ಆಳ್ವಿಕೆಯ ಕಾಲದಲ್ಲಿ ಹೆಚ್ಚಾದವು. (ಈ ಹಿನ್ನೆಲೆಯಲ್ಲಿ ಬಾದಾಮಿ ಚಾಲುಕ್ಯರ ಸೈನ್ಯಕ್ಕೆ 'ಕರ್ಣಾಟ ಬಲ' ಎಂದು ಹೆಸರಿದ್ದುದು; ಇಮ್ಮಡಿ ಪುಲಕೇಶಿಯ ಸೊಸೆ ವಿಜ್ಜಿಕಾಳು ತನ್ನನ್ನು 'ಕನ್ನಡೀ' ಎಂದು ಕರೆಸಿಕೊಳ್ಳುತ್ತಿದ್ದ ವಿವರಗಳನ್ನು ಪೋಷಕವಾಗಿ ಗಮನಿಸಬಹುದು.) ಇಂತಹ ಬಿರುದಾಂಕಿತಗಳು ಹೊಯ್ಸಳರ ಕಾಲಕ್ಕೆ ವಿಶೇಷ ಸಂಖ್ಯೆಯಲ್ಲಿ ಪ್ರಕಟವಾದವು.

ಮರಾಠಿಯರನ್ನಾಗಿ ಗುರುತಿಸಿಕೊಂಡ ಸೇವುಣರಿಗೆ ಶತ್ರು ನೆಲೆಯಲ್ಲಿ ನಿಂತು ಹೊಯ್ಸಳರು ತಮ್ಮನ್ನು 'ಕರ್ಣಾಟ'ರೆಂದು ಗುರುತಿಸಿಕೊಂಡದ್ದು ಸಹಜವೇ ಆಗಿದೆ. ಈ ಪ್ರಕ್ರಿಯೆಯಲ್ಲಿ ಕನ್ನಡದ ಭಾವುಕತೆಯನ್ನು ಸಹ ತಮ್ಮ ಸಿಂಹಾಸನದ ರಕ್ಷಣೆಗಾಗಿ, ಸಾಮ್ರಾಜ್ಯದ ವಿಸ್ತರಣೆಗಾಗಿ ಒಂದು ಪ್ರಬಲ ಅಸ್ತ್ರವನ್ನಾಗಿ ಮಾಡಿಕೊಂಡದ್ದು ಸಹ ವಿಶೇಷ ಸಂಗತಿಯಲ್ಲ.

ಧರ್ಮಗಳ ನಡುವೆ ಕಾಣಿಸಿಕೊಂಡ ವೈರುಧ್ಯಗಳು ಜನಸಾಮಾನ್ಯರನ್ನು ಎರಡು ಭಾಷಿಕ ಪ್ರಾಂತ್ಯಗಳಲ್ಲಿ ವಿಭಾಗಿಸಿದವು. ಈ ವಿಘಟನೆಯನ್ನು ಬಂಡವಾಳ ಮಾಡಿಕೊಂಡ ಅಂದಿನ ಕಾಲದ ಸಾಮ್ರಾಜ್ಯಶಾಹಿಗಳ ವಕ್ತಾರರಾದ ಸೇವುಣ – ಹೊಯ್ಸಳರು ಈ

ವೈರುಧ್ಯಗಳನ್ನು ಮೊದಲಿಗೆ ಧಾರ್ಮಿಕ ಹಾಗೂ ಆನಂತರದಲ್ಲಿ ಭಾಷಿಕ ಸಂಘರ್ಷದ ನೆಲೆಗೆ ಏರಿಸಿದರು.

ಸೌಮ್ಯ ನೆಲೆಯಲ್ಲಿ ಕಾಣಿಸಿಕೊಂಡ ಧಾರ್ಮಿಕ 'ವೈರುಧ್ಯ'ಗಳು ಪ್ರಭುತ್ವಗಳ ಪ್ರವೇಶದಿಂದ 'ಸಂಘರ್ಷ'ವಾಗಿ ಮಾರ್ಪಡುತ್ತವೆ. ಈ ಕಾಲದಲ್ಲಿ ಗೋದಾವರಿಯ ಕನ್ನಡ ನಾಡಿನ ಗಡಿ ಸ್ಪಷ್ಟವಾಗಿ ದಕ್ಷಿಣಕ್ಕೆ ಸರಿಯುತ್ತದೆ ಮತ್ತು ಕನ್ನಡಿಗರಲ್ಲಿ ತಮ್ಮ ನುಡಿಯ ಬಗೆಗಿನ ಅಭಿಮಾನವು ಉತ್ಸಾಹದ ನೆಲೆಯಲ್ಲಿ ಪ್ರಕಟಗೊಳ್ಳಲಾರಂಭಿಸುತ್ತದೆ.

ಈ ಕಾಲದಲ್ಲಿ ಕನ್ನಡಿಗರು ಕನ್ನಡಪರ ಜಾಗೃತಿಯನ್ನು ತಾಳದೇ ಇದ್ದಿದ್ದರೆ ಧರ್ಮದ ಹೆಸರಿನಲ್ಲಿ ಮರಾಠಿ ಪ್ರವಾಹವು ಹೊಯ್ಸಳರ ನಾಡಿಗೂ ನುಗ್ಗುತ್ತಿತ್ತು.

ಇದು 'ಕನ್ನಡ ಜನಪದ'ದ ಉತ್ತರದ ಗಡಿ ಚರ್ಚೆ.

'ಕವಿರಾಜಮಾರ್ಗ'ದ ಕಾಲಕ್ಕೆ ಕನ್ನಡ ದೇಶ ಇಂದಿನ ಆಂಧ್ರಪ್ರದೇಶದ ವೆಂಗಿನಾಡಿಗೂ (ವೆಂಗಿಪಟು) ಚಾಚಿತ್ತು ಎಂಬ ಸಂಗತಿ ಕನ್ನಡ ಶಾಸನ ಮತ್ತು ಸಾಹಿತ್ಯ ಕೃತಿಗಳಿಂದ ವಿದಿತವಾಗುತ್ತದೆ. ಪಂಪ, ನಾಗವರ್ಮ, ನಾರಾಯಣ ಭಟ್ಟ, ಪಾಲ್ಕುರಿಕೆ ಸೋಮನಾಥ ಮೊದಲಾದ ಅನೇಕ ಕನ್ನಡ ಕವಿ- ಪಂಡಿತರ ಜನ್ಮಭೂಮಿ ಇದೇ ಆಗಿತ್ತು. ಈ ಪ್ರದೇಶದಲ್ಲಿ ಜೈನಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅದರಲ್ಲಿ ಕನ್ನಡದ ಜೈನ ಸಾಹಿತ್ಯವೂ ಹಾಸುಹೊಕ್ಕಾಗಿತ್ತು. ಈ ಕಾಲಘಟ್ಟದಲ್ಲಿ ಇದು ಅಚ್ಚಗನ್ನಡ ಪ್ರದೇಶವಾಗಿದ್ದರೂ ತೆಲುಗು ನಾಡಿನ ಗಡಿಪ್ರದೇಶವು ಸಮೀಪವೇ ಇತ್ತು. ಆದ್ದರಿಂದ ವಿಭಿನ್ನ ಭಾಷೆ ಮತ್ತು ಧರ್ಮಗಳ ಅನುಸಂಧಾನ ಅಥವಾ ಸಂಘರ್ಷ ಅಥವಾ ಎರಡೂ ಒಟ್ಟಿಗೆ ಇಂತಹ ನೆಲದಲ್ಲಿ ಸಹಜವಾಗಿಯೇ ಪರಿಣಮಿಸುತ್ತದೆ. ಈ ಹಿನ್ನೆಲೆಯಲ್ಲಿ ತೆಲುಗು ಕಾವ್ಯ ಇಲ್ಲಿ ಅತ್ಯಂತ ಪ್ರಾಥಮಿಕ ಭಾಷಿಕ ಸ್ಥಿತಿಯಲ್ಲಿ ರಚನೆಯಾಗುತ್ತದೆ.

ಕ್ರಿ.ಶ. ೧೦೪೦ರ ತೆಲುಗಿನ ಆದಿ ಕವಿಯಾದ ನನ್ನಯಭಟ್ಟನು ಈ ಪ್ರದೇಶದವನು. ಇವನು ಬ್ರಾಹ್ಮಣನಾಗಿದ್ದು, ತನ್ನ ಪ್ರದೇಶದಲ್ಲಿ ಜೈನಧರ್ಮದ ಪ್ರಭಾವವನ್ನು ತಗ್ಗಿಸಲು ವೈದಿಕಮಾರ್ಗಾನುಯಾಯಿಯಾದ ಭಾರತ ಕಾವ್ಯವನ್ನು ಬರೆಯುತ್ತಾನೆ. ಇದನ್ನು ಹಲವು ತೆಲುಗು- ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಅದರಲ್ಲಿ (Telugu Literature) ಎಂಬ ಕೃತಿಯ ಮುನ್ನುಡಿಯಲ್ಲಿ ಸಿ.ಆರ್.ರೆಡ್ಡಿ ಅವರು ಹೇಳುವ ಮಾತು ಹೆಚ್ಚು ಗಮನಾರ್ಹವಾದದ್ದು. ಅದು ಹೀಗಿದೆ "ಜೈನಮತದ ವಿಚಾರಗಳಿಂದ ಜನರ ಮನಸ್ಸನ್ನು ವೈದಿಕ ಧರ್ಮದ ಕಡೆಗೆ ಒಲಿಸಿಕೊಳ್ಳುವುದಕ್ಕಾಗಿ ನಾರಾಯಣಭಟ್ಟರೆ ಮೊದಲಾದವರು ತೆಲುಗಿನಲ್ಲಿ ಗ್ರಂಥ ರಚನೆಗೆ ಆರಂಭಿಸಿದರು."

ವೈದಿಕ ಧರ್ಮಾನುಯಾಯಿಯಾದ ಕಾವ್ಯವನ್ನು ರಚನೆ ಮಾಡಿದ ನನ್ನಯನು ಕನ್ನಡದ ನೆಲದವನಾಗಿರುವುದರಿಂದ ಕನ್ನಡ ಭಾಷೆಯಲ್ಲಿಯೇ ಕಾವ್ಯವನ್ನು ಬರೆಯಬಹುದಿತ್ತು. ಆದರೆ ತೆಲುಗಿನಲ್ಲಿ ಬರೆದ! ಇದಕ್ಕೆ ಕಾರಣ, ಅಂದು ಕನ್ನಡ ಮತ್ತು ಜೈನಧರ್ಮಗಳು ಅಭಿನ್ನ ರೂಪಿಯಾಗಿದ್ದವು. ಆದ್ದರಿಂದ ಜೈನಧರ್ಮದ

ಅನನ್ಯತೆಯು ಕನ್ನಡದ ಮೂಲಕ ಅಲ್ಲಿ ಪ್ರಕಟವಾಗುತ್ತಿದ್ದುದರಿಂದ, ಅಂತಹ ಧರ್ಮಕ್ಕೆ ಪ್ರತಿರೋಧವಾಗಿ ಮತ್ತೊಂದು ಧರ್ಮವನ್ನು ಪ್ರತಿಷ್ಠಾಪಿಸುವಾಗ ಸಹಜವಾಗಿಯೇ ಭಿನ್ನ ಭಾಷೆಯನ್ನು ಬಳಸಿದನು. ಇದು ಅವನಿಗೆ ಪರಿಚಿತವಿದ್ದ ಹಾಗೂ ಆ ಗಡೀ ಸೀಮೆಯಲ್ಲಿ ಅಂಕುರಿಸುತ್ತಿದ್ದ ತೆಲುಗು ಭಾಷೆಯೇ ಆಗಿರುವುದು ಸಹ ಸಹಜವೇ ಆಗಿದೆ. ಇಂತಹ ಭಾಷೆಯನ್ನು ಕಾವ್ಯಕ್ಕೆ ಒಗ್ಗಿಸುವಾಗ ವಿಶೇಷವಾಗಿ ಸಂಸ್ಕೃತ ಪದ ಸಂಪತ್ತಿಯನ್ನೇ ಎರಕ ಹೊಯ್ಯುತ್ತಾನೆ. ಇದಕ್ಕೆ ಕಾರಣ, ಅಂದು ತೆಲುಗು ಭಾಷೆಯು ಮಹಾಕಾವ್ಯಕ್ಕೆ ಯಾವುದೇ ಪೂರ್ವ ಕವಿಗಳಿಂದ ಸಿದ್ಧಗೊಂಡಿರಲಿಲ್ಲ. ಆದ್ದರಿಂದ ದೇಸಿಗೌಣವಾದ ಈ ಕಾವ್ಯವು ಅನೇಕ ಎಡೆಗಳಲ್ಲಿ ಪೂರ್ಣ ಸಂಸ್ಕೃತ ಕಾವ್ಯವೇ ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ ಎಂಬ ಅಭಿಪ್ರಾಯವಿದೆ.

ಮಹಾಕಾವ್ಯಕ್ಕೆ ಸಿದ್ಧಗೊಂಡಿರದ ಅಥವ ಅದನ್ನು ಆ ರೀತಿಯಲ್ಲಿ ಬಳಸುವುದೇ ಮುಖ್ಯ ಧ್ಯೇಯವಾಗಿರದ ನನ್ನಯನಿಗೆ ತನ್ನ ಕಾವ್ಯ ನಿರ್ಮಿತಿಯಲ್ಲಿ ಅನೇಕ ತೊಡರುಗಳು ಸಂಭವಿಸಿವೆ. ಅಂತಹ ಎಡೆಗಳಲ್ಲಿ ನೆರವಾದವನು ಕನ್ನಡದ ಪಂಡಿತ ನಾರಾಯಣ ಭಟ್ಟ. ಅವನೇ ಹೇಳುವಂತೆ–

> "ನರನಕು ನಾರಾಯಣನು ವೆಲೆ, ನಾಕು ಈ ಭಾರತ ರಚನಲೊ
> ನಾರಾಯಣಭಟ್ಟು ಸಹಕಾರಮುಲನಂದಿನಾಡು"

ಅಂದರೆ ಯುದ್ಧದಲ್ಲಿ ಅರ್ಜುನನಿಗೆ ನಾರಾಯಣ ಹೇಗೆ ಸಹಾಯ ಮಾಡಿದನೊ ಹಾಗೆ ನನಗೆ ಈ ಭಾರತರಚನೆಯಲ್ಲಿ ನಾರಾಯಣಭಟ್ಟ ಸಹಾಯ ಮಾಡಿದ್ದಾನೆ.

ಕನ್ನಡದ ನೆಲದಲ್ಲಿ ಜೈನಧರ್ಮದ ಪ್ರಭಾವವನ್ನು ತಗ್ಗಿಸುವ ನಿಟ್ಟಿನಲ್ಲಿ ಕನ್ನಡದ ನಾರಾಯಣ ಭಟ್ಟ ಮತ್ತು ತೆಲುಗಿನ ನನ್ನಯಭಟ್ಟ – ಇಬ್ಬರೂ ಒಂದಾಗುತ್ತಾರೆ. ಇಬ್ಬರೂ ಒಂದೇ ಧರ್ಮದ ಭಿನ್ನ ಭಾಷಿಕರು. ಆದರೂ ಸಂಸ್ಕೃತಪರರು. ಆದರೆ ವೈದಿಕ ಧರ್ಮದ ವಕ್ತಾರರಾದ ಇವರಿಗೆ ಭಾಷೆಗಳಿಗಿಂತ ತಮ್ಮ ಧರ್ಮವೇ ಅತ್ಯಂತ ಮುಖ್ಯ. ಆದ್ದರಿಂದ ನನ್ನಯ ತನ್ನ ಪ್ರದೇಶದಲ್ಲಿ ಜೈನ ಸಾಹಿತ್ಯ ಮತ್ತು ಧರ್ಮದ ಪ್ರಭಾವಕ್ಕೆ ಎದುರಾಗಿ ವೈದಿಕ ಧರ್ಮವನ್ನು ತರಬೇಕೆಂಬ ಅಚಲ ನಿಷ್ಠೆಯಿಂದ ತೆಲುಗು ವೈದಿಕ ಕಾವ್ಯ ಬರೆಯಲು ಮುಂದಾದರೆ, ಅದಕ್ಕೆ ಕನ್ನಡದ ನಾರಾಯಣ ಭಟ್ಟನು ಕನ್ನಡಾಭಿಮಾನವನ್ನು ಕಿಂಚಿತ್ತೂ ಸೋಕಿಸಿಕೊಳ್ಳದೆ ಅವನ ಬೆನ್ನಿಗೆ ನಿಂತನು.

ಕನ್ನಡ ನೆಲದಲ್ಲಿ ಮೊದಲಿಗೆ ಕನ್ನಡಿಗನೊಬ್ಬನ ಸಹಕಾರದಿಂದ ತೆಲುಗು ಕಾವ್ಯ ರಚನೆಯಾದದ್ದು ಧರ್ಮ ಸಂಘರ್ಷದಲ್ಲಿಯೇ ವಿನಃ ಭಾಷಾ ಜಗಳದಲ್ಲಿ ಅಲ್ಲ. ಕಾರಣ, ಹಿಂದೆ ಹೇಳಿದಂತೆ ನಮ್ಮ ಚರಿತ್ರೆಯಲ್ಲಿ ಜಾತಿ–ಧರ್ಮಗಳಿಗಾಗಿ ಬಡಿದಾಡಿ ಸತ್ತ ನಿದರ್ಶನಗಳಿವೆಯೇ ವಿನಃ ಭಾಷೆಗಾಗಿ ಸತ್ತ ಒಂದೂ ನಿದರ್ಶನ ಸಿಗುವುದಿಲ್ಲ. (ಕರ್ನಾಟಕದ ನವ ವಸಾಹತು ಕಾಲದ ಕೆಲವೊಂದು ಘಟನೆಗಳನ್ನು ಹೊರತುಪಡಿಸಿ).

ತೆಲುಗು ಕಾವ್ಯದ ಆರಂಭವು ಧರ್ಮ ಸಂಘರ್ಷದಿಂದ ಸಂಭವಿಸುವಾಗ ಸಂಸ್ಕೃತದ ಬಗೆಗಿನ ತೀವ್ರ ಒಲವು ಮತ್ತು ತೆಲುಗು ಭಾಷೆಯ ಬಗೆಗಿನ ಸಾಧಾರಣ ಅಭಿಮಾನವೂ ವ್ಯಕ್ತಗೊಳ್ಳುತ್ತದೆ.

ಕಾಲಕ್ರಮೇಣ ಈ ಪ್ರದೇಶದಲ್ಲಿ ಜೈನಧರ್ಮದ ಪ್ರಭಾವವು ಇಳಿಮುಖವಾಗುತ್ತಾ ಸಾಗುತ್ತದೆ. ಇದರೊಂದಿಗೆ ಕನ್ನಡವೂ ಅನಾಥವಾಗುತ್ತದೆ; ತೆಲುಗು ಗರಿಗೆದರಲಾರಂಭಿಸುತ್ತದೆ.

'ಕವಿರಾಜಮಾರ್ಗ' ಕಾಲದ ಕನ್ನಡ ನಾಡಿನ ಗಡಿರೇಖೆಯು ಪೂರ್ವ ದಿಕ್ಕಿನಿಂದ ಪಶ್ಚಿಮಕ್ಕೆ ಸರಿಯುತ್ತದೆ.

ಅಡಿಟಿಪ್ಪಣಿಗಳು

೧. ಶಂ.ಬಾ. ಜೋಶಿ (ಸಂ.), ಕನ್ನಡ ಸಂಸ್ಕೃತಿಯ ಪೂರ್ವ ಪೀಠಿಕೆ, ಭಾಗ. ೧, ಪು. ೪೭೦, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೭.

೨. ಶಂ.ಬಾ. ಜೋಶಿ (ಸಂ.), ಕಣ್ಮರೆಯಾದ ಕನ್ನಡ, ಪು. ೮೦, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೧೯೮೮.

*

ಡಾ. ಕಾ. ವೆಂ. ಶ್ರೀನಿವಾಸಮೂರ್ತಿ

ಎಂ.ಎ.(ಕನ್ನಡ), ಎಂ.ಎ.(ಭಾಷಾವಿಜ್ಞಾನ), ಎಂ.ಎ.(ಇಂಗ್ಲಿಷ್), ಪಿಎಚ್.ಡಿ.(ಕನ್ನಡ)
ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ
ಕೋಲಾರ-563101. kaavem@gmail.com. ಮೊ: 9343878368
ವೆಬ್‌ಸೈಟ್:www.kavemsri.com

ವಿಮರ್ಶೆ, ವೈಚಾರಿಕ, ಅಧ್ಯಯನ ಕೃತಿಗಳು

ಮೌನ ಮಾತಾದಾಗ(೧೯೯೭), ಕನ್ನಡಪರ ಚಿಂತನೆ ಮತ್ತು ಪರಂಪರೆ (೨೦೦೦), ನೆಲದ ಕಣ್ಣು (೨೦೦೧), ಕನ್ನಡ ರಂಗಭೂಮಿ (೨೦೦೫), ಕನ್ನಡ ಚಳುವಳಿ ಮತ್ತು ಚಿಂತನೆ (೨೦೦೬), ಉರಿಯ ಪೇಟೆ (೨೦೦೯), ಕನ್ನಡ ಸಾಹಿತ್ಯ: ತತ್ವ ಮತ್ತು ವಿಮರ್ಶೆ (೨೦೧೦), ದಲಿತತ್ವ: ಅಕ್ಷರವಾಗದ ಆತ್ಮಕಥಾನಕ(೨೦೧೦), ಭಾಷೆ ಮತ್ತು ಜಾನಪದ(೨೦೧೧), ಬರೆದಂತೆ ಹರಿದ ಚಿತ್ತ (೨೦೧೨), ಕುವೆಂಪು ನಾಟಕಗಳು ಮತ್ತು ಸಮಕಾಲೀನತೆ (೨೦೧೩), ರಂಗ ಸಂವಾದ (೨೦೧೩)

ಕವಿತೆ, ಭಾವಗೀತೆಗಳ ಸಂಕಲನಗಳು

ಕಾವ್ಯ ಕೋಗಿಲೆ (೧೯೯೦), ಚಂದ್ರತಾರೆ ಊರಿನಲ್ಲಿ (೧೯೯೦), ಬದುಕು ನಿತ್ಯ ಶ್ರಾವಣ (೧೯೯೨), ಅಭಿಮಾನದ ಹಣತೆ (೧೯೯೮), ಮಣ್ಣಿನ ದೋಣಿ (೧೯೯೮), ಗೂಡು ಕಟ್ಟಿದ ಹಕ್ಕಿ (೨೦೧೧)

ವಿಚಾರ-ವಿಮರ್ಶೆ, ಕವಿತೆಗಳ ಸಂಪಾದಿತ ಕೃತಿಗಳು

ಕನ್ನಡ ಭೇರಿ(೧೯೯೩), ಅಭಿರಾಮ(೧೯೯೭), ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ (೧೯೯೮), ಬಂಡಾಯ:ಕಾಲು ಶತಮಾನ(೨೦೦೬), ಹೋರಾಟದ ನೂರು ಹಾಡುಗಳು (೨೦೧೧), ಶಿಶುನಾಳ ಶರೀಫ ಮತ್ತು ಇತರೆ ಅನುಭಾವಿಗಳು(೨೦೧೧), ಕೋಮು ಸೌಹಾರ್ದತೆ ಮತ್ತು ಸಮಕಾಲೀನತೆ(೨೦೧೧), ವಿಚಾರ ಸಾಹಿತ್ಯ: ೧೯೭೦-೨೦೧೦: ಪ್ರಾತಿನಿಧಿಕ ಸಂಪುಟ(೨೦೧೧), ಕೋಮು ಸೌಹಾರ್ದತೆ ಮತ್ತು ಪರಂಪರೆ (೨೦೧೨), ಕೋಮು ಸಾಮರಸ್ಯ: ಶತಮಾನಗಳ ಕಾವ್ಯಸಾಕ್ಷಿ (೨೦೧೩), ಮನುಷ್ಯ ಜಾತಿ ತಾನೊಂದೆ ವಲಂ (೨೦೧೩)

ಭಾವಗೀತೆಗಳ ಧ್ವನಿಸುರುಳಿ / ಸಿ.ಡಿ.ಗಳು

ಕಾವ್ಯ ಕೋಗಿಲೆ (೧೯೯೦), ಬದುಕು ನಿತ್ಯ ಶ್ರಾವಣ (೧೯೯೨), ಈ ಮೌನವೇಕೆ? (೨೦೧೧), ನಗುತಿರು ಎಂದೆಂದು(೨೦೧೧), ಅಭಿಮಾನದ ಹಣತೆ (೨೦೧೧), ಹಳದಿ ಕೆಂಪಿನ ಹಾಡು(೨೦೧೧), ಕನ್ನಡ ಎಂದರೆ ಬರಿ ನುಡಿ ಅಲ್ಲ(೨೦೧೧), ಮತ್ತೆ ಕಾವ್ಯ ಕೋಗಿಲೆ(೨೦೧೧), ಗೂಡು ಕಟ್ಟಿದ ಹಕ್ಕಿ(೨೦೧೧), ನೀನೇ ನನ್ನ ಕಣ್ಣು (೨೦೧೩), ಭಾವದ ಬೆನ್ನೇರಿ (೨೦೧೩), ಜಾಗೃತಿ ಗೀತೆಗಳು (೨೦೧೩)

ಪ್ರಶಸ್ತಿಗಳು

'ಕನ್ನಡಪರ ಚಿಂತನೆ ಮತ್ತು ಪರಂಪರೆ' ಕೃತಿಗೆ –ರಾಮಜಾಧವ ಪ್ರಶಸ್ತಿ (೨೦೦೦), 'ದಲಿತತ್ವ : ಅಕ್ಷರವಾಗದ ಆತ್ಮಕಥಾನಕ' ಕೃತಿಗೆ ಡಾ.ಎಲ್.ಬಸವರಾಜು ಅಮೃತ ಸಾಹಿತ್ಯ ಸಮ್ಮೇಳನ ಪ್ರಶಸ್ತಿ (೨೦೧೧) ಮತ್ತು ದಲಿತ ಸಾಹಿತ್ಯ ಪರಿಷತ್ತಿನ ಪುಸ್ತಕ ಪ್ರಶಸ್ತಿ (೨೦೧೧), ಕೆಂಪೇಗೌಡ ಪ್ರಶಸ್ತಿ (೨೦೧೧).

*